ಸಂಪುಟ: 21, ಸಂಚಿಕೆ: 163, ಪುಟಗಳು: 8, ಶುಕ್ರವಾರ, 22 ಮಾರ್ಚ್ 2024 RNI NO. KARKAN/2002/08054
epaper: www.sanjemugilu.com



ವೇಣು ಸಾರಥ್ಯದಲ್ಲಿ...

ಸುದ್ದಿಗಳ ಹೊನಲು
# ಸಂಜೆ ಮುಗಿಲು
ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ
ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ

## ಐಪಿಎಲ್ ಬೆಟ್ಟಿಂಗ್; ಖಾಕಿ ಅಲರ್ಟ್



**ಬೆಂಗಳೂರು:** ಇಂದಿನಿಂದ ಐಪಿಎಲ್ ಆರಂಭವಾತ್ತಿರುವ ಹಿನ್ನೆಲೆ ಭಾರೀ ಪ್ರಮಾಣದ ಬೆಟ್ಟಿಂಗ್ ನಡೆಯೋ ಬಗ್ಗೆ ರಾಜ್ಯ ಗುಪ್ತಚರ ಇಲಾಖೆ ಪೊಲೀಸ್ ಕಮಿಷನರ್ ದಯಾನಂದ್ ಅವರಿಗೆ ಮಾಹಿತಿ ರವಾನಿಸಿದೆ. ಈ ಹಿನ್ನೆಲೆಯಲ್ಲಿ ಡಿಸಿಪಿಗಳಿಗೆ ಅಲರ್ಟ್ ಆಗಿರುವಂತೆ ಕಮಿಷನರ್ ಸೂಚಿಸಿದ್ದಾರೆ. ನಗರದಾದ್ಯಂತ, ಆಯಾ ಠಾಣಾ ವ್ಯಾಪ್ತಿಯಲ್ಲಿನ ಬುಕ್ಕಿಗಳ ಮೇಲೆ ತೀವ್ರ ನಿಗಾ ಇಡಬೇಕು. ಈ ಹಿಂದೆ ಬೆಟ್ಟಿಂಗ್ ಕೇಸ್‌ನಲ್ಲಿ ಅರೆಸ್ಟ್ ಆಗಿ ಜಾಮೀನಿನ ಮೇಲೆ ಬಂದಿರುವವರ ಮೇಲೂ ತೀವ್ರ ನಿಗಾ ವಹಿಸಬೇಕು. ಪುಟ 2

## ರಾಜ್ಯದಲ್ಲಿ ಇಂದಿನಿಂದ 3 ದಿನ ಮಳೆ



**ಬೆಂಗಳೂರು:** ರಾಜ್ಯದಲ್ಲಿ ಇಂದಿನಿಂದ 3 ದಿನಗಳ ಕಾಲ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಮುಂದಿನ ನಾಲ್ಕು ದಿನಗಳಲ್ಲಿ ಕರಾವಳಿ, ಮಲೆನಾಡು ಮತ್ತು ದಕ್ಷಿಣ ಒಳನಾಡಿನಲ್ಲಿ ಸಣ್ಣ ಪ್ರಮಾಣದ ಮಳೆಯಾಗಲಿದೆ ಎಂದು ರಾಜ್ಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬೆಳಗಾವಿ, ಬೀದರ್, ಬಾಗಲಕೋಟೆ, ಗುಲ್ಬರ್ಗ, ರಾಯಚೂರು ಜಿಲ್ಲೆಗಳಲ್ಲಿ ಬಿಸಿಲು ಹೆಚ್ಚಾದ ಕಾರಣ ಮಳೆ ಬೀಳುವ ಸಾಧ್ಯತೆಯಿದೆ. ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರಿನಲ್ಲಿ ಮಳೆಯಾಗಲಿದೆ. ಚಿಕ್ಕಬಳ್ಳಾಪುರ, ಚಾಮರಾಜನಗರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮಂಡ್ಯ, ಶಿವಮೊಗ್ಗ ಜಿಲ್ಲೆಗಳಲ್ಲಿ ಗುಡುಗು ಮಿಂಚು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

### ಸುಭಾಷಿತ

ಸ್ವಲ್ಪ ಉಳ್ಳವನು ಬಡವನಲ್ಲ;
ಇನ್ನೂ ಬೇಕೆನ್ನುವವನು ಬಡವ

। ಸೆಬೇಕಾ

### ಪಂಚಾಂಗ

(ಶುಕ್ರವಾರ 22, ಮಾರ್ಚ್ -2024)

- ಶ್ರೀ ಶೋಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು,
- ಫಾಲ್ಗುಣ ಮಾಸ, ಶುಕ್ಲ ಪಕ್ಷ, ತ್ರಯೋದಶಿ,
- ಶುಕ್ರವಾರ, ಮಖ ನಕ್ಷತ್ರ.
- ರಾಹುಕಾಲ 10:59 ರಿಂದ 12:30
- ಗುಳಿಕಕಾಲ 07:57 ರಿಂದ 09:28
- ಯಮಗಂಡಕಾಲ 03:32 ರಿಂದ 05:03

# ಜೈಲಲ್ಲೇ ಸಿಎಂ ಕೆಲಸ?



## ಅರವಿಂದ್ ಕೇಜ್ರಿವಾಲ್ ಉತ್ತರಾಧಿಕಾರಿ ಯಾರು

## ಪತ್ನಿ ಸುನೀತಾಗೆ ಮುಖ್ಯಮಂತ್ರಿ ಸ್ಥಾನ?

## ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಬಂಧನ



**ದೆಹಲಿ:** ದೆಹಲಿ ಮದ್ಯ ನೀತಿ ಹಗರಣದಲ್ಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಬಂಧನವಾಗಿದೆ. ಇದರ ಬೆನ್ನಲ್ಲೇ ಅರವಿಂದ್ ಕೇಜ್ರಿವಾಲ್ ನಂತರ ದೆಹಲಿ ಆಡಳಿತ ಚುಕ್ಕಾಣಿ ಹಿಡಿಯುವವರು ಯಾರು? ಎಂಬ ಬಗ್ಗೆ ಎಎಪಿ ಮತ್ತು ಹೊರಗೆ ಚರ್ಚೆಯ ವಿಷಯವಾಗಿದೆ. ಅಬಕಾರಿ ನೀತಿ ಹಗರಣ ಪ್ರಕರಣದಲ್ಲಿ 9 ನೇ ಸಮನ್ಸ್‌ಗೆ ಹಾಜರಾಗಲು ವಿಫಲವಾದ ನಂತರ ಗುರುವಾರ ಇಡಿಯಿಂದ ಮುಖ್ಯಮಂತ್ರಿಯನ್ನು ಬಂಧಿಸಲಾಯಿತು. ಪ್ರಕರಣದಲ್ಲಿ ಎಎಪಿಯ ಇಬ್ಬರು ಪ್ರಮುಖರಾದ ಮನೀಶ್ ಸಿಸೋಡಿಯಾ ಮತ್ತು ಸಂಜಯ್ ಸಿಂಗ್ ಅವರನ್ನು ಇಡಿ ಈಗಾಗಲೇ ಬಂಧಿಸಿದೆ. ಕೇಜ್ರಿವಾಲ್ ಅವರ ಉತ್ತರಾಧಿಕಾರಿಯ ರೇಸ್‌ನಲ್ಲಿ ಹಲವಾರು ನಾಯಕರು ಇದ್ದಾರೆ ಎಂಬ ಗುಸುಗುಸು ಕೇಳಿ ಬರುತ್ತಿದೆ. ಪುಟ 2

## ಸಂಕ್ಷಿಪ್ತ ಸುದ್ದಿ

### ಸೋನುಗೌಡ ಅರೆಸ್ಟ್



ಬೆಂಗಳೂರು: 'ಬಿಗ್ ಬಾಸ್ ಕನ್ನಡ ಒಟಿಟಿ' ಸೀಸನ್ ಮೂಲಕ ಫೇಮಸ್ ಆದ ಸೋನು ಶ್ರೀನಿವಾಸ್ ಗೌಡ ಅವರು ಅರೆಸ್ಟ್ ಆಗಿದ್ದಾರೆ. ಈ ವಿಚಾರ ಸೆನ್ಸೇಷನ್ ಸೃಷ್ಟಿ ಮಾಡಿದೆ. ಹಾಗಾದರೆ ಅವರು ಬಂಧನಕ್ಕೆ ಒಳಗಾಗೋಕೆ ಕಾರಣ ಏನು ಅದಕ್ಕೆ ಉತ್ತರ ಕೇಳಿದ್ರೆ, ನಿಮಗೆ ಶಾಕ್ ಆಗೋದು ಗ್ಯಾರಂಟಿ. ಕಾನೂನು ಬಾಹಿರವಾಗಿ ಅವರು ಮಗುವನ್ನು ದತ್ತು ಪಡೆದಿದ್ದಾರೆ. ಈ ಆರೋಪದ ಮೇಲೆ ಅವರನ್ನು ಬಂಧಿಸಲಾಗಿದೆ. ಇತ್ತೀಚೆಗೆ ಮಗುವಿನ ಫೋಟೋವನ್ನು ಅವರು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದರು. ಪುಟ 2

### ಜ್ಯೋತಿರಾಜ್‌ಗೆ ವಾರ್ನಿಂಗ್

ರಾಮನಗರ: ಅನುಮತಿ ಪಡೆಯದೆ ರಾಮನಗರದ ಹಂದಿಗುಂದಿ ಬೆಟ್ಟವನ್ನು ಹತ್ತಲು ಯತ್ನಿಸಿದ ಜ್ಯೋತಿರಾಜ್‌ನನ್ನು ಅರಣ್ಯ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಹಂದಿಗುಂದಿ ಬೆಟ್ಟ ಹತ್ತಲು ಅನುಮತಿ ನೀಡುವಂತೆ ಕೆಲ ದಿನಗಳ ಹಿಂದೆ ಜ್ಯೋತಿರಾಜ್ ಅರಣ್ಯ ಇಲಾಖೆಯನ್ನು ಕೋರಿದ್ದರು. ಇದಕ್ಕೆ ಇಲಾಖೆ ಸುರಕ್ಷತೆಯ ದೃಷ್ಟಿಯಿಂದ ಮೊದಲು ಪೊಲೀಸ್ ಮತ್ತು ಅಗ್ನಿಶಾಮಕ ಇಲಾಖೆಯ ಅನುಮತಿ



ಸಹ ಪಡೆಯುವಂತೆ ಎಂದು ಸಲಹೆ ನೀಡಿತ್ತು. ಇದ್ಯಾವುದನ್ನು ಲೆಕ್ಕಿಸದೆ ಏಕಾಂಗಿಯಾಗಿ ಬೆಟ್ಟ ಹತ್ತಲು ಮುಂದಾಗಿದ್ದಾರೆ. ಇದನ್ನು ಗಮನಿಸಿದ ಸ್ಥಳೀಯರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರು. ಅಧಿಕಾರಿಗಳು ಸ್ಥಳಕ್ಕೆ ಬರುವ ವೇಳೆಗೆ ಜ್ಯೋತಿರಾಜ್ 560 ಮೀಟರ್ ಎತ್ತರದ ಹಂದಿಗುಂದಿ ಬೆಟ್ಟವನ್ನು ಮುಕ್ಕಾಲುಭಾಗ ಹತ್ತಿದ್ದರು. ಈ ವೇಳೆ ಅಧಿಕಾರಿಗಳು ಕರೆ ಮಾಡಿ ಇಳಿಯುವಂತೆ ಸೂಚಿಸಿದ್ದಾರೆ. ಇದಕ್ಕೆ ಜ್ಯೋತಿರಾಜ್ ಬೆಟ್ಟವನ್ನು ಸಂಪೂರ್ಣವಾಗಿ ಹತ್ತಿ ಇಳಿಯುದಾಗಿ ಹೇಳಿದ್ದಾರೆ. ಬೆಟ್ಟ ಹತ್ತಿ ಇಳಿದ ನಂತರ ಅಧಿಕಾರಿಗಳು ಮುಚ್ಚಳಿಕೆ ಪತ್ರ ಬರೆಯಿಸಿಕೊಂಡು ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ ಎನ್ನಲಾಗಿದೆ. ಇನ್ನು ಬೆಟ್ಟ ಹತ್ತುವಾಗ ಮೊಬೈಲ್‌ನಲ್ಲಿ ಜ್ಯೋತಿರಾಜ್ ಸೆರೆ ಹಿಡಿದಿದ್ದ ಫೋಟೋಗಳನ್ನು ಡಿಲೀಟ್ ಮಾಡಿಸಿದ್ದಾರೆ ಎಂದು ತಿಳಿದುಬಂದಿದೆ.

### ಅರವಿಂದ ಕೇಜ್ರಿವಾಲ್ ಬಂಧನ ಖಂಡಿಸಿ

## ಎಎಪಿ ಪ್ರತಿಭಟನೆ



ನವದೆಹಲಿ: ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಬಂಧನ ಖಂಡಿಸಿ ಎಎಪಿ ನಾಯಕರು ಮತ್ತು ಕಾರ್ಯಕರ್ತರು ಪ್ರತಿಭಟನೆ ನಡೆಸಲಿರುವ ಹಿನ್ನೆಲೆಯಲ್ಲಿ ದೆಹಲಿಯ ಬಿಜೆಪಿ ಪ್ರಧಾನ ಕಚೇರಿ ಸುತ್ತಮುತ್ತ ಭದ್ರತೆಯನ್ನು ಹೆಚ್ಚಿಸಲಾಗಿದೆ. ಬಿಜೆಪಿ ಕಚೇರಿ ಸುತ್ತಮುತ್ತಲಿನ ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಲಾಗಿದ್ದು, ಅರೆಸೇನಾ ಪಡೆ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಎಎಪಿ ಕಾರ್ಯಕರ್ತರ ಬೃಹತ್ ಪ್ರತಿಭಟನೆ ಹಿನ್ನೆಲೆಯಲ್ಲಿ ಸೆಂಟ್ರಲ್ ದೆಹಲಿಗೆ ತೆರಳುವ ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸಲು ಪೊಲೀಸರು ಪ್ರಯಾಣಿಕರಿಗೆ ವಿನಂತಿ ಮಾಡಿದ್ದಾರೆ. ಕೇಂದ್ರ ದೆಹಲಿಯಲ್ಲಿರುವ ಬಿಜೆಪಿ ಪ್ರಧಾನ ಕಚೇರಿ ಮತ್ತು ಇ.ಡಿ ಕಚೇರಿಗೆ ಹೋಗುವ ರಸ್ತೆಗಳನ್ನು ಮುಚ್ಚಲಾಗಿದೆ. ಪುಟ 2

### ಬಿಎಸ್‌ವೈ ವಿರುದ್ಧ ಈಶ್ವರಪ್ಪ ಅಭಿಮಾನಿಗಳಿಂದ

## ಪೋಸ್ಟರ್ ವಾರ್!




ಬೆಂಗಳೂರು: ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಮತ್ತು ಮಾಜಿ ಸಚಿವ, ರೆಬೆಲ್ ನಾಯಕ ಕೆಎಸ್ ಈಶ್ವರಪ್ಪ ನಡುವಿನ ಸಮರ ಮತ್ತೊಂದು ಹಂತಕ್ಕೆ ತಲುಪಿದೆ. ಯಡಿಯೂರಪ್ಪ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ವಿಭಿನ್ನ ಪೋಸ್ಟರ್‌ಗಳನ್ನು ಹರಿಬಿಡಲಾಗಿದೆ. ಸದ್ಯ ಈ ಪೋಸ್ಟರ್‌ಗಳು ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿವೆ. ಪುತ್ರ ಕಾಂತೇಶ್ಗೆ ಟಿಕೆಟ್ ತಪ್ಪಿದ ದಿನದಿಂದ ರೆಬೆಲ್ ಆಗಿರುವ ಈಶ್ವರಪ್ಪ ನೇರವಾಗಿಯೇ ಯಡಿಯೂರಪ್ಪ ಮತ್ತು ವಿಜಯೇಂದ್ರ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದಾರೆ. ಅಪ್ಪ-ಮಕ್ಕಳ ಕೈಯಲ್ಲಿ ಸಿಲುಕಿರುವ ಬಿಜೆಪಿಯ ಶುದ್ಧೀಕರಣಕ್ಕಾಗಿ ಚುನಾವಣೆ ಅಖಾಡಕ್ಕೆ ಬರುತ್ತಿದ್ದೇನೆ ಎಂದು ತಮ್ಮ ಸ್ಪರ್ಧೆ ಬಗ್ಗೆ ಈಶ್ವರಪ್ಪ ಸ್ಪಷ್ಟನೆ ನೀಡಿದ್ದಾರೆ.

ಅಪ್ಪ-ಮಕ್ಕಳ ಹಿಡಿತದಲ್ಲಿ ಬಿಜೆಪಿ ಪಕ್ಷ ಸಿಲುಕಿ, ನಲುಗುತ್ತಿದೆ. ನೊಂದವರ ಧ್ವನಿ ನಾನು. ಬಕೆಟ್ ಹಿಡಿದವರಿಗೆ ಟಿಕೆಟ್, ಇಲ್ಲದಿದ್ದರೆ ಗೆಟ್ ಔಟ್ ಎಂಬ ಪೋಸ್ಟರ್ ಮೂಲಕ ಟೀಕೆ ಮಾಡಲಾಗಿದೆ. ಪುಟ 2

### ಅರವಿಂದ್ ಕೇಜ್ರಿವಾಲ್‌ಗೆ ರಾಗಾ

## ಕಾನೂನು ನೆರವು?



**ನವದೆಹಲಿ:** ಜಾರಿ ನಿರ್ದೇಶನಾಲಯದಿಂದ ಬಂಧನಕ್ಕೊಳಗಾದ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಅವರನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ಭೇಟಿಯಾಗಿ ಕಾನೂನು ನೆರವು ನೀಡುವ ಭರವಸೆ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇಂದು ಅರವಿಂದ್ ಕೇಜ್ರಿವಾಲ್ ಅಥವಾ ಅವರ ಕುಟುಂಬವನ್ನು ಅವರು ಭೇಟಿಯಾಗುವ ಸಾಧ್ಯತೆಗಳಿವೆ. ಮದ್ಯ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅರವಿಂದ್ ಕೇಜ್ರಿವಾಲ್ ಅವರ ಮನೆಯಲ್ಲಿ ಶೋಧ ಕಾರ್ಯ ನಡೆಸಿದ ಅಧಿಕಾರಿಗಳು, ಮಹತ್ವದ ದಾಖಲೆಗಳನ್ನು ವಶಕ್ಕೆ ಮಡೆದುಕೊಂಡರು. ಬಳಿಕ ಅವರನ್ನು ಅಧಿಕಾರಿಗಳು ಬಂಧಿಸಿ ಇಡಿ ಪ್ರಧಾನ ಕಚೇರಿಗೆ ಕರೆದುಕೊಂಡು ಹೋಗಿದ್ದಾರೆ. ಇಡಿ ಜಾರಿಗೊಳಿಸಿದ್ದ 9 ಸಮನ್ಸ್‌ಗಳಿಗೆ ಉತ್ತರಿಸದೇ, ಸತತವಾಗಿ ವಿಚಾರಣೆಗೆ ಗೈರಾಗಿದ್ದರು. ಅಲ್ಲದೇ ಅಕ್ರಮ ಹಣ ವರ್ಗಾವಣೆ ಕುರಿತಂತೆ ಜಾರಿಗೊಳಿಸಲಾಗಿದ್ದ ಸಮನ್ಸ್ ರದ್ದುಗೊಳಿಸುವಂತೆ ದೆಹಲಿ ಹೈಕೋರ್ಟ್‌ಗೆ ಕೇಜ್ರಿವಾಲ್ ಮನವಿ ಸಲ್ಲಿಸಿದ್ದರು. ಅವರ ಮನವಿಯನ್ನು ಹೈಕೋರ್ಟ್ ಪುರಸ್ಕರಿಸಲಿಲ್ಲ. ಪುಟ 2

### ರಾಜಧಾನಿಯಲ್ಲಿ ನೀರಿಗಾಗಿ ಹಾಹಾಕಾರ

## ಜಲಮಂಡಳಿಯಿಂದ ಟಫ್ ರೂಲ್ಸ್

**ಬೆಂಗಳೂರು:** ರಾಜ್ಯದಲ್ಲಿ ನೀರಿಗಾಗಿ ಹಾಹಾಕಾರ ಇದೆ. ಅದರಲ್ಲೂ ಬೆಂಗಳೂರಲ್ಲಂತೂ ಕುಡಿಯೋ ನೀರಿಗೂ ಜನ ಪರದಾಡ್ತಿದ್ದಾರೆ. ಕಾವೇರಿ ನೀರು ನಗರಕ್ಕೆ ಬರೋದು ಕಡಿಮೆ ಆಗಿದೆ. ಬೋರ್‌ವೆಲ್ ಖಾಲಿ ಖಾಲಿ ಆಗಿದೆ. ಈಗ ಶಾಲೆ, ದೇವಸ್ಥಾನ, ಆಸ್ಪತ್ರೆಗಳಲ್ಲೂ ನೀರಿಲ್ಲ. ಈ ನಡುವೆ ಹೋಳೀ ಹಬ್ಬಕ್ಕೆ ಹೆಚ್ಚು ನೀರು ಖರ್ಚಾಗುತ್ತೆ. ಇದನ್ನ ತಡೆಯೋಕೆ ಜಲಮಂಡಳಿ ಕೆಲ ರೂಲ್ಸ್‌ಗಳನ್ನ ಮಾಡಿದೆ.

ಹೌದು, ರಾಜಧಾನಿ ಬೆಂಗಳೂರಲ್ಲಿ ಬೇಸಗೆ ಆರಂಭದಲ್ಲೇ ನೀರಿಗಾಗಿ ಹಾಹಾಕಾರ ಶುರುವಾಗಿದೆ. ಮನೆಗಳಲ್ಲಷ್ಟೇ ಅಲ್ಲ, ಶಾಲೆ, ಆಸ್ಪತ್ರೆಗಳಲ್ಲೂ ನೀರಿನ ಅಭಾವ ಇದೆ. ಸಂಪಂಗಿರಾಮನಗರದಲ್ಲಿರೋ ಸರ್ಕಾರಿ ಪ್ರೌಢಶಾಲೆಯಲ್ಲಿ 3-4 ತಿಂಗಳಿಂದ ನೀರಿನ ಸಮಸ್ಯೆ ಇದೆ. ಶಾಲೆಯ ಬೋರ್‌ವೆಲ್ ಕೂಡ ಬತ್ತಿ ಹೋಗಿರುವುದರಿಂದ ಮಕ್ಕಳು ಶೌಚಾಲಯಕ್ಕೂ ಹೋಗಲು ಆಗ್ತಿಲ್ಲ. ನೀರಿಲ್ಲದೆ ತಟ್ಟೆ ಲೋಟ ತೊಳೆಯೋಕೂ ಆಗದೆ ಪರದಾಡ್ತಿದ್ದಾರೆ. ನೀರಿನ ಸಮಸ್ಯೆ ಪರಿಹರಿಸಿ ಅಂತ ಜಲಮಂಡಳಿಗೆ ಪತ್ರ ಬರೆದ್ರೂ ಈವರೆಗೂ ನೋ ರೆಸ್ಪಾನ್ಸ್. ಇನ್ನು ಆಯುರ್ವೇದ ಹಾಗೂ ಯುನಾನಿ ಆಸ್ಪತ್ರೆಗಳಲ್ಲಿ ನೀರಿನ ಅಭಾವ ಇದೆ. ಮೆಜೆಸ್ಟಿಕ್ ನಲ್ಲಿರುವ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ನೀರು ಮಿತವಾಗಿ ಬಳಕೆ ಮಾಡುವಂತೆ ರೋಗಿಗಳಿಗೆ ಸೂಚನೆ ನೀಡಲಾಗಿದೆ. ಆಯುರ್ವೇದ ಸ್ನಾನ ಮಾಡಿಸಲು ಅಗತ್ಯವಿರುವ ಚಿಕಿತ್ಸೆಗಳಿಗೆ ನೀರನ್ನು ಮಿತ ಬಳಕೆ ಮಾಡುವಂತೆ ಸೂಚಿಸಲಾಗಿದೆ.

ನೀರಿನ ಅಭಾವ ಚಿಕನ್, ಮಟನ್ ಮೇಲೂ ಎಫೆಕ್ಟ್ ಬೀರುತ್ತಿದೆ. ಏಕೆಂದರೆ ಕುಡಿಯೋಕೇ ನೀರಿಲ್ಲ, ಹೀಗಾಗಿ ಕೋಳಿ, ಕುರಿ ಸಾಕೋದು ಕೂಡ ಕಷ್ಟವಾಗಿದೆ. ಕುಕ್ಕುಟೋದ್ಯಮಿಗಳಿಗೂ ನೀರಿನ ಅಭಾವ ಇರೋದ್ರಿಂದ ಚಿಕನ್, ಮಟನ್ ಮಾರುಕಟ್ಟೆಗೆ ಬರೋದು ಕಡಿಮೆ ಆಗಿದೆ. ನಿರ್ವಹಣಾ ವೆಚ್ಚ ಜಾಸ್ತಿ ಆಗಿರೋದ್ರಿಂದ ಚಿಕನ್, ಮಟನ್ ಬೆಲೆ ಕೂಡ ಜಾಸ್ತಿ ಆಗಿದೆ. ಇನ್ನು ಹೋಳಿ ಹಬ್ಬಾಚರಣೆ ಕೂಡ ನಡೀತಿದೆ. ಮಾರ್ಚ್ 25ರಂದು ಹೋಳಿ ಆಚರಣೆಗೆ ರಾಜಧಾನಿ ಸಜ್ಜಾಗಿದೆ.



### ಮನೆಯ ನಲ್ಲಿಗಳಿಗೆ ಫ್ಲೋ ರಿಸ್ಟ್ರಿಕ್ಟರ್ ಅಳವಡಿಕೆ ಕಡ್ಡಾಯ!

ಇನ್ನು ಮನೆಯಲ್ಲೂ ಹೆಚ್ಚಿನ ನೀರು ಪೋಲಾಗ್ತಿರುತ್ತೆ. ಇದನ್ನ ತಡೆಲು ಬಿಡಬ್ಲ್ಯೂಎಸ್‌ಎಸ್‌ಬಿ ನಿವಾಸಿಗಳಿಗೆ ಕೆಲ ಸೂಚನೆ ನೀಡಿದೆ. ಮನೆಯೊಳಗೆ ಬಳಸಲಾಗೋ ನಲ್ಲಿಗಳಿಗೆ ಏರೇಟರ್ಸ್ ಅಥವಾ ಫ್ಲೋ ರಿಸ್ಟ್ರಿಕ್ಟರ್‌ಗಳನ್ನ ಅಳವಡಿಸಲು ಜಲಮಂಡಳಿ ಸಾರ್ವಜನಿಕರಿಗೆ ಸೂಚನೆ ನೀಡಿದೆ. ಇದನ್ನು ಅಳವಡಿಸೋ ಮೂಲಕ ನೀರು ಪೋಲಾಗೋದನ್ನ ತಡೆಗಟ್ಟಬಹುದು. ಬೇಸಿಗೆ ಆರಂಭದಲ್ಲೇ ನೀರಿನ ಅಭಾವ ರಾಜಧಾನಿ ಜನರಿಗೆ ಭಾರಿ ತಲೆನೋವು ತರಿಸಿದೆ. ದುಬಾರಿ ಹಣ ಕೊಟ್ಟು ಟ್ಯಾಂಕರ್‌ನಲ್ಲಿ ನೀರು ಖರೀದುಸುವ ಪರಿಸ್ಥಿತಿ ಇದೆ. ನೀರಿನ ಮಿತ ಬಳಕೆಯಿಂದಷ್ಟೇ ಸದ್ಯಕ್ಕೆ ಸಮಸ್ಯೆ ಪರಿಹರಿಸಬಹುದಾಗಿದೆ.

## ಇಂದಿನಿಂದ ಐಪಿಎಲ್



**ಚೆನ್ನೈ:** 17ನೇ ಆವೃತ್ತಿಯ ಐಪಿಎಲ್ ಟೂರ್ನಿ ಇಂದಿನಿಂದ ಆರಂಭವಾಗಲಿದೆ. ಚೆನ್ನೈನ ಚಿದಂಬರಂ (ಚೆಪಾಕ್) ಕ್ರಿಕೆಟ್ ಕ್ರೀಡಾಂಗಣದಲ್ಲಿ ಸಂಜೆ 6:60ಕ್ಕೆ ಅದ್ದೂರಿ ಸಮಾರಂಭದೊಂದಿಗೆ ಟೂರ್ನಿಗೆ ಚಾಲನೆ ಸಿಗಲಿದ್ದು, ಇನ್ನೆರಡು ತಿಂಗಳ ಕಾಲ ಕ್ರಿಕೆಟ್ ಅಭಿಮಾನಿಗಳಿಗೆ ರಸದೌತಣ ನೀಡಲಿದೆ. ಉದ್ಘಾಟನಾ ಪಂದ್ಯದಲ್ಲೇ ಬಲಿಷ್ಠ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಕಾದಾಡಲಿವೆ. ಈ ವೇಳೆ ಉಭಯ ತಡಗಳ ನಡುವಿನ ಮುಖಾಮುಖಿಯಲ್ಲಿ ಆಟಗಾರರ ವೈಯಕ್ತಿಕ ದಾಖಲೆಗಳ ವಿವರ ಇಲ್ಲಿ ನೀಡಲಾಗಿದೆ. ಕೊಹ್ಲಿ ಮೈಲುಗಲ್ಲಿಗೆ ಒಂದು ರನ್ ಬಾಕಿ: ಆರ್‌ಸಿಬಿ ಮತ್ತು ಸಿಎಸ್‌ಕೆ ತಂಡಗಳ ನಡುವಿನ ಪರಸ್ಪರ ಮುಖಾಮುಖಿಯಲ್ಲಿ ಅಧಿಕ ರನ್ ಗಳಿಸಿದ ದಾಖಲೆ ವಿರಾಟ್ ಕೊಹ್ಲಿ ಹೆಸರಲ್ಲಿದೆ. ವಿರಾಟ್ ಕೊಹ್ಲಿ ಚೆನ್ನೈ ವಿರುದ್ಧ ಬರೋಬ್ಬರಿ 999 ರನ್ ಗಳಿಸಿದ್ದಾರೆ. ಅವರು ಇನ್ನು 1 ರನ್ ಗಳಿಸಿದರೆ, ತಂಡವೊಂದರ ವಿರುದ್ಧ 1,000 ರನ್ ಪೂರೈಸಿದ ಆರ್‌ಸಿಬಿಯ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದ್ದಾರೆ. ಪುಟ 2

# ವಿಷ ಉಣಿಸುವುದು ಎಚ್ಡಿಕೆಗೆ ಕರಗತ



**ಮೈಸೂರು:** ರಾಜಕೀಯವಾಗಿ ಮತ್ತೊಬ್ಬರಿಗೆ ವಿಷವುಣಿಸುವುದು ಕುಮಾರಸ್ವಾಮಿಯವರಿಗೆ ಕರಗತವಾಗಿದೆ ಹೊರತು ಡಿಕೆ ಸಹೋದರರಿಗಲ್ಲ ಎಂದು ನಗರ ಕಾಂಗ್ರೆಸ್ ಸಮಿತಿ ವಕ್ತಾರ ಎಸ್.ರಾಜೇಶ್ ಕಿಡಿಕಾರಿದರು.

ನಗರದ ಪತ್ರಕರ್ತರ ಭವನದಲ್ಲಿ ಡಿ.ಕೆ.ಶಿವಕುಮಾರ್ ಸಹೋದರರು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಬದುಕಿಗೆ ವಿಷವುಣಿಸಿದ್ದಾರೆಂಬ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಹೇಳಿಕೆ ಕುರಿತು ಖಾರವಾಗಿ ಪ್ರತಿಕ್ರಿಯಿಸಿದ ಅವರು, ಎಚ್ಡಿಕೆ ಅವರು ತಮ್ಮ ಹೇಳಿಕೆ ವಾಪಸ್ ಪಡೆಯಬೇಕೆಂದು ಆಗ್ರಹಿಸಿದರು. ಬಿ.ಎಸ್.ಯಡಿಯೂರಪ್ಪ ಅವರಿಗೆ ಎರಡನೇ ಅವಧಿಗೆ ಸಿಎಂ ಸ್ಥಾನ ಬಿಟ್ಟುಕೊಡುವುದಾಗಿ ನಂಬಿಸಿ ಬೆನ್ನಿಗೆ ಚೂರಿ ಹಾಕಿದವರು ಯಾರೆಂದು ಕುಮಾರಸ್ವಾಮಿಯವರು ಪ್ರಶ್ನೆ ಮಾಡಿಕೊಳ್ಳಲಿ ಎಂದರು. ಪುಟ್ಟರಾಜ ಅವರನ್ನು ಮಂಡ್ಯ ಕ್ಷೇತ್ರದ ಲೋಕಸಭಾ ಚುನಾವಣೆ ಅಭ್ಯರ್ಥಿಯನ್ನಾಗಿಸುವುದಾಗಿ ಮಾತು ಕೊಟ್ಟು, ಈಗ ತಾವೇ ಅಭ್ಯಥಿ ಎಂದು ಹೇಳಿಕೊಳ್ಳುತ್ತಿದ್ದಾರೆ. ಇನ್ನು ಡಿ.ಕೆ. ಶಿವಕುಮಾರ್ ಅವರು ರಾಜ್ಯದಾದ್ಯಂತ ಕಾಂಗ್ರೆಸ್ ಸಂಘಟನೆ ಮಾಡುವ ಮೂಲಕ ಪಕ್ಷಕ್ಕೆ ಹೊಸ ಚೈತನ್ಯ ತುಂಬಿದ್ದಾರೆ. ಹೀಗಾಗಿ ಕಾಂಗ್ರೆಸ್ಗೆ ದ್ರೋಹ ಬಗೆಯಲು ಎಚ್.ಡಿ. ಕುಮಾರಸ್ವಾಮಿ ಅವರು ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಹೀಗಾಗಿ ಎಲ್ಲರಿಗೂ ವಿಷವುಣಿಸುವವರು ಅವರೇ ಆಗಿದ್ದಾರೆಂದರು. ಕುರುಬಾರಹಳ್ಳಿ ಪ್ರಕಾಶ್, ಎಸ್.ಎ. ರಹೀಂ, ರವಿ, ಇಬ್ರಾಹಿಂ ಇದ್ದರು.

# ಅರ್ಹ ಪ್ರಾಸಿಕ್ಯೂಷನ್ ನಿರ್ದೇಶಕರ ನೇಮಿಸಿ: ಸರ್ಕಾರಕ್ಕೆ ಹೈಕೋರ್ಟ್ ಸೂಚನೆ





**ಬೆಂಗಳೂರು:** ಪ್ರಾಸಿಕ್ಯೂಷನ್ ನಿರ್ದೇಶನಾಲಯದ ಪ್ರಭಾರ ನಿರ್ದೇಶಕ ಎಚ್.ಕೆ.ಜಗದೀಶ್ ಅವರನ್ನು ಪದಚ್ಯುತಗೊಳಿಸಿ ಆದೇಶಿಸಿದ ಹೈಕೋರ್ಟ್, 8 ವಾರಗಳಲ್ಲಿ ಮುಖ್ಯ ನ್ಯಾಯಮೂರ್ತಿಗಳ ಒಪ್ಪಿಗೆಯೊಂದಿಗೆ ಅರ್ಹ ಅಭ್ಯರ್ಥಿಯನ್ನು ನೇಮಕ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಜಗದೀಶ್ ಅವರು ಸರ್ಕಾರದ ಕಾನೂನು ಸಚಿವಾಲಯದ ಅಧಿಕಾರಿಯಾಗಿರುವುದರಿಂದ ಕ್ವೋ ವಾರೆಂಟೊ ಹೊರಡಿಸಿ ಅವರನ್ನು ಪದಚ್ಯುತಗೊಳಿಸಲು ನಿರ್ದೇಶನ ನೀಡಬೇಕು ಎಂದು ಕೋರಿ ವಕೀಲೆ ಸುಧಾ ಕಟ್ವಾ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್ ವಿ ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್ ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠವು ಅಂಗೀಕರಿಸಿತು.

ವಿಚಾರಣೆ ವೇಳೆ 2019ರ ಆಗಸ್ಟ್‌ನಿಂದ 6 ತಿಂಗಳ ಕಾಲ ಹೆಚ್ಚುವರಿ ಪ್ರಭಾರ ನೀಡಲಾಗಿದ್ದ ಜಗದೀಶ್ ಅವರನ್ನು ಯಾವುದೇ ಸಕಾರಣವಿಲ್ಲದೆ ಪ್ರಭಾರಿ ಹುದ್ದೆಯಲ್ಲಿ ಮುಂದುವರೆಸಿರುವ ಸರ್ಕಾರದ ಕಾರ್ಯವೈಖರಿಯನ್ನು ಖಂಡಿಸಿತು.

'ಈ ಹುದ್ದೆಗೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಸಮ್ಮತಿ ಅಗತ್ಯ. ಆದರೆ, ಈ ಪ್ರಕರಣದಲ್ಲಿ ಅವರ ಸಮ್ಮತಿ ಪಡೆದಿಲ್ಲ. ಅರ್ಹತೆ ಇಲ್ಲದ ವ್ಯಕ್ತಿಯನ್ನು ಪ್ರಭಾರ ಹುದ್ದೆಗೆ ನೇಮಕ ಮಾಡುವಂತಿಲ್ಲ. ಅಂತೆಯೇ, ಪ್ರಭಾರ ನಿರ್ದೇಶಕ ಒಂದು ವರ್ಷದ ನಂತರ ಮುಂದುವರಿಯುವಂತಿಲ್ಲ. ಆದರೆ, ಹಾಲಿ ನೇಮಕಾತಿಯು 2019ರಿಂದಲೂ ಮುಂದುವರಿಯುತ್ತಿದ್ದು, ಇದು ಒಳ್ಳೆಯ ಬೆಳವಣಿಗೆಯಲ್ಲ. ಹೀಗಾಗಿ, ತಕ್ಷಣದಿಂದ ಜಾರಿಗೆ ಬರುವಂತೆ ಪ್ರಭಾರ ನಿರ್ದೇಶಕರನ್ನು ಹುದ್ದೆಯಿಂದ ವಜಾಗೊಳಿಸಲಾಗಿದೆ ಎಂದು ನ್ಯಾಯಪೀಠ ಹೇಳಿತು.

## ನಾಳೆ ಹುತಾತ್ಮರ ದಿನ

**ಮೈಸೂರು:** ಮೈಸೂರು ಮಾಜಿ ಸೈನಿಕರ ಆಂದೋಲನ ಸಂಸ್ಥೆ ವತಿಯಿಂದ ಇದೇ ಮಾ. 23 ರಂದು ಹುತಾತ್ಮರ ದಿನದ ಅಂಗವಾಗಿ ನಗರದ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್ನಲ್ಲಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಸಿ.ಎಂ. ಶ್ರೀಧರ್ ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಅಂದು ಬೆಳಗ್ಗೆ ಏಳರಿಂದ ಹತ್ತರವರೆಗೆ ಕಾರ್ಯಕ್ರಮ ನಡೆಯಲಿದೆ. ಸುಮಾರು ಮುನ್ನೂರು ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ವಿ. ಮಹೇಶ್, ಕಿಶೋರ್ ಕದಂ ಹಾಜರಿದ್ದರು.



## ಇಂದು ಜೆಎಸ್‌ಎಸ್ ಪದವೀಧರರ ದಿನಾಚರಣೆ

**ಮೈಸೂರು:** ಜೆಎಸ್‌ಎಸ್ ವೈದ್ಯಕೀಯ ಮಹಾ ವಿದ್ಯಾಲಯದ ಪದವೀಧರರ ದಿನಾಚರಣೆ ಇದೇ ಮಾ. 23 ರ ಸಂಜೆ ನಾಲ್ಕಕ್ಕೆ ಜೆಎಸ್‌ಎಸ್ ವೈದ್ಯಕೀಯ ಸಂಸ್ಥೆಗಳ ಕ್ಯಾಂಪಸ್ನಲ್ಲಿ ನಡೆಯುತ್ತಿದೆ. ಈ ವೇಳೆ 204 ವಿದ್ಯಾರ್ಥಿಗಳು ಪದವಿ ಪ್ರಮಾಣಪತ್ರ, ಹಾಗೂ ಎಂಟು ಮಂದಿ ಪ್ರತಿಭಾನ್ವಿತ ವಿದ್ಯಾರ್ಥಿಗಳು 12 ಚಿನ್ನದ ಪದಕ ಹಾಗೂ 12 ನಗದು ಬಹುಮಾನ ಸ್ವೀಕರಿಸಲಿದ್ದಾರೆ ಎಂದು ಪ್ರಾಚಾರ್ಯರಾದ ಡಾ.ಎಚ್. ಬಸವನಗೌಡಪ್ಪ ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಜೆಎಸ್‌ಎಸ್ ಮಹ ವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದಶಿ ಡಾ.ಸಿ.ಜಿ. ಬೆಟ್ಸೂರ್ಮಠ ಅಧ್ಯಕ್ಷತೆ ವಹಿಸುವರು, ಡಾ.ಬಿ. ಸುರೇಶ್ ಮತ್ತು ಡಾ. ಸುರೀಂದರ್ ಸಿಂಗ್ ವೇದಿಕೆಯಲ್ಲಿರುವರು. ಪದ್ಮಶ್ರೀ ಪುರಸ್ಕೃತ ಹಾಗೂ ಮುಂಬಯಿಯ ಲೀಲಾವತಿ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆಯ ಹಿರಿ ಸಮಾಲೋಚಕ ಡಾ. ಶಶಾಂಕ್ ಆರ್. ಜೋಶಿ ಅವರು ಮುಖ್ಯ ಅತಿಥಿಳಾಗಿರುವರು. ಇನ್ನು, ಕೋಲ್ಕತಾ ಮೂಲದ ಡಾ. ಸುಬ್ರದೀಪ್ ಧಾರ್ ಆರು ಚಿನ್ನದ ಪದಕ, ನಗರದ ಡಾ. ರೋಹಿತ್ ಆರ್. ನಾಯರ್ ಮೂರು ಚಿನ್ನದ ಪದಕ, ನಗರದವರೇ ಆದ ಡಾ.ಎಸ್.ಎಂ. ತೇಜಾಶ್ರೀ ಎರಡು ಚಿನ್ನದ ಪದಕ ಪಡೆದು ಮೊದಲ ಪಟ್ಟಿಯಲ್ಲಿದ್ದಾರೆಂದರು. ಇದೇ ವೇಳೆ ಅತ್ಯುತ್ತಮ ಸೇವೆ ಸಲ್ಲಿಸಿದ ಬೋಧಕರನ್ನು ಸನ್ಮಾನಿಸಿ ಗೌರವಿಸಲಾಗುವುದೆಂದು ತಿಳಿಸಿದರು. ಡಾ. ಸುಧೀಂದ್ರ ಭಟ್, ಡಾ.ಬಿ. ಮಂಜುನಾಥ್, ಡಾ. ಪ್ರವೀಣ್ ಕುಲಕರ್ಣಿ, ಡಾ. ಸುಮಾ, ಸತೀಶ್ಚಂದ್ರ, ಡಾ. ಮಹಂತಪ್ಪ ಇದ್ದರು.



## 25ರಿಂದ ಸಿಇಟಿ ತರಬೇತಿ

**ಮೈಸೂರು:** ತಾಂಡವಪುರದಲ್ಲಿನ ಮಹಾರಾಜ ತಾಂತ್ರಿಕ ಮಹಾ ವಿದ್ಯಾಲಯದ ವತಿಯಿಂದ ಇದೇ ಮಾ. 25 ರಿಂದ ಏ. ಎಂಟರವರೆಗೆ 12 ದಿನಗಳ ಸಿಇಟಿ ಉಚಿತ ತರಬೇತಿ ಆಯೋಜಿಸಲಾಗಿದೆ ಎಂದು ಶಿಕ್ಷಣ ಸಂಸ್ಥೆಯ ಬುದ್ಧಿಮತ್ತೆ ಮತ್ತು ತಂತ್ರಾಂಶ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಮೊಹಮ್ಮದ್ ಸಲಾಮತ್ ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ತರಬೇತಿ ವೇಳೆ ಮೈಸೂರು, ಚಾಮರಾಜನಗರ, ನಂಜನಗೂಡು, ಟಿ. ನರಸೀಪುರ, ಎಚ್.ಡಿ. ಕೋಟೆ, ಗುಂಡ್ಲುಪೇಟೆ, ಮಳವಳ್ಳಿ, ಸರಗೂರು, ಕೆ.ಆರ್. ನಗರ, ಕೆ.ಆರ್. ಪೇಟೆ ಮತ್ತು ಹುಣಸೂರಿನಿಂದ ಉಚಿತ ಬಸ್ ಸೌಲಭ್ಯ ಕಲ್ಪಿಸಲಾಗಿದೆ,. ಅಲ್ಲದೆ, ಮಧ್ಯಾಹ್ನದ ಊಟದ ವ್ಯವಸ್ಥೆ ಸಹಾ ಇರಲಿದ್ದು, ನಗರದ ಪ್ರತಿಷ್ಠಿತ ಪಿಯು ಕಾಲೇಜುಗಳ ಪರಿಣಿತ ಹಾಗೂ ಅನುಭವಿ ಉಪನ್ಯಾಸಕರು ತರಬೇತಿ ನೀಡಲಿದ್ದಾರೆ. ಆಸಕ್ತರು ಹೆಚ್ಚಿನ ಮಾಹಿತಿಗೆ ದೂ. 99808 32371 ನ್ನು ಸಂಪರ್ಕಿಸಬಹದಾಗಿದೆ ಎಂದು ತಿಳಿಸಿದರು. ಪ್ರದೀಪ್ ಹಾಜರಿದ್ದರು.



## ರಾಗಿ ಖರೀದಿ ಅವಧಿ ವಿಸ್ತರಣೆ

**ರಾಮನಗರ:** 2023-24ನೇ ಸಾಲಿನ ಮುಂಗಾರು



ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ (ಎಂ.ಎಸ್.ಪಿ) ಜಿಲ್ಲೆಯಲ್ಲಿ ಈಗಾಗಲೇ ನೋಂದಾಯಿಸಿರುವ ರೈತರಿಂದ ರಾಗಿ ಖರೀದಿ ಪ್ರಕ್ರಿಯೆಯನ್ನು ಮಾ. 31 ರವರೆಗೆ ನಿಗದಿಪಡಿಸಲಾಗಿದ್ದು, ರಾಗಿ ಖರೀದಿ ಪ್ರಕ್ರಿಯೆಯನ್ನು 2024ರ ಜೂನ್ 30 ರವರೆಗೆ ವಿಸ್ತರಿಸಲಾಗಿದೆ. ರಾಮನಗರ ಜಿಲ್ಲೆಯ ಎಲ್ಲಾ ರೈತರು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೌಡಿ ಶೀಟರ್ ಕಾಲಿಗೆ ಗುಂಡು ಹಾರಿಸಿದ ಪೊಲೀಸರು!

**ಬೆಂಗಳೂರು:** ಸ್ಥಳ ಮಹಜರು ವೇಳೆ ಪೊಲೀಸರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇರೆಗೆ ಕಗ್ಗಲೀಪುರ ಪೊಲೀಸರು 50 ವರ್ಷದ ಕೊಲೆ ಆರೋಪಿಯ ಕಾಲಿಗೆ ಗುಂಡು ಹಾರಿಸಿದ್ದಾರೆ. ಜೆ.ಪಿ.ನಗರ 1ನೇ ಹಂತದ ಸಾರಕ್ಕಿ ನಿವಾಸಿ ಎಸ್.ಸೋಮೇಶ ಬಂಧಿತ ಆರೋಪಿ. ಈತ ಜೆ.ಪಿ.ನಗರ ಪೊಲೀಸ್ ಠಾಣೆಯಲ್ಲಿ ರೌಡಿ ಶೀಟರ್ ಆಗಿದ್ದಾನೆ.

ಕಳೆದ ವರ್ಷ ಡಿಸೆಂಬರ್‌ನಲ್ಲಿ ತನ್ನ ಆತ್ಮೀಯ ಸ್ನೇಹಿತನನ್ನು ಕೊಂದು ಉತ್ತರ ಪ್ರದೇಶದಲ್ಲಿ ತ'ಲೆ'ಮ'ರೆ'ಸಿ'ಕೊಂ'ಡಿ'ದ್ದ ಸೋಮೇಶನನ್ನು ಖಚಿತ ಮಾಹಿತಿಯ ಮೇರೆಗೆ ಉತ್ತರ ಪ್ರದೇಶದ ಲಖನೌದಲ್ಲಿ ಬಂಧಿಸಿದ ಪೊಲೀಸರು, ಶನಿವಾರ ಮುಂಜಾನೆ ಕಗ್ಗಲಿಪುರ ಠಾಣೆಗೆ ಕರೆತಂದಿದ್ದಾರೆ. ಬಂಧನದ ವಿಧಿವಿಧಾನಗಳನ್ನು ಪೂರ್ಣಗೊಳಿಸಿದ ನಂತರ, ಕೊಲೆ ಮಾಡಲು ಬಳಸಿದ ಆಯುಧ ಮತ್ತು ಮೃತದೇಹವನ್ನು ಎಸೆದಿದ್ದ ಸ್ಥಳದ ಮಹಜರಿಗಾಗಿ ಆತನನ್ನು ಕರೆದೊಯ್ಯಲಾಗಿದೆ.

ಶನಿವಾರ ಮಧ್ಯಾಹ್ನ ಬೆಂಗಳೂರು ದಕ್ಷಿಣದ ಉತ್ತರಹಳ್ಳಿಯ ಸ್ಮಶಾನ ರಸ್ತೆಗೆ ಕರೆದೊಯ್ಯಿದಾಗ, ತಪ್ಪಿಸಿಕೊಳ್ಳುವ ಉದ್ದೇಶದಿಂದ ಹೆಡ್ ಕಾನ್‌ಸ್ಟೆಬಲ್ ಮೇದಪ್ಪ (40) ಮೇಲೆ ಹಲ್ಲೆ ನಡೆಸಿದ್ದಾನೆ. ನಂತರ ಆರೋಪಿ ಎಡಗಾಲಿಗೆ ಗುಂಡು ಹಾರಿಸಿದ್ದು, ಶಸ್ತ್ರ ಚಿಕಿತ್ಸೆಗಾಗಿ ಕಗ್ಗಲೀಪುರ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿ ಹೋಟೆಲ್ ಉದ್ಯಮಿಯಾಗಿದ್ದು, ಇತರ ನಾಲ್ಕು ಕೊಲೆ ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆ ಎಂದು ಹೇಳಲಾಗಿದೆ. ''ಕಳೆದ ವರ್ಷ ಡಿಸೆಂಬರ್ 5ರಂದು ಅಂಜನಾಪುರ ಹಾಗೂ ಮುಂಬೈನಲ್ಲಿ ಹೋಟೆಲ್ ಆರಂಭಿಸುವುದಾಗಿ ಸೋಮೇಶನಿಂದ ಹಣ ಪಡೆದು ವಾಪಸ್ ಕೊಡದಿದ್ದ ತನ್ನ ಸ್ನೇಹಿತ ಅಯ್ಯಪ್ಪನ್ ಚಿಲ್ಲದೊರೈ ತೇವರ್ ಎಂಬಾತನನ್ನು ಆರೋಪಿ ಹತ್ಯೆ ಮಾಡಿದ್ದ. ವ್ಯವಹಾರದಲ್ಲಿ ನಷ್ಟ ಉಂಟಾಗಿ ತೇವರ್ ಹಣ ವಾಪಸ್ ಕೊಡದೆ ಮತ್ತೆ ಹಣ ಕೇಳಿದ್ದರಿಂದ ಹತಾಶೆಗೊಂಡ ಸೋಮೇಶ್ ತನ್ನಿಬ್ಬರು ಸ್ನೇಹಿತರೊಂದಿಗೆ ಸೇರಿ ಕೇಬಲ್ ವೈರ್ ನಿಂದ ತೇವರ್ ಕತ್ತು ಹಿಸುಕಿ ಕೊಲೆಗೈದಿದ್ದರು. ಬಳಿಕ ಆರೋಪಿಗಳು ಶವ ಮತ್ತು ಆಯುಧವನ್ನು ಕಗ್ಗಲೀಪುರದ ನೀಲಗಿರಿ ತೋಪಿನಲ್ಲಿ ಎಸೆದಿದ್ದರು. ನಂತರ ಹುಬ್ಬಳ್ಳಿಗೆ ತೆರಳಿದ ಸೋಮೇಶ, ಕೊಲೆ ಮಾಡಿದಾಗ ಧರಿಸಿದ್ದ ಬಟ್ಟೆಯನ್ನು ಸುಟ್ಟು ಹಾಕಿದ್ದ ಎಂದು ತನಿಖೆ ನಡೆಸುತ್ತಿರುವ ಅಧಿಕಾರಿಯೊಬ್ಬರು ತಿಳಿಸಿದರು. ಆರೋಪಿಗಳ ವಿರುದ್ಧ ಕೊಲೆ ಯತ್ನ (ಐಪಿಸಿ 307) ಸೇರಿದಂತೆ ವಿವಿಧ ಸೆಕ್ಷನ್ ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಹೆಚ್ಚಿನ ತನಿಖೆಗಳು ನಡೆಯುತ್ತಿವೆ.

## 'ಆತ ಹಿಂದಿನಿಂದ ಬಂದು ನನ್ನನ್ನು ತಬ್ಬಿಕೊಂಡ': ಮಹಿಳೆ ಹಂಚಿಕೊಂಡ ಕೆಟ್ಟ ಅನುಭವ

# ಮಹಿಳೆ ಜತೆ ಅಸಭ್ಯ ವರ್ತನೆ

**ಬೆಂಗಳೂರು:** ಕಳೆದ ಸೋಮವಾರ ರಾತ್ರಿ ತನ್ನ ನಿವಾಸ ಬಳಿ ಅಪರಿಚಿತ ಪುರುಷನೊಬ್ಬ ಬಂದು ತನ್ನನ್ನು ಏಕಾಏಕಿ ತಬ್ಬಿ ಲೈಂಗಿಕ ದೌರ್ಜನ್ಯ ನಡೆಸಲು ಪ್ರಯತ್ನಿಸಿದನು ಎಂದು ಮಹಿಳೆಯೊಬ್ಬರು ಟ್ವಿಟ್ಟರ್ ನಲ್ಲಿ ಸರಣಿ ಪೋಸ್ಟ್‌ಗಳ ಮೂಲಕ ಆರೋಪಿಸಿದ್ದಾರೆ. ಈ ಕುರಿತು ವಿಡಿಯೊವನ್ನು ಟ್ವಿಟ್ಟರ್ ನಲ್ಲಿ ಹಂಚಿಕೊಂಡಿರುವ ಮಹಿಳೆ ಅದರಲ್ಲಿ ಪುರುಷ ನಡೆದುಕೊಂಡ ರೀತಿ ಮತ್ತು ನಂತರ ಆ ಪುರುಷ ತನ್ನ ಮುಖವನ್ನು ಮರೆಮಾಚಲು ನೋಡುತ್ತಿದ್ದಾನೆ.

ಮಹಿಳೆಯ ಪೋಸ್ಟ್ ನಲ್ಲಿ ಏನಿದೆ?: ''ಕಳೆದ ರಾತ್ರಿ ಬೆಂಗಳೂರಿನ ನನ್ನ ಮನೆಯ ಹತ್ತಿರ ನನ್ನ ಸ್ನೇಹಿತ ಬಂದು ಬಿಟ್ಟು ಹೋದನು. ನನ್ನ ಮನೆಯ ಗೇಟ್ ನ್ನು ತೆರೆಯುವಷ್ಟರಲ್ಲಿ ಈ ವ್ಯಕ್ತಿ ಬಂದು ಹಿಂದಿನಿಂದ ನನ್ನನ್ನು ಎಳೆದಾಡಿ ನನ್ನ ಸ್ನೇಹಿತನೊಬ್ಬ ನನ್ನನ್ನು ನನ್ನ ಮನೆಯ ಹತ್ತಿರ ಡ್ರಾಪ್ ಮಾಡಿ ನಾನು ಗೇಟ್ ತೆರೆಯಲು ಮುಂದಾದಾಗ, ಈ ವ್ಯಕ್ತಿ ಬಂದು ನನ್ನನ್ನು ಹಿಂದಿನಿಂದ ತಬ್ಬಿಹಿಡಿದು ನಂತರ ತಪ್ಪಿಸಿಕೊಂಡು ಓಡಿಹೋಗಲಾರಂಭಿಸಿದನು. ನಾನು ಕೂಡಲೇ ನನ್ನ ಸ್ನೇಹಿತನಿಗೆ ಕರೆ ಮಾಡಿ ಅವನನ್ನು ಹಿಡಿಯುವಂತೆ ಹೇಳಿದೆನು ಎಂದು ಮೊದಲ ಪೋಸ್ಟ್ ನಲ್ಲಿ ತಿಳಿಸಿದ್ದಾರೆ.



ಎರಡನೇ ಪೋಸ್ಟ್ ನಲ್ಲಿ ಮಹಿಳೆ, ಕೂಡಲೇ ನನ್ನ ಸ್ನೇಹಿತ ಪೊಲೀಸರಿಗೆ ಕರೆ ಮಾಡಿ ಅವರು ಬಂದು ವ್ಯಕ್ತಿಯನ್ನು ವಶಕ್ಕೆ ಪಡೆದರು. ಆತನ ಮೇಲೆ ದೂರು ದಾಖಲಿಸದ ಕಾರಣ ಪೊಲೀಸರು ಅವನನ್ನು ಬಿಟ್ಟುಬಿಟ್ಟರು ಎಂದು ಮಹಿಳೆ ಮತ್ತೊಂದು ಪೋಸ್ಟ್ ನಲ್ಲಿ ತಿಳಿಸಿದ್ದಾರೆ.

ದುರುದೃಷ್ಟವಶಾತ್ ನಮ್ಮ ಸಂವಿಧಾನದಲ್ಲಿನ ಕಾನೂನು ಇಂತಹ ದುರುಳರನ್ನು ರಕ್ಷಿಸುತ್ತದೆ. ನನ್ನನ್ನು ಬಚಾವ್ ಮಾಡುವಲ್ಲಿ ಆತನಿಗೆ ಗಾಯಗಳಾಗಿದ್ದರೆ ನನ್ನ ಮೇಲೆ ಆರೋಪ ಹೊರಿಸಲಾಗುತ್ತಿತ್ತು. ಎಂತಹ ನಾಚಿಕೆಗೇಡಿನ ಸಂಗತಿ ಎಂದು ಮಹಿಳೆ ಕಾನೂನು, ಪೊಲೀಸ್ ವ್ಯವಸ್ಥೆ ಮೇಲೆ ಅಸಹನೆ ವ್ಯಕ್ತಪಡಿಸಿದ್ದಾರೆ.

ಮುಂದೆ ಎದುರಾಗಬಹುದಾದ ಸಮಸ್ಯೆಗಳಿಂದಾಗಿ ನಾನು ಆ ವ್ಯಕ್ತಿ ವಿರುದ್ಧ ಎಫ್‌ಐಆರ್ ದಾಖಲಿಸಲು ಸಾಧ್ಯವಾಗಲಿಲ್ಲ. ಪೊಲೀಸ್ ದೂರು, ನಂತರ ಕೋರ್ಟ್ ನಲ್ಲಿ ವಿಚಾರಣೆಗಳು ಅಂತ ನಾನು ಮಾನಸಿಕವಾಗಿ ಕಿರುಕುಳಕ್ಕೊಳಗಾಗುತ್ತೇನೆ. ಅದರ ಬದಲು ಬಿಟ್ಟುಬಿಡುವಂತೆ ಆ ಸಮಯದಲ್ಲಿ ನನ್ನ ಸಹಾಯಕ್ಕೆ ಬಂದ ನನ್ನ ನೆರೆಹೊರೆಯ ಜನರು ಹೇಳಿದರು ಎಂದು ಮಹಿಳೆ ಪೋಸ್ಟ್ ನಲ್ಲಿ ತಿಳಿಸಿದ್ದಾರೆ,

ಇಂದಿನ ಸಮಾಜದಲ್ಲಿ ಮಹಿಳೆಯರ ಸುರಕ್ಷತೆಯನ್ನು ಪ್ರಶ್ನಿಸಿರುವ ಸಂತ್ರಸ್ತೆ, ಆತನಿಗೆ ಏನೂ ಮಾಡದೆ ಬಿಟ್ಟುಬಿಟ್ಟಿರುವುದು ದುರದೃಷ್ಟಕರ. ಆ ಸಂದರ್ಭದಲ್ಲಿ ಆತ ಮದ್ಯಪಾನ ಮಾಡಿರಲಿಲ್ಲ, ಮತ್ತು ಆತ ಮಗು ಕೂಡ ಅಲ್ಲ. ಆತ ಏನು ಮಾಡುತ್ತಿದ್ದಾನೆ ಎಂದು ಅವನಿಗೆ ಗೊತ್ತಿತ್ತು ಎಂದು ಮಹಿಳೆ ಬರೆದುಕೊಂಡಿದ್ದಾರೆ. ಪೊಲೀಸರು ಘಟನೆ ಬಗ್ಗೆ ಹೆಚ್ಚಿನ ಮಾಹಿತಿ ಕೇಳಿದ್ದಾರೆ.

# ಲೋಕಸಭಾ ಚುನಾವಣೆ ಕಾವು ಏರುತ್ತಿಲ್ಲ

**ವಿಜಯಪುರ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲೂಕುಗಳು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವುದರಿಂದ ಲೋಕಸಭಾ ಚುನಾವಣೆ ದಿನಾಂಕ ಘೋಷಣೆ ಆದರೂ ಸಹ ಚುನಾವಣೆಯ ಕಾವು ಏರುತ್ತಿಲ್ಲ.

ಇನ್ನು ಯಾವ ಯಾವ ಪಕ್ಷದಲ್ಲಿ ಯಾರ್‍ಯಾರು ಅಭ್ಯರ್ಥಿಗಳಾಗುತ್ತಾರೆ ಎಂಬುದು ಇನ್ನು ಕುತೂಹಲ ಮೂಡಿಸಿದೆ. ಕಾಂಗ್ರೆಸ್ ಮತ್ತು ಬಿಜೆಪಿ, ಜೆಡಿಎಸ್, ಮೈತ್ರಿ ಅಭ್ಯರ್ಥಿ ಯಾರಾಗುತ್ತಾರೆ ಎಂಬುದು ಸಾರ್ವಜನಿಕರಲ್ಲಿ ಇನ್ನು ಚರ್ಚೆಯಾಗಿಯೇ ಉಳಿದಿದೆ. ಆಕಾಂಕ್ಷಿಗಳು ಇದ್ದರೂ ಸಹ ಎರಡು ಪಕ್ಷದಲ್ಲೂ ಸಹ ಇನ್ನು ಅಭ್ಯರ್ಥಿಗಳ ಆಯ್ಕೆಯಾಗಿಲ್ಲ ಎಂದು ತಿಳಿಸಿದರು.

ವಿಧಾನಸಭಾ ಚುನಾವಣೆಯಲ್ಲಿ ಬಿರುಸು ಇದ್ದದ್ದು, ಲೋಕಸಭಾ ಚುನಾವಣೆಯಲ್ಲಿ ಕಾಣುತ್ತಿಲ್ಲ, ಕಳೆದ ಲೋಕಸಭಾ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಬಿ.ಎನ್ ಬಚ್ಚೇಗೌಡ, ಬಿಜೆಪಿ ಅಭ್ಯರ್ಥಿಯಾಗಿ ಗೆಲುವು ಕಂಡಿದ್ದರು. ಇದೊಂದು ಇತಿಹಾಸ ಬರೆದಿದ್ದಾರೆ. ಈ ಬಾರಿ ಬಿ.ಎನ್ ಬಚ್ಚೇಗೌಡ ಚುನಾವಣೆಯಲ್ಲಿ ನಿಲ್ಲದೆ ವಯೋ ಸಹಜತೆಯಿಂದ ಸ್ಪರ್ಧೆಗೆ ಮುಂದಾಗಿಲ್ಲ. ಸಕ್ರಿಯ ರಾಜಕಾರಣದಲ್ಲಿರುವುದಾಗಿ ಘೋಷಿಸಿದ್ದಾರೆ. ಈಗಾಗಲೇ ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದಾಗಿ ಘೋಷಣೆ ಮಾಡಿದ್ದಾರೆ. ಈ ಬಾರಿ ಲೋಕಸಭಾ ಚುನಾವಣೆಗೆ ಬಿಜೆಪಿಯಿಂದ ಮಾಜಿ ಸಚಿವ ಡಾ. ಕೆ ಸುಧಾಕರ್ ಹಾಗೂ ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಆರ್. ವಿಶ್ವನಾಥ್ ಪುತ್ರ ಅಲೋಕ್ ವಿಶ್ವನಾಥ್ ನಡುವೆ ಟಿಕೆಟ್ಗಾಗಿ ಪೈಪೋಟಿ ನಡೆಯುತ್ತಿದೆ. ಇವರಿಬ್ಬರಲ್ಲಿ ಯಾರಿಗೆ ಟಿಕೆಟ್ ಸಿಗಲಿದೆ ಎಂಬ ಚರ್ಚೆ ಜನರಲ್ಲಿ ಕಾಡುತ್ತಿದೆ. ಮಂಡ್ಯ ಕ್ಷೇತ್ರದಿಂದ ಟಿಕೆಟ್ ಕೈತಪ್ಪಿರುವ ಸುಮಲತಾ ಅಂಬರೀಶ್ ಗೆ ಬಿಜೆಪಿಯಿಂದ ಟಿಕೆಟ್ ಸಿಗಬಹುದು ಎಂಬ ಚರ್ಚೆ ಸಾರ್ವಜನಿಕ ವಲಯದಲ್ಲಿ ಮೂಡಿದೆ.

ಈಗಾಗಲೇ ವಿಶ್ವನಾಥ್ ಪುತ್ರ ಅಲೋಕ್ ವಿಶ್ವನಾಥ್ ಈಗಾಗಲೇ ಕ್ಷೇತ್ರ ವ್ಯಾಪ್ತಿಯಲ್ಲಿ ಓಡಾಡುತ್ತಿದ್ದಾರೆ. ಹಾಗೂ ಕಾರು ರ್‍ಯಾಲಿ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬರುತ್ತಿದ್ದಾರೆ. ಮಾಜಿ ಸಚಿವ ಡಾ. ಕೆ ಸುಧಾಕರ್ ಸಹ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಮುಖಂಡರು ಮತ್ತು ಕಾರ್ಯಕರ್ತರೊಂದಿಗೆ ಓಡಾಡುತ್ತಿದ್ದಾರೆ.

ಕಳೆದ ಬಾರಿ ಲೋಕಸಭಾ ಚುನಾವಣೆಯಲ್ಲಿ ಮಾಜಿ ಸಂಸದ ಹಾಗೂ ಕೇಂದ್ರ ಸಚಿವರಾಗಿದ್ದ ವೀರಪ್ಪ ಮೊಯ್ಲಿ ಅವರು ಬಚ್ಚೇಗೌಡರ ವಿರುದ್ಧ ಸೋತಿದ್ದರು. ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ವಿಧಾನ ಪರಿಷತ್ ಸದಸ್ಯ ಎಂ.ಆರ್ ಸೀತಾರಾಮ್ ಪುತ್ರ ರಕ್ಷಾ ರಾಮಯ್ಯ, ಮಾಜಿ ಸಚಿವ ಶಿವಶಂಕರ್ ರೆಡ್ಡಿ ಕಾಂಗ್ರೆಸ್ ಟಿಕೆಟ್ ಗಾಗಿ ಪ್ರಯತ್ನ ಮಾಡುತ್ತಿದ್ದಾರೆ. ಇವರಲ್ಲಿ ಯಾರಿಗೆ ಸಿಗಬಹುದು ಎಂಬ ಲೆಕ್ಕಾಚಾರ ಕಾರ್ಯಕರ್ತರಲ್ಲಿ ಜೋರಾಗಿದೆ. ರಾಷ್ಟ್ರೀಯ ಕಾಂಗ್ರೆಸ್ ಯುವ ಘಟಕದ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪಕ್ಷದ ಪ್ರಮುಖ ಮುಖಂಡರನ್ನು ಭೇಟಿಯಾಗಿದ್ದು ಟಿಕೆಟ್ ಸಿಗುವ ವಿಶ್ವಾಸದೊಂದಿಗೆ ಭೇಟಿ ಮಾಡಿ ಹಾಗೂ ದೇವಸ್ಥಾನಗಳು ಮತ್ತು ಇತರೆ ಪ್ರದೇಶಗಳಿಗೆ ಓಡಾಡುತ್ತಿದ್ದಾರೆ. ಅಧಿಕೃತವಾಗಿ ಪಕ್ಷದ ಅಭ್ಯರ್ಥಿಯನ್ನು ಕಾಂಗ್ರೆಸ್ ಇನ್ನು ಘೋಷಣೆ ಮಾಡದಿರುವುದು ವಿವಿಧ ರೀತಿಯ ರೆಕ್ಕೆ ಪುಕ್ಕಗಳು ಹುಟ್ಟಿಕೊಳ್ಳಲು ಕಾರಣವಾಗುತ್ತಿದೆ.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಕ್ಕಲಿಗ ಜಾತಿಯಾದ ರೈತ ಮತಗಳು ಅಭ್ಯರ್ಥಿಗಳ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಗಳಿಂದ 8,91,762 ಮತದಾರರು ಇದ್ದಾರೆ. ಮಹಿಳೆಯರು 4,50,737, ಪುರುಷರು 4,40,884, ಮತದಾರರು ಇದ್ದಾರೆ. ಇತರೆ 141 ಮತದಾರು ಮತಗಳಿವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅತಿ ಹೆಚ್ಚು ಮಹಿಳಾ ಮತದಾರರನ್ನು ಹೊಂದಿದ್ದಾರೆ. ಮಹಿಳೆಯರೇ ಮೇಲುಗೈ ಸಾಧಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಈಗಾಗಲೇ ದೇವನಹಳ್ಳಿ, ಹೊಸಕೋಟೆ, ನೆಲಮಂಗಲ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರು ಗೆದ್ದಿದ್ದಾರೆ. ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ ಬಿಜೆಪಿ ಶಾಸಕರು ಒಬ್ಬರೇ ಗೆದ್ದಿದ್ದಾರೆ. ಬೆಂಗಳೂರು ನಗರ ಜಿಲ್ಲೆಯ ಯಲಹಂಕ ಕ್ಷೇತ್ರ, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರಲಿದೆ. ಮುಖ್ಯವಾಗಿ ಯಲಹಂಕ ಕ್ಷೇತ್ರದ ಮತಗಳು ಗೆಲುವಿನ ಲೆಕ್ಕಾಚಾರ ಅಂಶ ಆಗಿರುವುದರಿಂದ ಬಿಜೆಪಿ ಟಿಕೆಟ್ ಯಾರಿಗೆ ಸಿಗಲಿದೆ ಎಂಬ ಯಕ್ಷಪ್ರಶ್ನೆ ಕಾಡುತ್ತಿದೆ. ಲೋಕಸಭಾ ಚುನಾವಣೆಯ ಕಾವು ಇನ್ನೂ ಏರಬೇಕಿದೆ. ಲೋಕಸಭಾ ಚುನಾವಣೆಯ ತಮ್ಮ ಪಕ್ಷ ಅಭ್ಯರ್ಥಿಗಳು ಯಾರಾಗಲಿದ್ದಾರೆ ಎಂಬ ಕುತೂಹಲ ಎರಡು ಪಕ್ಷದ ಮುಖಂಡರು ಸಹ ಕಾಯುತ್ತಿದ್ದಾರೆ.

ದೇವನಹಳ್ಳಿ ದೊಡ್ಡಬಳ್ಳಾಪುರ ನೆಲಮಂಗಲ ತಾಲೂಕಿನಲ್ಲಿ ಜೆಡಿಎಸ್ ಮತಗಳು ಇದ್ದು. ಹೊಸಕೋಟೆ ಕ್ಷೇತ್ರದಲ್ಲಿ ಜೆಡಿಎಸ್ ಹೆಚ್ಚು ಪ್ರಭಾವಶಾಲಿಯಾಗಿಲ್ಲ ಸ್ಥಳೀಯರನ್ನು ಬಿಟ್ಟು ಹೊರಗಿನವರಿಗೆ ಯಾವುದೇ ಪಕ್ಷದಿಂದ ಟಿಕೆಟ್ ನೀಡಿದರೂ ಅಸಮಾಧಾನದ ಹೊಗೆ ಜೋರಾಗಲಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮೂರು ಕಾಂಗ್ರೆಸ್ ಶಾಸಕರ ಬಲ ಹೊಂದಿದೆ. ಲೋಕಸಭಾ ಚುನಾವಣೆಯಲ್ಲಿ ನಿಖರ ಲೆಕ್ಕಾಚಾರಗಳನ್ನು ಹಾಕಲು ಆಗುವುದಿಲ್ಲ ಯಾರಿಗೆ ಮತದಾರ ಒಲಿಯುತ್ತಾರೆ ಎಂಬುದು ಚುನಾವಣೆಯಲ್ಲಿ ಸ್ಪಷ್ಟ ಉತ್ತರ ಸಿಗಲಿದೆ.

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಶದಲ್ಲಿರುವ ಸಂಸದ ಸ್ಥಾನವನ್ನು ಈ ಬಾರಿ ತನ್ನ ವಶಕ್ಕೆ ಪಡೆಯಲೇಬೇಕು ಎಂದು ಕಾಂಗ್ರೆಸ್ ಅಳೆದು, ತೂಗಿ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸಾಧ್ಯತೆ ಇದೆ. ಬಿಜೆಪಿ ತನ್ನ ಲೋಕಸಭಾ ಸದಸ್ಯ ಸ್ಥಾನವನ್ನು ಉಳಿಸಿಕೊಳ್ಳಲು ಸಾಕಷ್ಟು ಪ್ರಯತ್ನಗಳನ್ನು ಮಾಡಿಕೊಂಡು, ಸಮರ್ಥ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಸಿದ್ಧತೆ ಮಾಡಿಕೊಳ್ಳುತ್ತಿದೆ. ಸ್ಥಳೀಯರಿಗೆ ಆದ್ಯತೆ ನೀಡಿದರೆ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಇತಿಹಾಸ ಮತ್ತು ಮಾಹಿತಿ ಮತ್ತು ಪ್ರತಿ ಕ್ಷೇತ್ರದ ಸಮಸ್ಯೆಗಳು. ಕ್ಷೇತ್ರದ ಪರಿಚಯ, ತಿಳಿದಿರುತ್ತದೆ ಎಂದು ಸ್ಥಳೀಯರು ಹೇಳುತ್ತಾರೆ.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ ಹೈ ವೋಲ್ಟೇಜ್ ಕ್ಷೇತ್ರಗಳಲ್ಲಿ ಒಂದಾಗಿದ್ದು ಆದರೆ ಈ ಕ್ಷೇತ್ರದಲ್ಲಿ ಚುನಾವಣೆಯ ಕಾವು ಏರದೇ ಇರುವುದು ಸಪ್ಪೆ ಯಾಗಿದೆ. ಈಗಾಗಲೇ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಂಘಟನೆಯನ್ನು ಮಾಡಿಕೊಂಡು ಬರುತ್ತಿದೆ.

## ಪಂಚ ಮಹಾರಥೋತ್ಸವ: ಪುಳಕಿತಗೊಂಡ ಭಕ್ತರು

**ನಂಜನಗೂಡು(ಮೈಸೂರು ಜಿಲ್ಲೆ):** ನಂಜನಗೂಡು ಗೌತಮ ಪಂಚ ರಥೋತ್ಸವ ಶುಕ್ರವಾರ ನೆರವೇರಿದ್ದು, ಈ ವೇಳೆ ಶ್ರೀಕಂಠಸ್ವಾಮಿಯ ದರ್ಶನ ಪಡೆಯಲು ಸಾವಿರಾರು ಮಂದಿ ಭಕ್ತರು ಸೇರಿದ್ದರು. ಅಪಾರ ಸಂಖ್ಯೆಯಲ್ಲಿ ಭಕ್ತರು ಸೇರಿ ಮುಗಿಲು ಮುಟ್ಟಿದ ಜಯಘೋಷದೊಂದಿಗೆ ಶ್ರೀಕಂಠಸ್ವಾಮಿಯ ಗೌತಮ ಪಂಚ ಮಹಾರಥೋತ್ಸವ ಇಂದು ಬೆಳಗ್ಗೆ 6.30ಕ್ಕೆ ನೆರವೇರಿತು. ನಂಜುಂಡೇಶ್ವರ ದೇವಾಲಯದ ರಥ ಬೀದಿಯಲ್ಲಿ ಜಮಾಯಿಸಿದ್ದ ಸಾವಿರಾರು ಭಕ್ತರು ಹೆಬ್ಬಾವಿನ ಗಾತ್ರದ ರಥದ ಮಿಣಿಯನ್ನು ಎಳೆದು ಹರಕೆ ಸಲ್ಲಿಸಿದರು. 'ಬಂದಾನಪ್ಪೋ ಬಂದಾನೋ... ನಂಜುಂಡಪ್ಪ ಬಂದಾನೋ... ಎಂದು ದೊಡ್ಡರಥವನ್ನು ಎಳೆಯುತ್ತಿದ್ದರೆ ನೆರೆದ ಭಕ್ತಾದಿಗಳು ಹಣ್ಣು ಮತ್ತು ತಮ್ಮ ಇಚ್ಛಾನುಸಾರ ದೇವರಿಗೆ ಎಸೆದು ನಮಿಸಿದರು. ಶ್ರೀಕಂಠಸ್ವಾಮಿಯ 110 ಟನ್ ತೂಕ ಹಾಗೂ 90 ಅಡಿ ಎತ್ತರದ ಗೌತಮ ರಥ, ಪಾರ್ವತಿ ಅಮ್ಮನವರು, ಗಣೇಶ, ಸುಬ್ರಹ್ಮಣ್ಯ ಹಾಗೂ ಚಂಡಿಕೇಶ್ವರ ಸ್ವಾಮಿ ಸೇರಿದಂತೆ 5 ರಥಗಳು ಒಂದೂವರೆ ಕಿಲೋ ಮೀಟರ್ ಉದ್ದದ ರಥಬೀದಿಯಲ್ಲಿ ಸಾಗಿದವು.

# ಯುವಕನ ವಿರುದ್ಧ ಪ್ರತಿದೂರು ದಾಖಲಿಸಿದ ಅಪ್ರಾಪ್ತೆ!

**ಯಾದಗಿರಿ:** ಭಜರಂಗ ದಳದ ಕಾರ್ಯಕರ್ತರು ತನ್ನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಯುವಕನೊಬ್ಬ ದೂರು ನೀಡಿದ ನಂತರ ಪೊಲೀಸರು ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸಲಿಸಿದ್ದಾರೆ.

ಇದರ ನಡುವೆ ದೂರು ನೀಡಿದ್ದ ಯುವಕನ ವಿರುದ್ಧವೇ ಅಪ್ರಾಪ್ತೆಯೊಬ್ಬಳು ಅಪಹರಣ, ಕಿರುಕುಳ, ಬ್ಲ್ಯಾಕ್ ಮೇಲ್ ಮತ್ತು ಬೆದರಿಕೆ ಹಾಕಿದ್ದಾನೆಂದು ಪ್ರತಿದೂರು ದಾಖಲಿಸಿದ್ದಾಳೆ.

ಯಾದಗಿರಿಯ ಡಾನ್ ಬಾಸ್ಕೋ ಕಾಲೇಜಿನಲ್ಲಿ ಬಿಎಸ್ಸಿ ಪ್ರಥಮ ಸೆಮಿಸ್ಟರ್ ಓದುತ್ತಿರುವ ವಾಹಿದ್ ಉರ್ ರೆಹಮಾನ್ ಬಾದಲ್ ಮಾರ್ಚ್ 18 ರಂದು ಕಾಲೇಜಿನಿಂದ ಹಾಲ್ ಟಿಕೆಟ್ ತೆಗೆದುಕೊಂಡು ಮನೆಗೆ ಮರಳುತ್ತಿದ್ದಾಗ ಮಲ್ಲು ಅಲಿಯಾಸ್ ಡಾಲಿ ಮತ್ತು ತಾಯಪ್ಪ ನೇತೃತ್ವದ ಎಂಟು ಜನರ ಗುಂಪು ಆತನ ಮೇಲೆ ಹಲ್ಲೆ ನಡೆಸಿ, ಬಲವಂತವಾಗಿ ಮೊಬೈಲ್ ಕಸಿದುಕೊಂಡಿದ್ದಾರೆ ಎಂದು ಯಾದಗಿರಿ ಟೌನ್ ಪೊಲೀಸ್ ಠಾಣೆಯಲ್ಲಿ ಮಾ.19 ರಂದು ದೂರು ದಾಖಲಾಗಿದೆ.

ನಂತರ ತಂಡವು ಆತನನ್ನು ಜವಾಹರ ಪದವಿ ಕಾಲೇಜಿನ ಹಿಂದೆ ಕರೆದೊಯ್ದು ನಿಂದಿಸಿ, ಹುಡುಗಿಯನ್ನು ಈವ್ ಟೀಸಿಂಗ್ ಮಾಡುತ್ತಿದ್ದಾನೆ ಎಂದು ಆರೋಪಿಸಿ ಬೆಲ್ಟ್, ಪ್ಲಾಸ್ಟಿಕ್ ಪೈಪ್, ದೊಣ್ಣೆಗಳಿಂದ ಹಲ್ಲೆ ನಡೆಸಿ ಗಾಯಗೊಳಿಸಿದ್ದಾರೆ. ಅವರು ನನ್ನನ್ನು ಕೊಲ್ಲಲು ಬಯಸಿದ್ದರು, ಆದರೆ ನಾನು ತಪ್ಪಿಸಿಕೊಂಡು ಮನೆಗೆ





ಬಂದು ನಂತರ ಆಸ್ಪತ್ರೆಗೆ ಹೋಗಿದ್ದಾಗಿ ಹೇಳಿದ್ದಾರೆ. ಮಲ್ಲು, ತಾಯಪ್ಪ, ಅಂಬರಸಿ, ಆದರ್ಶಗೌಡ, ಪವನಕುಮಾರ್, ಜಂಬು ಸೋಲಂಕಿ, ಬಾಪು ಸೋಲಂಕಿ ಮತ್ತು ರೂಪೇಶ್ ಕೋಳಿವಾಡ ಅವರು ಹಲ್ಲೆ ಮಾಡಿದ ಆರೋಪಿಗಳೆಂದು ದೂರಿನಲ್ಲಿ ವಾಹಿದ್ ಉಲ್ಲೇಖಿಸಿದ್ದಾರೆ.

ಮಾರ್ಚ್ 20 ರಂದು ಅಪ್ರಾಪ್ತ ಬಾಲಕಿಯೊಬ್ಬಳು ವಾಹಿದ್ ತನ್ನನ್ನು ಹಲವು ದಿನಗಳಿಂದ ಚುಡಾಯಿಸುತ್ತಿದ್ದ, ಕೆಲವು ದಿನಗಳ ಹಿಂದೆ ಬಲವಂತವಾಗಿ ಹತ್ತಿಕುಣಿ ಅಣೆಕಟ್ಟಿನ ಬಳಿ ತನ್ನನ್ನು ಕರೆದೊಯ್ದು ಕಿರುಕುಳ ನೀಡಿದ್ದಾನೆ ಎಂದು ದೂರು ನೀಡಿದ್ದಾಳೆ, ಆತನ ಸ್ನೇಹಿತನೊಬ್ಬ ಘಟನೆಯನ್ನು ವಿಡಿಯೋ ಗ್ರಾಫ್ ಮಾಡಿದ್ದಾನೆ. ನನ್ನನ್ನು ಮದುವೆಯಾಗುವುದಾಗಿ ಹೇಳಿದ್ದಾನೆ, ಅವನ ಸಮುದಾಯದಲ್ಲಿ ಅಪ್ರಾಪ್ತ ಬಾಲಕಿಯನ್ನು ಮದುವೆಯಾಗಲು ಯಾವುದೇ ನಿರ್ಬಂಧವಿಲ್ಲ. ಮದುವೆಯ ನಂತರ ಅವಳು ಉತ್ತಮ ಜೀವನವನ್ನು ನಡೆಸಬಹುದು ಎಂದು ಹೇಳಿದ್ದ ಎಂದು ಬಾಲಕಿ ದೂರಿನಲ್ಲಿ ತಿಳಿಸಿದ್ದಾಳೆ.

ಕೆಲವು ದಿನಗಳ ಹಿಂದೆ, ವಾಹಿದ್ ತನ್ನ ಮಾತು ಕೇಳದಿದ್ದರೇ ವೀಡಿಯೊ ಕ್ಲಿಪ್ಪಿಂಗ್ ಅನ್ನು ಸಾಮಾಜಿಕ ಮಾಧ್ಯಮದಲ್ಲಿ ಅಪ್‌ಲೋಡ್ ಮಾಡುವುದಾಗಿ ಬೆದರಿಕೆ ಹಾಕುವುದರ ಜೊತೆಗೆ ಬ್ಲಾಕ್‌ಮೇಲ್ ಮಾಡಲು ಪ್ರಾರಂಭಿಸಿದನು, ನಾನು ಅವನ ಮಾತನ್ನು ಕೇಳದಿದ್ದರೆ ಆತ ನನ್ನನ್ನು ಮತ್ತು ನನ್ನ ತಾಯಿಯನ್ನು ಕೊಲ್ಲುವುದಾಗಿ ಹೇಳಿದ್ದ, ಇದರಿಂದ ನಾನು ಸಂಬಂಧಿ ಜಂಬು ಸೋಲಂಕಿ ಅವರಿಗೆ ವಿಷಯ ತಿಳಿಸಿರುವುದಾಗಿ ಬಾಲಕಿ ಹೇಳಿದ್ದಾಳೆ.

ಜಂಬು ಸೋಲಂಕಿ, ಆಕೆಯ ತಾಯಿ, ತಂದೆ ಮತ್ತು ಇತರ ಕೆಲವು ಸಂಬಂಧಿಕರು ವಾಹಿದ್ ಅವರ ಮನೆಗೆ ಹೋಗಿ ಅವರ ಸಂಬಂಧಿಕರಾದ ಲಾಯಕ್ ಹುಸೇನ್ ಬಾದಲ್, ಇರ್ಫಾನ್ ಬಾದಲ್, ತನ್ವೀರ್ ಬಾದಲ್, ಮುಜೀಬ್ ಬಾದಲ್, ಮತೀನ್ ಗೋರಿ, ಗೋರಿ, ತಜ್ಮುಲ್, ಇಜಾಜ್ ಬಾದಲ್, ಇಮ್ರಾನ್ ಬಾದಲ್, ಮೌಲಾಲಿ ಅವರಿಗೆ ತಿಳಿಸಿದ್ದಾರೆ. ಬಾದಲ್, ಶಹಬಾಜ್ ಬಾದಲ್, ಆಸಿಫ್ ಮತ್ತು ಖುರಾಮ್ ಬಾದಲ್ ವಾಹಿದ್ ಬಾಲಕಿಗೆ ಕಿರುಕುಳ ನೀಡುತ್ತಿರುವುದಾಗಿ ತಿಳಿಸಿದೆವು.

ವಾಹಿದ್‌ನ ಸಂಬಂಧಿಕರು ಇಂತಹ ಸಂಗತಿಗಳು ಸಾಮಾನ್ಯ ಮತ್ತು ಯಾರೂ ಅವರನ್ನು ಏನೂ ಮಾಡಲು ಸಾಧ್ಯವಿಲ್ಲ ಎಂದು ತನ್ನ ಸಂಬಂಧಿಕರಿಗೆ ಹೇಳಿದರು, ಜೊತೆಗೆ ನನ್ನ ಸಂಬಂಧಿಕರಿಗೆ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ದೂರಿನ ಆಧಾರದ ಮೇಲೆ ಪೊಲೀಸರು ವಾಹಿದ್ ಮತ್ತು ಆತನ ಸ್ನೇಹಿತರು ಮತ್ತು ಸಂಬಂಧಿಕರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

## ಸಂತ್ರಸ್ತೆ ಮೇಲೆ ಸಾಮೂಹಿಕ ಅತ್ಯಾಚಾರ ಸಾಬೀತು: ಮೂವರಿಗೆ ಕಠಿಣ ಶಿಕ್ಷೆ

**ಮಂಡ್ಯ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂತ್ರಸ್ತೆ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದ ನಾಲ್ಕು ಜನ ಆರೋಪಿಗಳಲ್ಲಿ ಮೂರು ಜನ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ಮತ್ತು ದಂಡ ವಿಧಿಸಿ ಮಂಡ್ಯದ ಐದನೇ ಅಪರ ಜಿಲ್ಲಾ ಮತ್ತು ಸತ್ರನ್ಯಾಯಾಲಯದ ನ್ಯಾಯಾದೀಶರಾದ ಕೆ.ನಿರ್ಮಲಾ ಅವರು ಆದೇಶ ನೀಡಿದ್ದಾರೆ. 2015 ರಲ್ಲಿ ಈ ಘಟನೆ ನಡೆದಿದ್ದು ಸಂತ್ರಸ್ತೆಯು, ಮೈಸೂರು ಜಿಲ್ಲೆಯ ಕೆ.ಆರ್. ಮಿಲ್ ಕಾಲೋನಿ ನಿವಾಸಿ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ದ್ವಿತೀಯ ಬಿ.ಎ. ವ್ಯಾಸಂಗ ಮಾಡುತ್ತಿದ್ದರು ಎನ್ನಲಾಗಿದೆ. ಈ ಸಂದರ್ಭದಲ್ಲಿ ಕೀರ್ತಿಗೌಡ ಎಂಬುವವನು ಪ್ರೀತಿಸುತ್ತಿದ್ದನು, ಇದನ್ನೇ ಬಂಡವಾಳವಾಗಿಸಿಕೊಂಡು ಈ ಕೀರ್ತಿಗೌಡನು ಮೊದಲು ಕೆ.ಆರ್.ಎಸ್ ಕರೆದೋಯ್ದು ನಂತರ ಪಾಂಡಪುರ ತಾಲ್ಲೂಕಿನ ಚಿನಕುರುಳಿ ಹೋಬಳಿಯ ಬೇಬಿ ಬೆಟ್ಟಕ್ಕೆ ಕರೆದೋಯ್ದು ನಿರ್ಜನ ಪ್ರದೇಶದಲ್ಲಿ ಮೊದಲು ಅತ್ಯಾಚಾರ ಮಾಡಿದ್ದಾನೆ, ನಂತರ ಎರಡನೇ ಆರೋಪಿ ಕಿರಣ್‌ಗೌಡ ಮತ್ತು ಮೂರನೇ ಆರೋಪಿ ಮೋಹನ್ ಮತ್ತು ನಾಲ್ಕನೇ ಆರೋಪಿ ಮಂಜುನಾಥ್ ರಸ್ತೆಯಲ್ಲಿ ನಿಂತಿದ್ದು ನಂತರ ಎರಡನೇ ಆರೋಪಿ ಮತ್ತು ಮೂರನೇ ಆರೋಪಿ ಸಂತ್ರಸ್ಥೆ ಜೊತೆ ಮಾತನಾಡುವುದಾಗಿ ಕರೆದುಕೊಂಡ ಹೋಗಿ ಅತ್ಯಾಚಾರ ಮಾಡಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಅಳುತ್ತಿರುವ ಸಂತ್ರಸ್ಥೆಯನ್ನು ನೋಡಿದ ನಾಲ್ಕನೇ ಆರೋಪಿಯು ಶ್ರೀರಂಗಪಟ್ಟಣಕ್ಕೆ ಬಿಟ್ಟು ಹೋಗಿರುತ್ತಾನೆ, ಈ ಪ?ರಕರಣವು ಪಾಂಡವಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಶ್ರೀರಂಗಪಟ್ಟಣದ ಉಪ ವಿಭಾಗದ ಡಿವೈಎಸ್‌ಪಿ ಎನ್.ಸಿದ್ದೇಶ್ವರ್ ಆರೋಪಿಗಳ ವಿರುದ್ಧ ಮಂಡ್ಯ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ನಂತರ ಸದರಿ ಮೊಕದ್ದಮೆಯು ಸಾಬೀತಾದ ಹಿನ್ನೆಲಯಲ್ಲಿ ಮೂವರು ಆರೋಪಿಗಳಿಗೆ ಜೀವಾವಧಿ ಶಿಕ್ಷೆ, ತಲಾ 50 ಸಾವಿರ ರೂ.ದಂಡ, ಪಿಓಎ ಕಾಯ್ದೆಯಡಿ ಕಠಿಣ ಶಿಕ್ಷೆ ಮತ್ತು ಭಾದಂಸಂ ಕಾಯಿದೆ 376ರಡಿಯಲ್ಲಿ 20 ವರ್ಷ ಕಠಿಣ ಶಿಕ್ಷೆ ಮತ್ತು 40 ಸಾವಿ ರೂ.ದಂಡ ಹಾಗೂ ಭಾದಂಸಂ ಕಾಯಿದೆ 506 ಅಡಿಯಲ್ಲಿ 5 ಸಾವಿರ ರೂ ದಂಡ ಮತ್ತು ಕಠಿಣ ಶಿಕ್ಷೆ ನೀಡಲಾಗಿದೆ. ನೊಂದ ಸಂತ್ರಸ್ತೆಗೆ 2.80 ಲಕ್ಷ ರೂ. ಪರಿಹಾರ ನೀಡಬೇಕು ಎಂದು ತೀರ್ಪು ನೀಡಿ ಆದೇಶಿಸಲಾಗಿದೆ.

## ಮತದಾನ ಜಾಗೃತಿ

**ವಿಜಯಪುರ:** ಪಟ್ಟಣದ ಪುರಸಭೆ ಆವರಣದಿಂದ ಬುಧವಾರ ಪಟ್ಟಣದ ಪ್ರಮುಖ ಬೀದಿಗಳಿಗೆ ಮೆರವಣಿಗೆಯ ಮೂಲಕ ತೆರಳಿದ ಪುರಸಭೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತದಾನ ಜಾಗೃತಿ ಮೂಡಿಸಿದರು. ಈ ವೇಳೆ ಮುಖ್ಯಾಧಿಕಾರಿ ಜಿ.ಆರ್. ಸಂತೋಷ್ ಮಾತನಾಡಿ, ಯಾವ ಯಾವ ಮತಗಟ್ಟೆಗಳಲ್ಲಿ ಕಳೆದ ಚುನಾವಣೆಯಲ್ಲಿ ಮತದಾನ ಪ್ರಮಾಣ ಕಡಿಮೆಯಾಗಿದೆಯೋ ಅಂತಹ ಮತಗಟ್ಟೆಗಳಲ್ಲಿ ಮತದಾನದ ಪ್ರಮಾಣ ಹೆಚ್ಚಿಸಬೇಕಾಗಿದೆ. ಪಟ್ಟಣದಲ್ಲಿ 33 ಮತಗಟ್ಟೆಗಳಿದ್ದು, 6 ಮತಗಟ್ಟೆಗಳಲ್ಲಿ ಕಳೆದ ಚುನಾವಣೆಯಲ್ಲಿ ಮತದಾನ ಪ್ರಮಾಣ ಕಡಿಮೆಯಾಗುತ್ತಿದೆ. ಆದ್ದರಿಂದ ಅಂತಹ ಮತಗಟ್ಟೆಗಳಿರುವ ವಾರ್ಡುಗಳಿಗೆ ತೆರಳಿ ಮತದಾರರಿಗೆ ಜಾಗೃತಿ ಮೂಡಿಸಲಾಗುತ್ತದೆ.ಪ್ರಜಾಪ್ರಭುತ್ವದಲ್ಲಿ ಮತದಾನ ಮಾಡುವುದು ಒಂದು ಪವಿತ್ರವಾದ ಕಾರ್ಯವಾಗಿದ್ದು, ಯುವಮತದಾರರು ಸೇರಿದಂತೆ ಪ್ರತಿಯೊಬ್ಬರೂ ಮತಗಟ್ಟೆಗಳಿಗೆ ಬಂದು ಮತದಾನ ಮಾಡುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕು ಎಂದರು. ಕಂದಾಯ ನಿರೀಕ್ಷಕ ತ್ಯಾಗರಾಜ್ ಮಾತನಾಡಿ, ಪ್ರತಿಯೊಬ್ಬ ಮತದಾರನು ಯಾವುದೇ ಆಸೆ, ಆಮಿಷಗಳಿಗೆ ಒಳಗಾಗದೇ ಮತಗಟ್ಟೆಗೆ ಹೋಗಿ ಮತದಾನ ಮಾಡಬೇಕು. ಇತರರಿಗೂ ಮತದಾನ ಮಾಡುವಂತೆ ಅರಿವು ಮೂಡಿಸುವುದು ಇಂದಿನ ಅಗತ್ಯವಾಗಿದೆ. ಹೊಸದಾಗಿ ಮತದಾರರ ಪಟ್ಟಿಗೆ ಸೇರ್ಪಡೆಯಾಗಿರುವ ಯುವ ಮತದಾರರಿಗೆ ಮತಯಂತ್ರದಲ್ಲಿ ಮತದಾನ ಮಾಡುವ ಬಗ್ಗೆಯೂ ಜಾಗೃತಿ ಮೂಡಿಸಲಾಗುತ್ತದೆ ಎಂದರು. ಪುರಸಭೆ ಸಿಬ್ಬಂದಿಯಾದ ಅನಿಲ್, ಪವನ್ ಜ್ಯೋಶಿ, ಜನಾರ್ಧನ, ಸುನೀಲ್, ಮಂಜುನಾಥ್, ಪೃಥ್ವಿ, ಹೇಮಾವತಿ, ಲಿಂಗಣ್ಣ, ಕುಮಾರ್, ಮಂಜುನಾಥ್, ಹೇಮಂತ್ ಕುಮಾರ್, ಇದ್ದರು.




## ಕಾವ್ಯಾತ್ಮಕ ಅಭಿವ್ಯಕ್ತಿಯ ಮೂಲಕ ಭಾಷಾ ವೈವಿಧ್ಯತೆಯನ್ನು ಉಳಿಸುವ ಪ್ರಯತ್ನ ಮಾಡಬೇಕು

**ಕೋಲಾರ:** ಕವಿಯಾದವನು ಭಾಷಾ ಪ್ರಭುತ್ವವನ್ನು ಅರಿತು ಅದರ ಆಗುಹೋಗುಗಳ ಬಗ್ಗೆ ಚಿಂತಿಸಬೇಕೆಂದು ಜಿಲ್ಲಾ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ಜಿ. ಶ್ರೀನಿವಾಸ ಅಭಿಪ್ರಾಯ ಪಟ್ಟರು ಕೋಲಾರ ನಗರದಲ್ಲಿ ಗುರುವಾರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು ವತಿಯಿಂದ ಜಿಲ್ಲಾ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಕಾವ್ಯ ದಿನಾಚರಣೆಯಲ್ಲಿ ಮಾತನಾಡಿದರು. ಆಧುನಿಕತೆಯಲ್ಲಿ ಅಳಿವಿನಂಚಿನಲ್ಲಿರುವ ಭಾಷೆಗಳನ್ನು ಕೇಳಲು ಅವಕಾಶವನ್ನು ಸೃಷ್ಟಿಸುವ ಅಥವಾ ಹೆಚ್ಚಿಸುವ ಉದ್ದೇಶದಿಂದ ವಿಶ್ವ ಕಾವ್ಯ ದಿನ ಆಚರಿಸಲಾಗುತ್ತದೆ. ಕಾವ್ಯದಿನದ ಇತಿಹಾಸದ ಮಹತ್ವವನ್ನು ತಿಳಿಯುವ ಮತ್ತು ಬೆಳೆಸುವ ಮನೋಭಾವನೆಯನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕಾಗಿದೆ ಎಂದರು ಅಭಿನಂದನೆಯನ್ನು ಸ್ವೀಕರಿಸಿ ಮಾತಾನಾಡಿದ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪಿ.ನಾರಾಯಣಪ್ಪ ಮಾತಾನಾಡಿ ವಿಶ್ವ ಕವನ ಈ ದಿನವನ್ನು ಯುನೆಸ್ಕೋ 1999 ರಲ್ಲಿ ಪ್ಯಾರಿಸ್‌ನಲ್ಲಿ ನಡೆದ 30 ನೇ ಸಾಮಾನ್ಯ ಸಮ್ಮೇಳನದಲ್ಲಿ ಮೊದಲು ಅಂಗೀಕರಿಸಿತು.ಇದನ್ನು ವಾರ್ಷಿಕವಾಗಿ ಮಾರ್ಚ್ 21 ರಂದು ಆಚರಿಸಲಾಗುತ್ತದೆ.ಪದಗಳ ಅಮೂರ್ತತೆ ಮತ್ತು ಸೌಂದರ್ಯವನ್ನು ಆಚರಿಸುವ ಸಾಹಿತ್ಯದ ಒಂದು ರೂಪವೆಂದು ಕಾವ್ಯವನ್ನು ವ್ಯಾಖ್ಯಾನಿಸಬಹುದು.ಚಿತ್ರಣ ಮತ್ತು ರೂಪಕದ ಶಕ್ತಿಯ ಮೂಲಕ ಮಾನವ ಪರಿಸ್ಥಿತಿಗಳನ್ನು ಅನ್ವೇಷಿಸುವುದು ಕವಿತೆಯ ಉದ್ದೇಶವಾಗಿದೆ ಎಂದರು. ಕವಿ ಲಕ್ಷ್ಮಯ್ಯ ಮಾತಾನಾಡಿಈ ದಿನವು ಹೊಸ ತಲೆಮಾರುಗಳಲ್ಲಿನ ಕವಿ ಕಾವ್ಯವನ್ನು ಪರಿಚಯಿಸುವ, ಅರ್ಥೈಸುವ ಸಂಪ್ರದಾಯವನ್ನು ಮುಂದುವರಿಸುವ ಮುಂದುವರೆಸಬೇಕು ಹಾಗೂ ಕವಿಗಳನ್ನು ಗೌರವಿಸಿದಾಗ ಮಾತ್ರ ಕಾವ್ಯ ಕಾಲಕಾಲಕ್ಕೂ ಉಳಿಯಲು ಸಾಧ್ಯ ಎಂದರು. ಕವಿ ಇಂಚರ ನಾರಾಯಣಸ್ವಾಮಿ ಮಾತಾನಾಡಿ ವಿಶ್ವ ಕಾವ್ಯ ದಿನವನ್ನು ಪ್ರಪಂಚದಾದ್ಯಂತ ಓದುವಿಕೆಯ ಹಾಗೂ ಸಾಧನೆಯ ಕವಿಗಳನ್ನು ಗೌರವಿಸುವ ಜೊತೆಗೆ ಮಹತ್ವಾಕಾಂಕ್ಷಿ ಬರಹಗಾರರಿಗೆ ಕೌಶಲಗಳನ್ನು ಕಲಿಸುವ ಮೂಲಕ ಆಚರಿಸಲಾಗುತ್ತದೆ.ಆದ್ದರಿಂದ, ಇದು ಕಾವ್ಯಕ್ಕೆ ಮೀಸಲಾದ ದಿನವಾಗಿದೆ, ಇದು ಸಹಸ್ರಾರು ವರ್ಷಗಳಿಂದ ಉಳಿದುಕೊಂಡಿರುವ ಮತ್ತು ಇಂದಿನ ಮಾನವರ ಜೀವನವನ್ನು ಶ್ರೀಮಂತಗೊಳಿಸುವುದನ್ನು ಮುಂದುವರೆಸುವ ಕಲಾ ಪ್ರಕಾರವಾಗಿದೆ ಎಂದರು.

## ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಮಲ್ಲಿಕಾರ್ಜುನ್ ಪತ್ನಿಗೆ ಟಿಕೆಟ್

**ದಾವಣಗೆರೆ:** ಲೋಕಸಭೆ ಚುನಾವಣೆ ಹಿನ್ನೆಲೆ ರಾಜ್ಯದಲ್ಲಿ ಟಿಕೆಟ್‌ಗಾಗಿ ಭಾರೀ ಪೈಪೋಟಿ ನಡೆಯುತ್ತಿದ್ದು, ಈಗಾಗಲೇ ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಜಿ.ಎಂ.ಸಿದ್ದೇಶ್ವರ್ ಪತ್ನಿ ಗಾಯತ್ರಿ ಸಿದ್ದೇಶ್ವರ ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ. ಇನ್ನು ಇವರ ಪ್ರತಿಸ್ಪರ್ಧಿಯಾಗಿ ಕಾಂಗ್ರೆಸ್‌ನಿಂದ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪತ್ನಿ ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಇಂದು (ಮಾರ್ಚ್ 21) ಟಿಕೆಟ್ ಘೋಷಣೆ ಮಾಡಲಾಗಿದೆ.

**ವಿನಯ್ ಕುಮಾರ್‌ಗೆ ತಪ್ಪಿದ ಕೈ ಟಿಕೆಟ್:** ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಪತ್ನಿ ಡಾ.ಪ್ರಭಾ ಮಲ್ಲಿಕಾರ್ಜುನ್ ಇಲ್ಲವೇ ಯುವ ಕಾಂಗ್ರೆಸ್ ನಾಯಕ ಜಿ.ಬಿ.ವಿನಯ್ ಕುಮಾರ್ ನಡುವೆ ನೇರ ಹಣಾಹಣಿ ನಡೆಯುತ್ತಿತ್ತು. ಆದರೆ ಕೊನೆಗೂ ಎಸ್.ಎಸ್.ಮಲ್ಲಿಕಾರ್ಜುನ್ ಪತ್ನಿ ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಕಾಂಗ್ರೆಸ್ ಟಿಕೆಟ್ ಘೋಷಣೆ ಮಾಡಿದೆ.

# ಹಣವಿಲ್ಲ, ಬೋರವೆಲ್ ಕೂರೆಯುವವರು ಬರುತ್ತಿಲ್ಲ

**ತಿಪಟೂರು:** ಜನ-ಜಾನುವಾರುಗಳಿಗೆ ಕುಡಿಯುವ ನೀರು, ಜಾನುವಾರುಗಳ ಮೇವಿನ ಸಮಸ್ಯೆ ಆಗದಂತೆ ಸರಿಯಾಗಿ ವ್ಯವಸ್ಥೆ ಮಾಡಬೇಕು ಅಧಿಕಾರಿಗಳು ಉಡಾಫೆ ಉತ್ತರಗಳನ್ನು ನೀಡದೆ ಕರ್ತವ್ಯ ನಿರ್ವಹಿಸಿ, ಸಾರ್ವತ್ರಿಕ ಚುನಾವಣೆಯಷ್ಟೇ ಬರ ಪರಿಸ್ಥಿತಿಯನ್ನು ಅರಿತು ಕರ್ತವ್ಯ ಮಾಡಿ ಎಂದು ಉಪವಿಭಾಗಾಧಿಕಾರಿ ಬಿ.ಕೆ. ಸಪ್ತಶ್ರೀ ಅಧಿಕಾರಿಗಳಿಗೆ ಖಡಕ್ ಸಂದೇಶ ನೀಡಿದರು. ನಗರದ ತಾಲೂಕು ಆಡಳಿತದ ಸೌಧದ ಕಚೇರಿಯಲ್ಲಿ ಬುಧವಾರ ಕರೆದಿದ್ದ ತಾಲೂಕು ಮಟ್ಟದ ಟಾಸ್ಕ್‌ಫೋರ್ಸ್ ಸಮಿತಿ ಸಭೆಯಲ್ಲಿ ಮಾತನಾಡಿದರು. ಗ್ರಾಮೀಣ ಬಾಗದಲ್ಲಿ ಕುಡಿಯುವ ನೀರಿಗೆ ಸಮಸ್ಯೆಗಳು ಪ್ರಾರಂಭವಾಗುತ್ತಿರುವಾಗ ಯಾವ ರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರೆಂದು ಕೇಳಿದಾಗ ಸಂಬಂಧಪಟ್ಟ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಚಂದ್ರಶೇಖರ್ ಟಾಸ್ಕ ಫೋರ್ಸ್ ಸಮಿತಿಯ ಸಭೆಯಲ್ಲಿ ಇಲಾಖೆಯಲ್ಲಿ ಹಣವಿಲ್ಲ, ಬೋರವೆಲ್ ಕೂರೆಯುವವರು ಬರುತ್ತಿಲ್ಲ, ನಾವೇನು ಮಾಡಲು ಸಾಧ್ಯವಿಲ್ಲ ಎಂದು ಏರು ಧ್ವನಿಯಲ್ಲಿ ಉತ್ತರಿಸಿ, ಉಡಾಫೆ ಉತ್ತರ ನೀಡಿದಾಗ ಉಪವಿಭಾಗಧಿಕಾರಿಗಳು ಸಿಟ್ಟಾದರು. ಸೂಕ್ಷ್ಮ ಪರಿಸ್ಥಿತಿಯಲ್ಲಿ ಕರ್ತವ್ಯ ನಿರ್ವಹಿಸದೆ ಕಾಲಹರಣ ಮಾಡುವ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುವಂತೆ ಸಿಇಒ ಹಾಗೂ ಜಿಲ್ಲಾಧಿಕಾರಿಗಳಿಗೆ ಶಿಸ್ತುಕ್ರಮಕ್ಕೆ ಆದೇಶಮಾಡಲಾಗುವುದು ಎಂದರು. ಜನ ಹಾಗೂ ಜಾನುವಾರುಗಳ ಕುಡಿಯುವ ನೀರಿಗೆ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ. ಸಂಬಂದಿಸಿದ ಯಾವುದೇ ಅಧಿಕಾರಿಗಳು ಯಾವುದೇ ನೆಪ ಹೇಳಕೂಡದು. ಚುನಾವಣಾ ಕೆಲಸವಿದೆ ಎಂದು ನೆಪ ಹೇಳಿಕೊಂಡು ಜನರಿಗೆ ನೀರಿನ ಸಮಸ್ಯೆ ಹೆಚ್ಚಾಗುವಂತೆ ಮಾಡಕೂಡದು. ಚುನಾವಣೆಯಷ್ಟೇ ಮುಖ್ಯ ಬರದ ಸಮಸ್ಯೆಯೂ ಆಗಿರುವುದರಿಂದ ಎಲ್ಲ ಅಧಿಕಾರಿಗಳು ಬರದಿಂದ ಉಂಟಾಗುತ್ತಿರುವ ಸಮಸ್ಯೆಗಳಿಗೆ ಆಧ್ಯತೆ ನೀಡಿ ಕೆಲಸ ಮಾಡಬೇಕು. ಯಾರೂ ಮೇಲಧಿಕಾರಿಗಳ ಅನುಮತಿ ಇಲ್ಲದೆ ರಜೆ ಹಾಕಕೂಡದು. ಎಲ್ಲರೂ ಕರ್ತವ್ಯನಿರತ ಸ್ಥಳದಲ್ಲೇ ಇರಬೇಕು. ಒಂದು ಇಲಾಖೆಯ ಜೊತೆ ಸಂಬಂದಿಸಿದ ಇಲಾಖೆಗಳು ಪರಸ್ಪರ ಕೈಜೋಡಿಸಿ ನೀರು ಮತ್ತಿತರೆ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ಮಾಡಬೇಕು. ತಹಶೀಲ್ದಾರ್ ಪವನ್ ಕುಮಾರ್ ಮಾತನಾಡಿ ಯಾವುದೇ ಗ್ರಾಮಗಳಲ್ಲಿ ಶುದ್ಧಕುಡಿಯುವ ನೀರಿನ ಘಟಕಗಳು ಕೆಟ್ಟು ನಿಂತಿದ್ದರೆ ಕೂಡಲೆ ಸರಿಪಡಿಸಿ ಶುದ್ಧಕುಡಿಯುವ ನೀರು ನೀಡಬೇಕು. ಗ್ರಾಮಗಳಲ್ಲಿನ ಟ್ಯಾಂಕಗಳ ಸ್ವಚ್ಚತೆಗೆ ಆಧ್ಯತೆ ನೀಡಬೇಕು. ಜಾನುವಾರುಗಳಿಗೆ ಕುಡಿಯಲು ನಿರ್ಮಿಸಿರುವ ನೀರಿನ ತೊಟ್ಟಿಗ್ಗಳಿಗೆ ಕೊರತೆ ಇಲ್ಲದಂತೆ ನೀರು ಹರಿಸಬೇಕು. ಸಮಸ್ಯೆ ಉಂಟಾದ ಮೇಲೆ ತೊಂದರೆಯಾದಲ್ಲಿ ಸಂಬಂದಿಸಿದವರ ಮೇಲೆ ನಿರ್ಧಾಕ್ಷಿಣ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು. ಇಓ ನಾಗರಾಜು ಮಾತನಾಡಿ ನಮ್ಮ ಎಲ್ಲ ಪಿಡಿಓಗಳಿಗೆ ನೀರಿನ ಸಮಸ್ಯೆ ಬರದಂತೆ ನೋಡಿಕೊಳ್ಳಲು ತಿಳಿಸಲಾಗಿದ್ದು ಬರದ ಸಮಸ್ಯೆಗಳಿಗೆ ಮೊದಲ ಆಧ್ಯತೆ ನೀಡಿ ಕೆಲಸ ಮಾಡುವುದಾಗಿ ತಿಳಿಸಿದರು. ತೋಟಗಾರಿಕೆ ಇಲಾಖೆಯ ನಿರ್ದೇಶಕ ಚಂದ್ರಶೇಖರ ಮಾತನಾಡಿ ನಮ್ಮ ತೋಟಗಾರಿಕೆ ಇಲಾಖೆಯಿಂದ 3ಎಕರೆಯಲ್ಲಿ ಮೇವು ಬೆಳೆಸಿ ನೀಡಲು ಮುಂದಾಗುವುದಾಗಿ ತಿಳಿಸಿದರು. ಪಶು ಇಲಾಖೆಯ ಸಹಾಯಕ ನಿರ್ದೇಶಕ ಡಾ. ನಂದೀಶ್ ಮಾತನಾಡಿ, ನೀರು ಮತ್ತು ವಿದ್ಯುತ್ ಅಭಾವದಿಂದ ರೈತರು ಸರಿಯಾಗಿ ಮೇವನ್ನು ಬೆಳೆಯಲು ಸಾಧ್ಯವಾಗುತ್ತಿಲ್ಲ ಎಂದರು.



# ದೇಶಕಾಯುವಸೈನಿಕಅನ್ನಕೊಡುವ ರೈತನನ್ನುಮರೆಯಬಾರದು

**ರಂಭಾಪುರಿ ಪೀಠ(ಬಾಳೆಹೊನ್ನೂರು):** ಶ್ರಮದ ಬೆವರಿನ ಫಲ ಶಾಶ್ವತ ಮತ್ತು ಸುಖದಾಯಕ. ಶ್ರಮವಿಲ್ಲದೇ ಬಂದ ಸಂಪತ್ತು ಬಹಳ ಕಾಲ ಉಳಿಯದು. ದೇಶವನ್ನು ಕಾಯುವ ಸೈನಿಕ ಮತ್ತು ಅನ್ನ ಕೊಡುವ ರೈತನನ್ನು ಎಂದಿಗೂ ಮರೆಯಬಾರದೆಂದು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು. ಅವರು ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಕ್ಷೇತ್ರನಾಥ ವೀರಭದ್ರಸ್ವಾಮಿ ಮಹಾರಥೋತ್ಸವದ ಅಂಗವಾಗಿ ಜರುಗಿದ ಸಾವಯವ ಕೃಷಿ ಒಂದು ಚಿಂತನ ಗೋಷ್ಠಿಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು. ಭಾರತ ಹಳ್ಳಿಗಳ ದೇಶ. ಹಳ್ಳಿಗಳು ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿಯಾಗಲು ಸಾಧ್ಯ. ನೂರಕ್ಕೆ ಎಪ್ಪತ್ತರಷ್ಟು ಜನರು ರೈತರಿದ್ದಾರೆ. ಮನುಷ್ಯನ ಉಜ್ವಲ ಭವಿಷ್ಯಕ್ಕೆ ಆಹಾರ ಆರೋಗ್ಯ ಮತ್ತು ಆಧ್ಯಾತ್ಮ ಬಹಳ ಮುಖ್ಯ. ರಾಸಾಯನಿಕ ಗೊಬ್ಬರಗಳ ಬಳಕೆಯಿಂದಾಗಿ ಭೂಮಿಗಳು ಬರಡಾಗುತ್ತಿವೆ. ರಾಸಾಯನಿಕ ಗೊಬ್ಬರದಿಂದ ಬೆಳೆದ ಪದಾರ್ಥಗಳ ಸೇವನೆಯಿಂದ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಉಂಟಾಗುತ್ತವೆ. ಸತ್ವಭರಿತ ಬೆಳೆಯನ್ನು ಬೆಳೆಯಬೇಕಾದರೆ ಸಾವಯವ ಕೃಷಿಯ ಅವಶ್ಯಕತೆಯಿದೆ. ಸಾವಯವ ಕೃಷಿಯಿಂದ ಬಂದ ಫಸಲುಗಳ ಬಳಕೆಯಿಂದ ಮನುಷ್ಯನ ಆರೋಗ್ಯ ಹೆಚ್ಚುವುದರಲ್ಲಿ ಯಾವುದೇ ಸಂದೇಹವಿಲ್ಲ. ಔದ್ಯೋಗಿಕ ಕ್ಷೇತ್ರಕ್ಕೆ ಕೊಡುವ ಸಹಕಾರವನ್ನು ಸಾವಯವ ಕೃಷಿ ಮಾಡುವ ರೈತನಿಗೆ ಸರ್ಕಾರಗಳು ರೈತನಿಗೆ ಕೊಟ್ಟರೆ ಅದ್ಭುತ ಸಾಧನೆಯನ್ನು ಮಾಡಲು ಸಾಧ್ಯ. ಮನುಷ್ಯ ಸ್ವೀಕರಿಸುವ ಆಹಾರ ವಸ್ತುಗಳು ಕಲಬೆರಕೆಯಿಂದ ಕಲುಷಿತಗೊಂಡಿವೆ. ಭೂಮಿ ಫಲವತ್ತಾಗಲು ಸಾವಯವ ಕೃಷಿಯನ್ನು ರೈತರು ಅಳವಡಿಸಿಕೊಂಡು ಉತ್ತಮ ಬೆಳೆ ಬೆಳೆದಾಗ ಯೋಗ್ಯ ಬೆಲೆಯನ್ನು ಸರ್ಕಾರ ದೊರಕಿಸಿಕೊಟ್ಟರೆರೈತರಬಾಳು ಉಜ್ವಲಗೊಳ್ಳಲು ಸಾಧ್ಯ. ರೈತರ ಹೆಸರಿನಲ್ಲಿ ಅದೆಷ್ಟೋ ಸಂಘಟನೆಗಳಿದ್ದರೂ ನಿಶ್ಚಿತ ಫಲ ಪಡೆಯಲು ಸಾಧ್ಯವಾಗುತ್ತಿಲ್ಲವೆಂದು ಶ್ರೀ ರಂಭಾಪುರಿ ಜಗದ್ಗುರುಗಳು ವಿಷಾದ ವ್ಯಕ್ತಪಡಿಸಿದರು. ಸಮಾರಂಭ ಉದ್ಘಾಟಿಸಿದ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಹೆಚ್.ಆರ್. ಬಸವರಾಜ್ ಮಾತನಾಡಿ ರೈತರ ಸಂಕಷ್ಟಗಳು ಬಹಳಷ್ಟಿವೆ. ಶ್ರಮದಿಂದ ದುಡಿಯುವ ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ಸಕಾಲಕ್ಕೆ ಮಳೆಯಿಲ್ಲದೇ ಉತ್ತಮ ಬೆಳೆಯಿಲ್ಲದೇ ಇರುವುದು ಹಾಗೂ ಬೆಳೆದ ಬೆಳೆಗೆ ಹೆಚ್ಚಿನ ಬೆಲೆ ಸಿಗದಂತಾಗಿ ರೈತ ಸಾಲದಲ್ಲಿ ಸಿಲುಕಿ ನಲುಗುತ್ತಿದ್ದಾನೆ. ಇಂಥ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಶೇಷ ಗಮನ ಹರಿಸಿ ರೈತರಿಗೆ ಹೆಚ್ಚೆಚ್ಚು ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂದು ಆಗ್ರಹಿಸಿದರು. ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಸಾವಯವ ಕೃಷಿ ಪದ್ಧತಿಯನ್ನು ರೈತರು ಅಳವಡಿಸಿಕೊಳ್ಳಬೇಕು. ಪಶು ಸಂಗೋಪನೆಯಿಂದ ಬಹಳಷ್ಟು ಪ್ರಯೋಜನವಿದೆ. ಕೊಟ್ಟಿಗೆ ಗೊಬ್ಬರ ಬಳಸುವುದರಿಂದ ಭೂಮಿಯ ಸತ್ವ ಸಮೃದ್ಧಿಗೊಂಡು ಉತ್ತಮ ಬೆಳೆ ಬರಲು ಸಾಧ್ಯವಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಪರವಾದ ಯೋಜನೆಗಳಿವೆ. ಅವುಗಳ ಪ್ರಯೋಜನವನ್ನು ರೈತರು ಪಡೆಯುವಂತಾಗಬೇಕೆಂದರು. ಇನ್ನೋರ್ವ ಕೃಷಿ ತಜ್ಞರಾದ ಚಂದ್ರಶೇಖರ ನಾರಣಾಪುರ ಮಾತನಾಡಿ ನೈಸರ್ಗಿಕ ಕೃಷಿ ಮಾಡುವ ರೈತ ಎದೆಗುಂದಬಾರದು. ನೈಸರ್ಗಿಕ ಕೃಷಿಯಿಂದ ಮೊದಲು ಹೆಚ್ಚು ಬೆಳೆ ಬೆಳೆಯಲು ಸಾಧ್ಯವಾಗುವುದಿಲ್ಲ. ಕ್ರಮೇಣ ಭೂಮಿಯ ಫಲವತ್ತತೆ ಹೆಚ್ಚಾಗಿ ಉತ್ತಮ ಬೆಳೆಯಲು ಸಾಧ್ಯವಾಗುತ್ತದೆ. ಅಲ್ಪ ಭೂಮಿಯಲ್ಲಿ ಒಳ್ಳೆ ಫಸಲು ಬೆಳೆಯಲು ಸಾಧ್ಯವೆಂಬುದನ್ನು ಸ್ವತ: ನಾನು ಕೃಷಿ ಮಾಡಿ ಯಶಸ್ವಿಯಾಗಿದ್ದೇನೆ. ರೈತ ಸಮುದಾಯ ಜಾಗೃತಗೊಂಡು ನೈಸರ್ಗಿಕ ಕೃಷಿಯನ್ನು ಹೆಚ್ಚು ಬೆಳೆಸಲು ಮುಂದಾಗಬೇಕೆಂದರು. ಎಡೆಯೂರು ರೇಣುಕ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸಿದ್ದರು. ನೆಗಳೂರು ಸಂಸ್ಥಾನ ಹಿರೇಮಠದ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಪ್ರಾಸ್ತಾವಿಕ ನುಡಿದರು. ಮುಕ್ತಿಮಂದಿರದ ವಿಮಲ ರೇಣುಕ ಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳು ಉಪಸ್ಥಿತರಿದ್ದರು. ಸಂಗೊಳ್ಳಿ ಹಿರೇಮಠದ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ಚಿಕ್ಕಮಗಳೂರು ಕೂಡ್ಲಿಗೆರೆ ಎಸ್.ಹಾಲೇಶ, ಉಷಾ ಮತ್ತು ಚಂದ್ರಶೇಖರ ನಿಟ್ಟೂರು, ರೇಣುಕಾ ಮತ್ತು ಪ್ರಸನ್ನ ಕುಮಾರ್, ತವಡೆಹಳ್ಳಿ, ದಿವ್ಯಶ್ರೀ ಮತ್ತು ಶಂಕರ ಮೋಹನ್ ಶಂಕರನಹಳ್ಳಿ ಇವರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆ ನೀಡಿ ಆಶೀರ್ವದಿಸಿದರು. ಸುಳ್ಳ, ಮಳಲಿ, ಬಿಳಕಿ, ಚನ್ನಗಿರಿ, ಸಿಂದಗಿ,ಹರಪನಹಳ್ಳಿ, ಹಂಪಸಾಗರ, ಹಿರೆಮಲ್ಲನಕೆರಿ, ಮೈನಹಳ್ಳಿ, ಅಮ್ಮಿನಬಾವಿ, ಅಡ್ನೂರು, ಸಿದ್ದರಬೆಟ್ಟ, ಹಾರನಹಳ್ಳಿ, ಮಾವಿನಹಳ್ಳಿ ವೇದಿಕೆಯ ಮೆಲೆ ಇದ್ದರು.



# ಲೋಕ ಅದಾಲತ್‌ನಲ್ಲಿ 31267 ಪ್ರಕರಣ ಇತ್ಯರ್ಥ

**ಚಾಮರಾಜನಗರ:** ಸರ್ವರಿಗೂ ನ್ಯಾಯ ಒದಗಿಸುವ ಪರಿಕಲ್ಪನೆಯಡಿ ಇದೇ ತಿಂಗಳ ಮಾ. 16ರಂದು ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಹಮ್ಮಿಕೊಳ್ಳಲಾಗಿದ್ದ ಮೆಗಾ ಲೋಕ ಅದಾಲತ್‌ನಲ್ಲಿ 31,267 ಪ್ರಕರಣಗಳು ಇತ್ಯರ್ಥಗೊಳಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಿ.ಎಸ್. ಭಾರತಿ ಅವರು ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯದ ವ್ಯಾಜ್ಯ ಪೂರ್ವ ಪರಿಹಾರ ಕೇಂದ್ರದಲ್ಲಿಂದು ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು ಈ ವಿಷಯ ಹೇಳಿದರು.

ಜನಸಾಮಾನ್ಯರಿಗೆ ಸಕಾಲದಲ್ಲಿ ನ್ಯಾಯ ದೊರಕಿಸಿ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸುವ ನಿಟ್ಟಿನಲ್ಲಿ ಈ ಬಾರಿ ನಡೆದ ಲೋಕ್ ಅದಾಲತ್‌ನಲ್ಲಿ 195 ಸಿವಿಲ್, 1635 ಕ್ರಿಮಿನಲ್ ಹಾಗೂ ವ್ಯಾಜ್ಯ ಪೂರ್ವ 29,437 ಪ್ರಕರಣಗಳು ಸೇರಿದಂತೆ ಒಟ್ಟು 31,267 ಪ್ರಕರಣಗಳು ಇತ್ಯರ್ಥವಾಗಿವೆ. ಚಾಮರಾಜನಗರ ನ್ಯಾಯಾಲಯದಲ್ಲಿ 19,875, ಯಳಂದೂರಿನಲ್ಲಿ 2178, ಕೊಳ್ಳೇಗಾಲದಲ್ಲಿ 5839, ಗುಂಡ್ಲುಪೇಟೆಯಲ್ಲಿ 3375 ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಬಗೆಹರಿಸಲಾಗಿದೆ ಎಂದರು.

ಈ ಬಾರಿ ಗರಿಷ್ಠ ಪ್ರಮಾಣದ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ಲೋಕ ಅದಾಲತ್‌ನಲ್ಲಿ ಇ?ಟ್ಟು ಪ್ರಮಾಣದ ಪ್ರಕರಣಗಳನ್ನು ಇತ್ಯರ್ಥಪಡಿಸಿರುವುದು ದಾಖಲೆಯಾಗಿದೆ. ದಂಡದ ಮೊತ್ತ, ಅಪಘಾತಗಳಿಂದ ಕ್ಲೈಮು, ತೆರಿಗೆ ವಸೂಲಿ, ಕಾರ್ಮಿಕರಿಗೆ ಪರಿಹಾರ, ಪಿಂಚಣಿ, ಇತರೆ ಸೇರಿದಂತೆ ಒಟ್ಟು 8,36,94,538 ರೂ.ಗಳು ಇತ್ಯರ್ಥಗೊಂಡ ಪ್ರಕರಣಗಳಿಂದ ಸಂಗ್ರಹವಾದ ಮೊತ್ತವಾಗಿದೆ. ಇದರಲ್ಲಿ ದಂಡದ ಹಣ ಸರ್ಕಾರಕ್ಕೆ ಪಾವತಿಯಾಗಲಿದ್ದು, ಪರಿಹಾರದ ಮೊತ್ತ ಸಂತ್ರಸ್ತರಿಗೆ ತಲುಪಲಿದೆ ಎಂದು ಜಿಲ್ಲಾ ನ್ಯಾಯಾಧೀಶರು ತಿಳಿಸದಿದರು.

ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ನಿರ್ದೇಶನದನ್ವಯ ಜಿಲ್ಲಾ ಹಾಗೂ ತಾಲೂಕು ನ್ಯಾಯಾಲಯಗಳಲ್ಲಿ 10-15 ವ?ಗಳಿಂದ ಬಾಕಿ ಇದ್ದ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಂಡು ಜನರು ಅದಾಲತ್ ಅನ್ನು ಸದ್ಬಳಕೆ ಮಾಡಿಕೊಂಡಿದ್ದಾರೆ. ಲೋಕ್ ಅದಾಲತ್ ಯಶಸ್ವಿಯಾಗಲು ವಕೀಲರು, ಕಕ್ಷಿದಾರರು, ವಿವಿಧ ಇಲಾಖೆಗಳು ನೆರವಾಗಿದ್ದಾರೆ. ಲೋಕ್ ಅದಾಲತ್ ಯಶಸ್ವಿಗೆ ಸಹಕರಿಸಿದ ಎಲ್ಲರಿಗೂ ಧನ್ಯವಾಧಗಳನ್ನು ಜಿಲ್ಲಾ ನ್ಯಾಯಾಧೀಶರಾದ ಭಾರತಿ ಅವರು ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ಶ್ರೀಧರ್ ಅವರು ಮಾತನಾಡಿ ರಾಜಿಯಾಗಬಲ್ಲ ಪ್ರಕರಣಗಳನ್ನು ಗುರುತಿಸಿ ವಿವಿಧ ಇಲಾಖೆಗಳಲ್ಲಿ ಜನರಿಗಿದ್ದ ಸಮಸ್ಯೆಗಳನ್ನು ಬಗೆಹರಿಸಲು ಕಳೆದ ಎರಡೂವರೆ ತಿಂಗಳಿಂದ ಪೂರ್ವ ಸಮಾಲೋಚನೆ ನಡೆಸಿ ಸಿದ್ದತೆ ಮಾಡಿಕೊಳ್ಳಲಾಗಿತ್ತು. ಲೋಕ್ ಅದಾಲತ್ ಮೂಲಕ ಜನರು ರಾಜಿ ಸಂಧಾನದ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಮುಂದೆ ಬರುತ್ತಿರುವುದು ಶ್ಲಾಘನೀಯ. ಎಲ್ಲರ ಸಹಕಾರ ನಿರಂತರವಾಗಿರಲಿ ಎಂದರು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಉಮ್ಮತ್ತೂರು ಇಂದುಶೇಖರ್ ಅವರು ಮಾತನಾಡಿ ಆರಂಭದ ಲೋಕ್ ಅದಾಲತ್‌ನಲ್ಲಿ 500 ಪ್ರಕರಣಗಳನ್ನು ಮಾತ್ರ ಇತ್ಯರ್ಥಪಡಿಸಲಾಗಿತ್ತು. ಪ್ರತಿ ಅದಾಲತ್‌ನಿಂದ ಅದಾಲತ್‌ಗೆ ಪ್ರಕರಣಗಳ ಇತ್ಯರ್ಥ ಸಂಖ್ಯೆ ಹೆಚ್ಚಾಗುತ್ತಿವೆ. ಜನರಿಗೆ ನ್ಯಾಯಾಂಗದಲ್ಲಿ ನಂಬಿಕೆ ಉಳಿದಿದೆ. ಎಲ್ಲರ ಸಹಕಾರದಿಂದ ಹೆಚ್ಚಿನ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ಪರಸ್ಪರ ಕಕ್ಷಿದಾರರ ಮನವೊಲಿಸುವಲ್ಲಿ ವಕೀಲರ ಪಾತ್ರ ಪ್ರಮುಖವಾಗಿದೆ ಎಂದು ತಿಳಿಸಿದರು.



# ಟೇಕಲ್‌ನಲ್ಲಿ ಸುಗಮ ಪರೀಕ್ಷೆಗೆ ಎಲ್ಲಾ ವ್ಯವಸ್ಥೆ

**ಟೇಕಲ್:** ಟೇಕಲ್ ವ್ಯಾಪ್ತಿಯಲ್ಲಿ 2023-24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಈ ಭಾರಿ ಒಟ್ಟು 9 ಶಾಲೆಗಳು ಸೇರಿ 504 ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ಸನ್ನದ್ಧರಾಗಿದ್ದು ಇವರೆಲ್ಲರು ಟೇಕಲ್ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ಆವರಣದ ವಿಭಾಗದಲ್ಲಿ ಪರೀಕ್ಷೆ ಬರೆಯುತ್ತಿದ್ದಾರೆಂದು ಎಸ್ ಎಸ್‌ಎಲ್‌ಸಿ ಕೇಂದ್ರದ ಪರೀಕ್ಷಾ ಅಧೀಕ್ಷಕರು ಹಾಗೂ ಉಪಪ್ರಾಂಶುಪಾಲರಾದ ಭಾರತಿಬಾಯಿ ತಿಳಿಸಿದರು. ಅವರು ಗುರುವಾರ ಟೇಕಲ್ ಪ್ರೌಢಶಾಲೆಯಲ್ಲಿ ಪೂರ್ವ ಸಿದ್ಧತಾ ಸಭೆಯನ್ನು ಉದ್ದೇಶಿಸಿ ವಿವಿಧ ಶಾಲೆಗಳ ಮುಖ್ಯಶಿಕ್ಷಕರೊಂದಿಗೆ ಚರ್ಚಿಸಿ ಮಾತನಾಡುತ್ತಿದ್ದರು. ಈ ಬಾರಿ ಟೇಕಲ್‌ನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರದಲ್ಲಿ ಯಾವುದೇ ರೀತಿಯಲ್ಲಿ ಪರೀಕ್ಷೆಗೆ ತೊಂದರೆಯಾಗದಂತೆ ಶಿಕ್ಷಣ ಇಲಾಖಾ ವತಿಯಿಂದ ಕಟ್ಟು ನಿಟ್ಟಿನ ಕ್ರಮ ಕೈಗೊಂಡಿದ್ದು ಇದಕ್ಕೆ ಕೇಂದ್ರದಲ್ಲಿ ಎಲ್ಲಾ ಕಡೆ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಪರೀಕ್ಷಾರ್ಥಿಗಳಿಗೆ ನೀರಿನ ವ್ಯವಸ್ಥೆಯಿಂದ ಹಿಡಿದು ಡೆಸ್ಕ್‌ಗಳನ್ನು ವ್ಯವಸ್ಥೆ ಮಾಡಲಾಗಿದೆ ಎಂದರು. ಎಲ್ಲಾ ಶಾಲೆಗಳವರು ಪರೀಕ್ಷಾ ಸ್ಥಳಕ್ಕೆ ಮಕ್ಕಳನ್ನು 9 ಗಂಟೆಗೆ ಹಾಜರಾಗುವಂತೆ ನೋಡಿಕೊಳ್ಳಬೇಕು. ಮಾರ್ಚ್ 25 ಸೋಮವಾರದಿಂದ ಏಪ್ರಿಲ್ 6 ರವರೆಗೆ ಪರೀಕ್ಷೆ ನಡೆಯಲಿದ್ದು ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಎದುರಿಸಿ ಉತ್ತಮವಾದ ಫಲಿತಾಂಶ ಪಡೆಯಬೇಕಾಗಿದೆ ಎಂದು ತಿಳಿಸಿದರು. ಟೇಕಲ್ ವ್ಯಾಪ್ತಿಯ 9 ಶಾಲೆಗಳಾದ ಟೇಕಲ್ ಸರ್ಕಾರಿ ಪ್ರೌಢಶಾಲೆ, ತೊರಲಕ್ಕಿ ಆರ್ ಎಂಎಸ್‌ಎ ಸರ್ಕಾರಿ ಪ್ರೌಢಶಾಲೆ, ದೊಡ್ಡನಾಯಕನಹಳ್ಳಿ, ಆನೇಪುರ ಸರ್ಕಾರಿ ಪ್ರೌಢಶಾಲೆ, ಕೆ.ಜಿ.ಹಳ್ಳಿಯ ವಿಶ್ವೇಶ್ವರಯ್ಯ ವಿದ್ಯಾನಿಕೇತನ, ಬಾಬಾ ವಿದ್ಯಾಲಯ, ಹುಣಸಿಕೋಟೆಯ ಅಕ್ಷರಧಾಮ ಶಿಕ್ಷಣ ಸಂಸ್ಥೆ, ವಿವಿಎಂ ಶಾಲೆ, ಯಲುವಹಳ್ಳಿ ಮೊರಾರ್ಜಿ ದೇಸಾಯ ವಸತಿ ಶಾಲೆಯ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು ಒಟ್ಟು 21 ಕೊಠಡಿ ವ್ಯವಸ್ಥೆ ಮಾಡಿದ್ದು ಪರೀಕಷೆ ಬರೆಯಲು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಎಲ್ಲಾ ಸಿದ್ದತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಉಪಅಧೀಕ್ಷಕರಾದ ತೊರಲಕ್ಕಿ ಶಾಲೆಯ ಮುಖ್ಯೋಪಾಧ್ಯಾಯರಾದ ಲಕ್ಷ್ಮೀಬಾಯಿ ಹಾಗೂ ವಿವಿಧ ಶಾಲೆಗಳ ಮುಖ್ಯಶಿಕ್ಷಕರು ಹಾಜರಿದ್ದರು.



## ಎನ್‌ಡಿಎ ಮೈತ್ರಿಕೂಟ ಜಯಗಳಿಸಲಿ

**ಕೋಲಾರ:** ಹೆಚ್ ಡಿ ಕುಮಾರಸ್ವಾಮಿಯವರು ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಿದ್ದು ಅವರು ಶೀಘ್ರವಾಗಿ ಗುಣಮುಖರಾಗಿ ನಮ್ಮೊಂದಿಗೆ ಆದಷ್ಟುಬೇಗ ಸಕ್ರಿಯವಾಗಿ ಭಾಗವಹಿಸುವಂತಾಗಲಿ ಮತ್ತು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸೂಕ್ತ ಮಾರ್ಗದರ್ಶನ ನೀಡಿ ಎನ್ ಡಿ ಎ ಮೈತ್ರಿಕೂಟ ಪ್ರಚಂಡವಾಗಿ ಜಯಗಳಿಸುವಂತಾಗಲಿ . ಸಾಯಿಬಾಬ ದೇವಸ್ಥಾನದಲ್ಲಿ ಕುಮಾರಸ್ವಾಮಿರವರ ಹೆಸರಿನಲ್ಲಿ ಪೂಜಾ ಕಾರ್ಯಗಳನ್ನು ನೆರವೇರಿಸಿ ಮಾತನಾಡಿದ ಸಿ ಎಂ ಆರ್ ಶ್ರೀನಾಥ್‌ರವರು ಕುಮಾರಸ್ವಾಮಿಯವರ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೆರವೇರಿ ಶೀಘ್ರ ಗುಣಮುಖರಾಗಲೆಂದು ದೇವರಲ್ಲಿ ಪ್ರಾರ್ಥಿಸಿದರು . ನಾವು ಮೈತ್ರಿಧರ್ಮವನ್ನು ಪಾಲಿಸುತ್ತೇವೆ ವರಿಷ್ಟರ ತೀರ್ಮಾನಕ್ಕೆ ಬದ್ಧರಾಗಿದ್ದು ಜೆ ಡಿ ಎಸ್ ಅಥವಾ ಬಿ ಜೆ ಪಿ ಯಾವಪಕ್ಷದ ಅಭ್ಯರ್ಥಿಯಾದರೂ ನಮಗೆ ಸಮಂಜಸ ಹಾಗಾಗಿ ಈ ವಿಷಯದಲ್ಲಿ ಯಾವುದೇ ಗೊಂದಲವಿಲ್ಲ ನಾವೆಲ್ಲ ಒಟ್ಟಾಗಿದ್ದೇವೆ ಒಗ್ಗಟ್ಟಿನಿಂದ ಮೈತ್ರಿ ಅಭ್ಯರ್ಥಿಯ ಗೆಲುವಿಗೆ ಪಣತೊಟ್ಟು ದುಡಿಯುತ್ತೇವೆ. ಈ ಚುನಾವಣೆಯನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿ ದಾಖಲೆ ಮಟ್ಟದಲ್ಲಿ ನಮ್ಮ ಮೈತ್ರಿ ಅಭ್ಯರ್ಥಿಯನ್ನು ಗೆಲ್ಲಿಸುತ್ತೇವೆಸಹಜವಾಗಿ ನಮ್ಮ ಪಕ್ಷದ ಅಭ್ಯರ್ಥಿಗೆ ಟಿಕೆಟ್ ನೀಡಿ ಎಂದು ಕೇಳಿದ್ದೇವೆ ಹೊರತು ಯಾವುದೇ ಭಿನಾಭಿಪ್ರಾಯವಾಗಲಿ ,ಒಗ್ಗಟ್ಟಿನಕೊರತೆಯಾಗಲಿ ನಮ್ಮಲ್ಲಿಲ್ಲ ಎನ್ ಡಿ ಎ ವರಿಷ್ಠರ ತೀರ್ಮಾನವೇ ಅಂತಿಮವಾಗಿರುತ್ತದೆ ಅವರು ಸೂಚಿಸಿದ ಅಭ್ಯರ್ಥಿಗೆ ನಮ್ಮ ಸಂಪೂರ್ಣ ಬೆಂಬಲ ಮತ್ತು ಅವರ ಗೆಲುವು ಮುಖ್ಯ ಎಂದರು .ಈ ಸಂಧರ್ಭದಲ್ಲಿ ಮುಖಂಡರಾದ ಮಲ್ಲೇಶ್ ಬಾಬು ,ಬಣಕನಹಳ್ಳಿ ನಟರಾಜ್ ,ರಾಕೇಶ್ ಮತ್ತು ಕಾರ್ಯಕರ್ತರು ಅಭಿಮಾನಿಗಳು ಇದ್ದರು.

# ದಲಿತ ಮಹಿಳೆಗೆ ಅನ್ಯಾಯ;ಪ್ರತಿಭಟನೆ



**ವಿಜಯಪುರ:** ನನಗೆ ಬಾಳು ಕೊಡುವುದಾಗಿ ನಂಬಿಸಿ, ನನ್ನ ಗಂಡನ ಮನೆಯಿಂದ ಕರೆದುಕೊಂಡು ಬಂದು, ಮದುವೆ ಮಾಡಿಕೊಂಡ ಪಟ್ಟಣದ ಪುರುಷೋತ್ತಮ್ ಎಂಬಾತ, ನನ್ನಿಂದ 14 ಲಕ್ಷ ಹಣ ಪಡೆದುಕೊಂಡು, 6 ವರ್ಷ ಒಟ್ಟಿಗೆ ಸಂಸಾರ ಮಾಡಿ, ಈಗ ನನ್ನ ಮೇಲೆ ಹಲ್ಲೆ ನಡೆಸಿ, ಜಾತಿ ನಿಂದನೆ ಮಾಡಿ, ಹೊರಗೆ ಹಾಕಿದ್ದಾರೆ ಎಂದು ಶಾರದ ಎಂಬುವವರು, ಪುರುಷೋತ್ತಮ್ ಅವರ ಮನೆಯ ಮುಂದೆ ಪ್ರತಿಭಟನೆ ನಡೆಸಿ, ತಮಟೆಗಳೊಂದಿಗೆ ಪೊಲೀಸ್ ಠಾಣೆಗೆ ಬಂದು ದೂರು ದಾಖಲಿಸಿದ್ದಾರೆ.

ನನಗೆ 13 ವರ್ಷಗಳ ಹಿಂದೆ ಟಿಪ್ಪುನಗರದ ವ್ಯಕ್ತಿಯೊಬ್ಬರೊಂದಿಗೆ ಮದುವೆಯಾಗಿದ್ದು, ನನಗೆ ಇಬ್ಬರು ಮಕ್ಕಳಿದ್ದಾರೆ. ನನ್ನ ಪತಿಯ ಸ್ನೇಹಿತ ವಿಜಯಪುರದ ಪುರುಷೋತ್ತಮ್ ಎಂಬಾತ ನನ್ನ ಪತಿಯ ಜೊತೆಯಲ್ಲಿ ನಮ್ಮ ಮನೆಗೆ ಬಂದು ಹೋಗುತ್ತಿದ್ದು, ನನ್ನ ಪತಿ ಮನೆಯಲ್ಲಿ ಇಲ್ಲದಿರುವಾಗ, ಮನೆಗೆ ಬಂದು, ನನ್ನೊಂದಿಗೆ ಅಸಭ್ಯವಾಗಿ ನಡೆದುಕೊಂಡು, ಮೊಬೈಲ್ ನಲ್ಲಿ ಫೋಟೋಗಳು ತೆಗೆದುಕೊಂಡು, ನನ್ನೊಂದಿಗೆ ಬಂದು ಬಿಡು, ಮದುವೆ ಮಾಡಿಕೊಳ್ಳೋಣ. ಒಂದು ವೇಳೆ ಬಾರದಿದ್ದರೆ ನಿನ್ನ ಗಂಡ, ಮಕ್ಕಳನ್ನು ಸಾಯಿಸುವುದಾಗಿ ಬೆದರಿಕೆ ಹಾಕಿದ್ದರು. ಅವರು ಜೀವ ಬೆದರಿಕೆ ಹಾಕಿದ್ದರಿಂದ ನಾನು, ಗಂಡ ಮಕ್ಕಳನ್ನು ಬಿಟ್ಟು, ಪುರುಷೋತ್ತಮ್ ಅವರೊಂದಿಗೆ ಬಂದಿದ್ದೆ, 2018 ರಲ್ಲಿ ತಿರುಪತಿಯಲ್ಲಿ ನಾವಿಬ್ಬರೂ ಮದುವೆ ಮಾಡಿಕೊಂಡಿದ್ದೇವೆ. 6 ವರ್ಷಗಳಿಂದ ವಿಜಯಪುರದಲ್ಲಿ ಬಾಡಿಗೆ ಮನೆಯಲ್ಲಿ ವಾಸಮಾಡಿಕೊಂಡಿದ್ದೆವು. ನನ್ನ ತವರು ಮನೆಯಿಂದ 14 ಲಕ್ಷ ರೂಪಾಯಿ ಹಣ ತಂದು ಕೊಟ್ಟಿದ್ದೇನೆ. ಈ ಹಣದಲ್ಲಿ ಬಡ್ಡಿ ವ್ಯವಹಾರ ನಡೆಸುತ್ತಿದ್ದು, ಅದರಿಂದ ಬಂದ ಸಂಪಾದನೆಯಲ್ಲಿ ನನ್ನ ಹೆಸರಿನಲ್ಲಿ ನಿವೇಶನ ಖರೀದಿಸುವುದಾಗಿ ಹೇಳಿದ್ದು, ನಿವೇಶನ ಖರೀದಿಸಿದಾಗ ನನ್ನ ಹೆಸರಿನಲ್ಲಿ ಖರೀದಿ ಮಾಡಿಕೊಡದೇ ಅವರ ಹೆಸರಿನಲ್ಲೆ ನೋಂದಣಿ ಮಾಡಿಸಿಕೊಂಡಿದ್ದರು. ಇದನ್ನು ಪ್ರಶ್ನಿಸಿದಾಗ, ನಾನು ಪರಿಶಿಷ್ಟ ಜಾತಿಗೆ ಸೇರಿದವಳು ಎಂದು ನನ್ನನ್ನು ಜಾತಿ ನಿಂದನೆ ಮಾಡಿದ್ದಾರೆ. ನನ್ನ ಮೇಲೆ ದೈಹಿಕವಾಗಿ ಹಲ್ಲೆ ನಡೆಸಿದ್ದಾರೆ.

ಈ ವಿಚಾರವನ್ನು ಅವರ ಸಹೋದರ ಬಳಿ ಹೇಳಿದಾಗ ಅವರೂ ಸಹಾ ನಮ್ಮ ಕಣ್ಣೆದುರಿಗೆ ಇರಬೇಡ, ನಾವು ಆಚಾರರು, ನೀನು ಪರಿಶಿಷ್ಟಳು, ಎಲ್ಲಿಗಾದರೂ ಹೋಗಿ ಸಾಯಿ ಎಂದು ಅವರ ಸ್ನೇಹಿತರೊಂದಿಗೆ ಸೇರಿಕೊಂಡು ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ. ಅವರ ಸಹೋದರ, ಹಾಗೂ ಸ್ನೇಹಿತರು ಹಲ್ಲೆ ನಡೆಸಿ, ಅವ್ಯಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಇವರ ಮೇಲೆ ಕಾನೂನು ಕ್ರಮ ಜರುಗಿಸಬೇಕು ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ವಿವರಿಸಿದ್ದಾರೆ.

# ನನ್ನ ನಡೆ- ಮತಗಟ್ಟೆ ಕಡೆ ಜಾಗೃತಿ ಜಾಥಾ

**ಚಾಮರಾಜನಗರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ ಹಾಗೂ ನಗರಸಭೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಜಾಗೃತಿ ಜಾಥಾ ಹಾಗೂ ನಗರದ ಹೃದಯಭಾಗದಲ್ಲಿ ನಿರ್ಮಿಸಿದ್ದ ಮಾನವ ಸರಪಳಿ ಎಲ್ಲರ ಗಮನ ಸೆಳೆಯಿತು. ಲೋಕಸಭಾ ಸಾರ್ವತ್ರಿಕ ಚುನಾವಣೆ ಅಂಗವಾಗಿ ನಗರದ ಶ್ರೀ ಚಾಮರಾಜೇಶ್ವರ ದೇವಾಲಯದ ಅವರಣದಲ್ಲಿ ಜಾಗೃತಿ ಜಾಥಾಗೆ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಪಿ. ಲಕ್ಷ್ಮೀ ಅವರು ಹಸಿರು ನಿಶಾನೆ ತೋರಿ ಶುಭ ಕೋರಿದರು. ಚಾಮರಾಜೇಶ್ವರ ದೇವಾಲಯದಿಂದ ಹೊರಟ ಜಾಥಾದಲ್ಲಿ ಪಾಲ್ಗೊಂಡಿದ್ದ ಅಧಿಕಾರಿಗಳು, ನಾಗರಿಕರು ನನ್ನ ನಡೆ-ಮತಗಟ್ಟೆ ಕಡೆ ಹಾಗೂ ಚುನಾವಣೆ ಪರ್ವ-ದೇಶದ ಗರ್ವ ಘೋಷಣೆಗಳನ್ನು ಮೊಳಗಿಸಿದರು. ಬಳಿಕ ನಗರದ ಹೃದಯಭಾಗದಲ್ಲಿರುವ ಭುವನೇಶ್ವರಿ (ಪಚ್ಚಪ್ಪ) ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಚುನಾವಣೆಯಲ್ಲಿ ಕಡ್ಡಾಯವಾಗಿ ಮತದಾನ ಮಾಡುವ ಬಗ್ಗೆ ಘೋಷಣೆ ಕೂಗಿ ಜನಜಾಗೃತಿ ಮೂಡಿಸಿದರು.

ಇದೇ ವೇಳೆ ನಗರಸಭೆ ಪೌರಾಯುಕ್ತರಾದ ಎಸ್.ವಿ. ರಾಮದಾಸ್ ಅವರು ಮಾತನಾಡಿ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಮಾತದಾನದ ಬಗ್ಗೆ ಅರಿವು ಮೂಡಿಸಲು ಜಾಗೃತಿ ಜಾಥಾ ಹಾಗೂ ಮಾನವ ಸರಪಳಿ ಹಮ್ಮಿಕೊಳ್ಳಲಾಗಿದೆ. ಪ್ರತಿಯೊಬ್ಬರು ಕಡ್ಡಾಯವಾಗಿ ಮತದಾನ ಮಾಡಬೇಕು ಎಂದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣಪ್ಪ, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಚಿಕ್ಕಬಸವಯ್ಯ, ನಗರಸಭೆ ಪರಿಸರ ಎಂಜಿನಿಯರ್ ಗಿರಿಜಮ್ಮ, ಕಂದಾಯ ನಿರೀಕ್ಷಕರಾದ ಶರವಣ, ಹಿರಿಯ ಆರೋಗ್ಯ ನಿರೀಕ್ಷಕರಾದ ಸುಷ್ಮಾ, ಸಮುದಾಯ ಸಂಘಟನಾ ಅಧಿಕಾರಿ ವೆಂಕಟನಾಯಕ್, ಇತರರು ಇದ್ದರು.



# ಕುಡಿಯುವ ನೀರಿನ ಭವಣೆಗೆ ಯಾರು ಸಿಲುಕಬಾರದು

**ಚಿಕ್ಕಬಳ್ಳಾಪುರ:** ಜಿಲ್ಲೆಯ ಗ್ರಾಮಾಂತರ ಮತ್ತು ನಗರ ಪ್ರದೇಶದ ಯಾವುದೇ ಗ್ರಾಮ, ವಾರ್ಡಗಳಲ್ಲಿ ಜನರು ಕುಡಿಯುವ ನೀರಿನ ಸಮಸ್ಯೆ ಎದುರಿಸಿದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಸಮರೋಪಾದಿಯಲ್ಲಿ ನಿರ್ವಹಿಸಿ ಪೂರೈಬೇಕು ಎಂದು ಜಿಲ್ಲಾಧಿಕಾರಿ ಪಿ.ಎನ್ ರವೀಂದ್ರ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದರು.



ಗುರುವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಅಧಿಕಾರಿಗಳಿಂದ ವಿವರ ಪಡೆದು ಅವರು ಮಾತನಾಡಿದರು.

ಪ್ರಸ್ತುತ ಗ್ರಾಮಾಂತರ ಪ್ರದೇಶದ 39 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದ್ದು, ಆ ಗ್ರಾಮಗಳಲ್ಲಿ ಖಾಸಗಿ ಕೊಳವೆ ಬಾವಿಗಳ ಮೂಲಕ ನೀರು ಒಪ್ಪಂದದ ಮೇರೆಗೆ ಪೂರೈಸಲಾಗುತ್ತಿದೆ. ಮುಂದೆ 168 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಉಂಟಾಗಬಹುದಾಗಿದ್ದು, ಅಂತಹ ಗ್ರಾಮಗಳಲ್ಲಿ ನೀರು ಪೂರೈಸಲು ಮುನ್ನೆಚ್ಚರಿಕೆಯಾಗಿ ಖಾಸಗಿ ಕೊಳವೆ ಬಾವಿಗಳ ಮಾಲೀಕರೊಂದಿಗೆ ಒಪ್ಪಂದ ಮಾಡಿಕೊಂಡು ಸಿದ್ದರಿರಬೇಕು. ನಗರ ಪ್ರದೇಶಗಳ 6 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 17 ಖಾಸಗಿ ಕೊಳವೆ ಬಾವಿಗಳ ಮೂಲಕ 29 ವಾರ್ಡ ಗಳಲ್ಲಿ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. ಮುಂದಿನ ದಿನಗಳಲ್ಲಿ 24ವಾರ್ಡ್ ಗಳಲ್ಲಿ ನೀರಿನ ಸಮಸ್ಯೆ ಎದುರಾಗಲಿದ್ದು,ಪರಿಹಾರ ಕ್ರಮವಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಸಲಹೆ ಸೂಚನೆಗಳನ್ನು ಅಧಿಕಾರಿಗಳಿಗೆ ನೀಡಿದರು.

ಜಿಲ್ಲೆಯಲ್ಲಿನ ಜಾನುವಾರುಗಳಿಗೆ 20ವಾರಗಳಿಗೆ ಆಗುವಷ್ಟು ಮೇವಿನ ದಾಸ್ತಾನು ಲಭ್ಯವಿದೆ ಜೊತೆಗೆ ತಾಲ್ಲೂಕು ಮತ್ತು ಹೊಬಳಿ ಮಟ್ಟದಲ್ಲಿ ಮೇವು ನಿಧಿಯನ್ನು ಸ್ಥಾಪಿಸಲು ಕ್ರಮವಹಿಸಬೇಕು ಎಂದು ತಿಳಿಸಿದರು. ಜಿಲ್ಲೆಯಲ್ಲಿ ಕಳೆದ ವರ್ಷ ತೀವ್ರತರದ ಮಳೆಯ ಕೊರತೆಯಿಂದ ಜಿಲ್ಲೆಯಾದ್ಯಂತ ಬರದ ಸಂಕಷ್ಟದ ಪರಿಸ್ಥಿತಿಗೆ ಜನರು ಸಿಲುಕಿದ್ದಾರೆ. ಅವರು ಗೂಳೆ ಹೋಗದಂತೆ ಕ್ರಮ ಕೈಗೊಳ್ಳಬೇಕು. ಅವರಿಗೆ ಅಗತ್ಯವಿರುವ ಮೂಲಭೂತ ಅಗತ್ಯತೆಗಳನ್ನು ಒದಗಿಸಲು ಅಧಿಕಾರಿಗಳು ನೆರವಾಗಬೇಕು. ನರೇಗಾ ಯೋಜನೆಯಡಿ ಕಾಮಗಾರಿಗಳನ್ನು ಕೈಗೊಂಡು ಜನರ ಸಂಕಷ್ಟವನ್ನು ಕಡಿಮೆ ಮಾಡಲು ಕೆಲಸ ಮಾಡಲು ಸೂಚಿಸಿದರು.

**ಕೆರೆಗಳಿಂದ ನೀರೆತ್ತುವಂತಿಲ್ಲ:** ಜಿಲ್ಲೆಯಲ್ಲಿನ ಯಾವುದೇ ಕೆರೆಗಳಿಂದ ಯಾವುದೇ ವ್ಯಕ್ತಿ ಯಾವುದೇ ಉದ್ದೇಶಕ್ಕೆ ನೀರನ್ನು ಪಂಪ್ ಸೆಟ್ ಮೂಲಕ ಸೆಳೆದು ತೆಗೆದುಕೊಂಡು ಹೋಗುವಂತಿಲ್ಲ ಅಂತಹ ಪ್ರಕರಣಗಳು ಕಂಡು ಬಂದರೆ ಕಾನೂನು ಕ್ರಮ ವಹಿಸಬೇಕು ಈ ನಿಟ್ಟಿನಲ್ಲಿ ಸ್ಥಳೀಯ ಅಧಿಕಾರಿಗಳು ನಿಗಾ ವಹಿಸಬೇಕು ಎಂದು ಸೂಚನೆ ನೀಡಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಕಾಧಿಕಾರಿ ಪ್ರಕಾಶ್ ಜಿ.ಟಿ ನಿಟ್ಟಾಲಿ, ಅಪರ ಜಿಲ್ಲಾಧಿಕಾರಿ ಡಾ. ಎನ್. ತಿಪ್ಪೇಸ್ವಾಮಿ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಡಾ. ಭಾಸ್ಕರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಜರಿದ್ದರು.

# ವಿಶೇಷ ಕರೋಕೆ ಗಾಯನ ಸ್ಪರ್ಧೆ

**ಮೈಸೂರು:** ನಗರದ ಸ್ವರಲೋಕ ಸಾಂಸ್ಕೃತಿಕ ಕಲಾ ವೇದಿಕೆ ವತಿಯಿಂದ ಮಾ.24ರ ಭಾನುವಾರ ಬೆಳಿಗ್ಗೆ 9 ಗಂಟೆಗೆ ಟೌನ್‌ಹಾಲ್‌ನಲ್ಲಿ ವಿಶ್ವ ಮಹಿಳಾ ದಿನಾಚರಣೆ ಹಾಗೂ ವಿಶೇಷ ಕರೋಕೆ ಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಚಲನಚಿತ್ರ ನಟಿ ರೇಖಾದಾಸ್ ಚಾಲನೆ ನೀಡಲಿದ್ದು, ತೀರ್ಪುಗಾರರಾಗಿ ಗಾಯಕಿ ಜೋಗಿ ಸುನೀತಾರವರು ಭಾಗವಹಿಸಲಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳಾ ಪ್ರತಿಭೆಗಳಾದ ವೈದ್ಯಕೀಯ ಕ್ಷೇತ್ರದಲ್ಲಿ ಡಾ.ರೇಖಾ ಅರುಣ್, ಸಮಾಜ ಸೇವಾ ಕ್ಷೇತ್ರದಲ್ಲಿ ನಳಿನಿ ತಮ್ಮಯ್ಯ, ಆರಕ್ಷಕ ಸೇವಾ ಕ್ಷೇತ್ರದಲ್ಲಿ ಇನ್ಸ್‌ಪೆಕ್ಟರ್ ಮಮತಾ ಹಾಗೂ ಧನಲಕ್ಷ್ಮಿ, ಸುಶ್ರೂಶಕಿ ಕ್ಷೇತ್ರದಲ್ಲಿ ಕೆ.ಕೆ.ಯಶೋಧಾ, ರಂಗಭೂಮಿ ಕಲಾವಿದರ ಕ್ಷೇತ್ರದಲ್ಲಿ ಮೇರಿ ವಸಂತ್, ಶಿಕ್ಷಣ ಕ್ಷೇತ್ರದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಪ್ರಿಯಾಂಕ ಶೆಣೈಯವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಗುವುದು. ಸುಮಾರು 45ರಿಂದ 50 ಜನ ರಾಜ್ಯದ ವಿವಿಧ ಜಿಲ್ಲೆಗಳಿಂದ ಗಾಯಕ, ಗಾಯಕಿಯರು ವಿಶೇಷ ಕರೋಕೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ವಿಜೇತರಿಗೆ ಚಿನ್ನದ ಹಾಗೂ ಬೆಳ್ಳಿ ನಾಣ್ಯಗಳನ್ನು ವಿತರಿಸಿ, ಗೌರವಿಸಲಾಗುವುದು. ಕಾರ್ಯಕ್ರಮದಲ್ಲಿ ಸ್ವರಲೋಕ ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷರು ಹಾಗೂ ಆಯೋಜಕರಾದ ಯಶಸ್ವಿನಿ ಲೋಕೇಶ್ವರ್, ಉಪಾಧ್ಯಕ್ಷೆ ಗಾಯಕಿ ವಿಜಯಶ್ರೀ, ಪ್ರಧಾನ ಕಾರ್ಯದರ್ಶಿ ಪ್ರಿಯಾ ಎಸ್., ಸಂಘಟನಾ ಕಾರ್ಯದರ್ಶಿ ಶಿವರಾಜ್ ಸಿ.ಎಸ್., ಕಾರ್ಯದರ್ಶಿ ಕವಿತಾ, ಖಜಾಂಚಿ ಅಂಕಿತಾ ಭಾಗವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದೆ. ಮಾಹಿತಿಗೆ ಮೊಬೈಲ್ 9663661646 ಸಂಪರ್ಕಿಸಬಹುದು.

# ಕಾಂಗ್ರೆಸ್‌ನ ಪ್ರಬಲ ಆಕಾಂಕ್ಷಿ ಡಾ. ಶಶಿಧರರಾಜಣ್ಣ

**ಟೇಕಲ್:** ಕಳೆದ ವಾರದಿಂದ ದಿವಂಗತ ಯಲುವಗುಳಿ ಆರ್. ರಾಜಣ್ಣನವರ ಮಗ ವೈದ್ಯರಾದ ಡಾ||ಶಶಿಧರರಾಜಣ್ಣನವರು ಕೋಲಾರ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಆಕಾಂಕ್ಷಿಯಾಗಿದ್ದು ಅವರು ಗುರುವಾರ ಮಾಜಿ ಸ್ಪೀಕರ್ ರಮೇಶಕುಮಾರ್ ಹಾಗೂ ಶಾಸಕ ಕೊತ್ತೂರು ಮಂಜುನಾಥರವರನ್ನು ಸಂಪರ್ಕಿಸಿದ್ದು ಸುಮಾರು 3 ಗಂಟೆಗೂ ಹೆಚ್ಚು ಕಾಲ ಮಾತುಕತೆ ನಡೆಸಲಾಯಿತು. ಈ ಸಂದರ್ಭದಲ್ಲಿ ರಮೇಶಕುಮಾರ್‌ರವರು ಯಲುವಗುಳಿ ರಾಜಣ್ಣನವರು ಕಾಂಗ್ರೆಸ್‌ನ ನಿಷ್ಠಾವಂತ ರಾಜಕಾರಣಿಯಾಗಿದ್ದು ಕಾಂಗ್ರೆಸ್ ಕುಟುಂಬದವರೆಂದು ಮಾತು ಪ್ರಾರಂಭಿಸಿದ್ದು ರಾಜಣ್ಣವರ



ಮಗನಿಗೆ ಟಿಕೆಟ್ ಕೇಳುವುದರಲ್ಲಿ ತಪ್ಪೇನಿಲ್ಲ, ಅವರು ಪಕ್ಷಕ್ಕಾಗಿ ದುಡಿದು ತಮ್ಮ ಜೀವನ ಪರ್ಯಂತ ಕಾಂಗ್ರೆಸ್‌ನ ಕಟ್ಟಾಳು ಆಗಿದ್ದರು ಎಂದರು. ಈ ದಿಸೆಯಲ್ಲಿ ರಾಜಣ್ಣನ ಕುಟುಂಬಸ್ಥರು ರಮೇಶ್‌ಕುಮಾರ್‌ನಿಂದಲೂ ಒತ್ತಡ ಹೇರಿದ್ದು ಈ ಭಾರಿ ಬಲಗೈ ಸಮುದಾಯದ ಹೊಸಮುಖಕ್ಕೆ ಟಿಕೆಟ್ ನೀಡಬೇಕೆಂದು ಮನವಿ ಮಾಡಿದ್ದಾರೆ. ಈ ಬಗ್ಗೆ ಕೋಲಾರದ ಶಾಸಕ ಕೊತ್ತೂರು ಮಂಜುನಾಥರವರಿಗೂ ಶಶಿಧರರಾಜಣ್ಣನವರು ಎಲ್ಲಾ ಮಾಹಿತಿ ಒದಗಿಸಿದ್ದು ಗುರುವಾರ ರಾತ್ರಿಯೊಳಗೆ ಸ್ಕ್ರೀನಿಂಗ್ ಕಮಿಟಿಯಲ್ಲಿ ಇವರ ಹೆಸರು ಸೇರ್ಪಡೆಯಾಗುವ ಸಂಭವವಿದೆ ಎಂದು ಕಾಂಗ್ರೆಸ್‌ನ ಉನ್ನತ ಮೂಲಗಳಿಂದ ತಿಳಿದು ಬಂದಿದೆ. ಈ ಸಂಧರ್ಭದಲ್ಲಿ ಕೆ.ಜಿ.ಹಳ್ಳಿ ಗ್ರಾ.ಪಂ.ನ ಮಾಜಿ ಅಧ್ಯಕ್ಷ ಸತೀಶ್‌ರಾಜಣ್ಣ ಜೊತೆಗಿದ್ದರು. ಈ ಬಗ್ಗೆ ಪ್ರಬಲ ಆಕಾಂಕ್ಷಿಯಾದ ಶಶಿಧರರಾಜಣ್ಣ ಮಾತನಾಡಿ ಕೋಲಾರ ಲೋಕಸಭಾ ಕ್ಷೇತ್ರದ ಎಲ್ಲ ಕಾಂಗ್ರೆಸ್ ಶಾಸಕರು ಮತ್ತು ಮುಖಂಡರು, ಜಿಲ್ಲಾ ಕಾಂಗ್ರೆಸ್ ಸಮಿತಿ ಸದಸ್ಯರು, ಪದಾಧಿಕಾರಿಗಳೊಡನೆ ಮಾತುಕತೆ ನಡೆಸಿದ್ದು ಉತ್ತಮ ಅಭಿಪ್ರಾಯ ವ್ಯಕ್ತವಾಗಿದೆ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರುಗಳು ನಮ್ಮ ಕುಟುಂಬದ ಮೇಲೆ ಒಲವು ತೋರಿ ಸಹಕಾರ ನೀಡುತ್ತಾರೆ ಎಂಬ ನಂಬಿಕೆ ಇದೆ ಎಂದರು.

# ಶ್ರೀ ಶಾರದಾ ಪೀಠ ಶೃಂಗೇರಿ ಶ್ರೀಗಳಿಂದ ಶಾರದಾ ಕೃಪಾ ಸಭಾಭವನವನ್ನು ಉದ್ಘಾಟನೆ

**ಚಾಮರಾಜನಗರ:** ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ಶ್ರೀ ಶಾರದಾ ಪೀಠ ಶೃಂಗೇರಿ ಹೆಬ್ಬಸೂರು ಶಾಖೆ ನಿರ್ಮಿಸಿರುವ ಶಾರದಾ ಕೃಪಾ ಸಭಾಭವನದ ಉದ್ಘಾಟನೆಯನ್ನು ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ವಿಧು ಶೇಖರ ಭಾರತಿ ಮಹಾಸ್ವಾಮಿಗಳವರು ವಿಜಯ ಯಾತ್ರೆಯ ಮೂಲಕ ಹೆಬ್ಬಸೂರು ಗ್ರಾಮಕ್ಕೆ ಮಾರ್ಚ್,28 ರಂದು ಆಗಮಿಸಿ ಎರಡು ದಿನಗಳ ಕಾಲ ಶಂಕರ ಮಠದಲ್ಲಿ ವಾಸ್ತವ್ಯವನ್ನು ಮಾಡಿ, ನೂತನವಾಗಿ ನಿರ್ಮಿಸಿರುವ ಶಾರದಾ ಕೃಪಾ ಸಭಾಭವನವನ್ನು ಉದ್ಘಾಟನೆ ನೆರವೇರಿಸಲಿದ್ದಾರೆ ಎಂದು , ಇದರ ಅಂಗವಾಗಿ 23 ಶನಿವಾರದಿಂದ



30 ಮಾರ್ಚ್ 24ರ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು ವಾಸ್ತು ಹೋಮ , ಮಹಾ ಗಣಪತಿ ಹೋಮ ,ಶತ ಚಂಡಿಕಾಯಾಗ, ಋಗ್ವೇದ ಸಂಹಿತಾ ಯಾಗ ಚತುರ್ವೇದ ಪಾರಾಯಣಗಳನ್ನು ನೆರವೇರಿಸಲಾಗುವುದು ಎಂದು ಶಾಖಾಮಠದ ಧರ್ಮಾಧಿಕಾರಿಗಳಾದ ಎಚ್ ಎಸ್ ಶ್ರೀಧರ್ ಪ್ರಸಾದ್ ತಿಳಿಸಿದ್ದಾರೆ.

ಮಾರ್ಚ್ 23 ರಿಂದ ಪ್ರತಿನಿತ್ಯ ಋಗ್ವೇದ ಸಂಹಿತಾ ಯಾಗ ನಡೆಯಲಿದ್ದು 28ರ ಗುರುವಾರ ಸಂಜೆ 5:30ಕ್ಕೆ ಶೃಂಗೇರಿ ಜಗದ್ಗುರು ಶ್ರೀ ವಿಭೂಷಿತ ಶ್ರೀ ಶ್ರೀ ವಿಧು ಶೇಖರ ಭಾರತೀ ಸನ್ನಿಧಾನಂಗಳವರು ಗ್ರಾಮಕ್ಕೆ ಆಗಮಿಸಲಿದ್ದು ಅಂದು ನೂತನ ಸಭಾಭವನ ಉದ್ಘಾಟನೆ ಹಾಗೂ ಧೂಳಿ ಪಾದಪೂಜೆ, ಶ್ರೀ ಶೃಂಗೇರಿ ಜಗದ್ಗುರುಗಳರಿಂದ ಶ್ರೀ ಶಾರದಾ ಚಂದ್ರಮೌಳೇಶ್ವರ ಪೂಜೆ, ಗುರುಪಾದಕ ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ.

29ರ ಶುಕ್ರವಾರ ಬೆಳಿಗ್ಗೆ ಶ್ರೀ ಶೃಂಗೇರಿ ಶಂಕರ ಮಠದಲ್ಲಿ ಶಾರದಾಂಬೆಯ ಪೂಜೆ, ಗುರುಪಾದಕ ಪೂಜೆ , ಭಿಕ್ಷವಂದನೆ, ಶತಚಂಡಿಕಾಯಾಗ ಪೂರ್ಣಾಹುತಿ ನಡೆಯಲಿದೆ .ಸಂಜೆ 5:30ಕ್ಕೆ ಗುರುವಂದನಾ ಕಾರ್ಯಕ್ರಮ ನಡೆಯಲಿದ್ದು ಆಡಳಿತ ಅಧಿಕಾರಿಗಳಾಗಿ ನಿವೃತ್ತರಾದ ಪದ್ಮಶ್ರೀ ಗುರು ಸೇವಾ ದೂರಿನ ಡಾ. ವಿ ಆರ್ ಗೌರಿಶಂಕರ್ ಅವರಿಗೆ ಅಭಿನಂದನೆ ಹಾಗೂ ಈಗಿನ ಆಡಳಿತ ಅಧಿಕಾರಿ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಾದ ಪಿಎ ಮುರಳಿ ರವರನ್ನು ಸನ್ಮಾನಿಸಲಾಗುವುದು. ಶ್ರೀ ಶೃಂಗೇರಿ ಜಗದ್ಗುರುಗಳ ರವರಿಂದ ಅನುಗ್ರಹ ಭಾಷಣ ಏರ್ಪಡಿಸಿದೆ ಎಂದು ಹಾಗೂ 30 ಶನಿವಾರ ಶ್ರೀ ಶ್ರೀ ಜಗದ್ಗುರುಗಳವರು ಮೈಸೂರಿಗೆ ವಿಜಯ ಯಾತ್ರೆ ಮುಂದುವರೆಸಲಿದ್ದಾರೆ ಎಂದು ತಿಳಿಸಿದ್ದಾರೆ.

# ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಪ್ರಸಾರವಾಗುವ ರಾಜಕೀಯ ಜಾಹೀರಾತುಗಳಿಗೆ ಅನುಮತಿ ಕಡ್ಡಾಯ

**ಮಂಡ್ಯ:** ಎಲೆಕ್ಟ್ರನಿಕ್ ಮಾಧ್ಯಮದಲ್ಲಿ ಪ್ರಸಾರವಾಗುವ ರಾಜಕೀಯ ಜಾಹೀರಾತುಗಳಿಗೆ ಪೂರ್ವಾನುಮತಿ ಕಡ್ಡಾಯವಾಗಿದ್ದು, ಟಿವಿ, ಕೇಬಲ್ ವಾಹಿನಿ, ಸಾಮಾಜಿಕ ಮಧ್ಯಮದಲ್ಲಿ ಪ್ರಸಾರವಾಗುವ ಸುದ್ದಿ ಹಾಗೂ ಜಾಹೀರಾತುಗಳ ಮೇಲೆ ತೀವ್ರ ನಿಗಾ ವಹಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಡಾ ಕುಮಾರ ಅವರು ತಿಳಿಸಿದರು.



ಅವರು ಇಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸ್ಥಾಪಿತವಾಗಿರುವ ಮಾಧ್ಯಮ ಮೇಲ್ವಿಚರಣಾ ಕೋಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಮಾಜಿಕ ಜಾಲತಾಣಗಳಲ್ಲಿ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಮಾಡುವ ಪೋಸ್ಟ್ ಗಳಲ್ಲಿ ಚುನಾವಣಾ ಆಯೋಗ ನಿರ್ದೇಶನ ನೀಡಿರುವ ಮಾದರಿ ನೀತಿ ಸಂಹಿತೆ ಪಾಲನೆ ಕಡ್ಡಾಯವಾಗಿರುತ್ತದೆ ಎಂದರು.

ಮಾಧ್ಯಮ ಪ್ರಮಾಣೀಕರಣ ಮತ್ತು ಮೇಲುಸ್ತುವಾರಿ ಸಮಿತಿಯಲ್ಲಿ ಪಾವತಿ ಸುದ್ದಿಯ ಬಗ್ಗೆಯು ಸಹ ತಂಡ ನಿಗಾ ವಹಿಸುತ್ತಿದೆ. ಸಮಿತಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ನಿಯೋಜಿತ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವಂತೆ ತಿಳಿಸಿದರು. ದೂರು ನಿರ್ವಹಣಾ ಕೋಶ: ದೂರು ನಿರ್ವಹಣಾ ಕೋಶಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ದೂರು ನಿರ್ವಹಣಾ ಕೋಶದಲ್ಲಿ ಸ್ವೀಕೃತವಾಗುವ ದೂರುಗಳು ಸಂಬಂಧಿಸಿದ ವಿಭಾಗಕ್ಕೆ ಸಲ್ಲಿಸಿ ಕೈಗೊಂಡ ಕ್ರಮಗಳ ಬಗ್ಗೆ ವರದಿಯಾಗಬೇಕು ಎಂದರು. ಎಸ್.ಎಸ್.ಟಿ ತಂಡಗಳ ವಾಹನಗಳಿಗೆ ಜಿ.ಪಿ.ಎಸ್ ಅಳವಡಿಸಲಾಗಿದ್ದು, ಅವುಗಳ ಚಲನ-ವಲನಗಳು ಹಾಗೂ ಚೆಕ್ ಪೋಸ್ಟ್ ಗಳಲ್ಲಿ ಅಳವಡಿಸಿರುವ ಸಿ.ಸಿ. ಕ್ಯಾಮರ ಗಳ ಕಾರ್ಯನಿರ್ವಹಣೆ ಸಹ ದೂರು ನಿರ್ವಹಣಾ ಕೋಶದಲ್ಲಿ ಪರಿಶೀಲಿಸಲಾಗುತ್ತಿದ್ದು, ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸಲಾಗುತ್ತಿದೆ ಎಂದರು. ಇದೇ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಡಾ: ಹೆಚ್.ಎಲ್ ನಾಗರಾಜು, ಚುನಾವಣಾ ತಹಶೀಲ್ದಾರ್ ವೆಂಕಟಚಲಪತಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕಿ ನಿರ್ಮಲ ಎಸ್. ಹೆಚ್. ಮಿಡಿಯಾ ಮಾನಿಟರಿಂಗ್ ಸೆಲ್ ನ ನೋಡಲ್ ಅಧಿಕಾರಿ ಸಿದ್ದರಾಜು, ಡಾ; ಮನೋಹರ್ ಹಾಗೂ ಡಾ: ಶಿವರಾಜು ಉಪಸ್ಥಿತರಿದ್ದರು.

# ಚೆಕ್ ಪೋಸ್ಟ್‌ಗಳಲ್ಲಿ ತಪಾಸಣೆ ವೇಳೆ 13.73 ಲೀ ಮದ್ಯ ವಶಕ್ಕೆ

**ರಾಮನಗರ:** ಜಿಲ್ಲೆಯಾದ್ಯಂತ ಕಟ್ಟುನಿಟ್ಟಾಗಿ ಮಾದರಿ ನೀತಿ ಸಂಹಿತೆ ಜಾರಿಗೊಳಿಸಿದ್ದು ಮಾ. 21ರ ಬೆಳಿಗ್ಗೆ 9 ಗಂಟೆಯ ವರೆಗೆ ಒಟ್ಟು 13.73 ಲೀ. ಮದ್ಯ ಜಿಲ್ಲೆಯ ವಿವಿಧ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ವೇಳೆ ವಶಕ್ಕೆ ಪಡೆಯಲಾಗಿದೆ.

ಅಬಕಾರಿ ಇಲಾಖೆ ಕಾರ್ಯಾಚರಣೆ ವೇಳೆ 3,050 ರೂ. ಮೌಲ್ಯದ 5.99 ಲೀ ಮದ್ಯ ಮತ್ತು ಪೋಲಿಸ್ ಇಲಾಖೆ ಕಾರ್ಯಾಚರಣೆಯಲ್ಲಿ 7,740 ರೂ ಮೌಲ್ಯದ 7.74 ಲೀ ಮದ್ಯ ಹಾಗೂ 20,000 ರೂ. ಮೌಲ್ಯದ ಒಂದು ವಾಹನ ವಶಕ್ಕೆ ಪಡೆದು ಪ್ರಕರಣಗಳನ್ನು ದಾಖಲಿಸಲಾಗಿದೆ.



# ವೈರಮುಡಿ ಆಭರಣದ ದರ್ಶನ ಪಡೆದ ಮುಖಂಡರು

**ಮಂಡ್ಯ:** ನಗರದ ಲಕ್ಷ್ಮಿ ಜನಾರ್ಧನ ದೇವಾಲಯಕ್ಕೆ ವಿಶ್ವವಿಖ್ಯಾತ ವೈರಮುಡಿ ಆಭರಣ ಜಿಲ್ಲಾ ಖಜಾನೆಯಿಂದ ವಾಹನದ ಮೂಲಕ ದೇವಾಲಯಕ್ಕೆ ಆಗಮಿಸಿದಂತೆ ಭಕ್ತರು ವೈರಮುಡಿ ದರ್ಶನ ಪಡೆದು ಪುನೀತರಾದರು. ಉದ್ಯಮಿ ಹಾಗೂ ಸಮಾಜ ಸೇವಕ ಬಿ.ಕೆ.ಪ್ರಭಾಕರ್ ಮಾತನಾಡಿ ಪ್ರತಿ ವರ್ಷದಂತೆ ಈ ವರ್ಷವೂ ವೈರಿಮುಡಿಯನ್ನು ವೀಕ್ಷಿಸಲು ಬೆಂಗಳೂರಿನಿಂದ ಆಗಮಿಸಿದ್ದು ದೇವರ ದರ್ಶನ ಪಡೆದಿದ್ದೇನೆ, ಪ್ರತಿ ವರ್ಷದಂತೆ ಈ ವರ್ಷವೂ ವೈರಮುಡಿ ದರ್ಶನ ಪಡೆದಿದ್ದೇನೆ ಮುಂದಿನ ದಿನಗಳಲ್ಲಿ ನಾಡಿಗೆ ಉತ್ತಮ ಮಳೆ ಬೆಳೆಯಾಗಲಿ ಬರಗಾಲದಿಂದ ಮಂಡ್ಯ ಜಿಲ್ಲೆಯ ಜನ ದೂರವಾಗಲಿ ಕನ್ನಂಬಾಡಿ ಕಟ್ಟೆ ತುಂಬಲಿ ಎಂದು ದೇವರಲ್ಲಿ ಪ್ರಾರ್ಥಿಸಿದ್ದೇನೆ ಎಂದರು. ಈ ಸಂದರ್ಭದಲ್ಲಿ ಪೇಟೆ ಬೀದಿ ಸೋಮು ,ಶಾರದ ರಮೇಶ್, ಗಂಜಾಂ ಅಭಿಶೇಕ್, ಉಮ್ಮಡಹಳ್ಳಿ ನಾಗೇಶ್, ರೆಬೆಲ್ ಜನಾರ್ಧನ್, ನಾಗರಾಜು ,ಕಿರಣ್ ಕುಮಾರ್, ರಾಮಣ್ಣ ಹಾಗೂ ಭಜನಾ ಮಂಡಳಿಯ ಸದಸ್ಯರು ಆಗಮಿಸಿದರು.



# ಮಾ. 25 ರಿಂದ ನಾಮಪತ್ರಗಳು, ಇತರೆ ನಮೂನೆಗಳು ಲಭ್ಯ

**ಚಿಕ್ಕಬಳ್ಳಾಪುರ:** ಲೋಕಸಭಾ ಸಾರ್ವತ್ರಿಕ ಚುನಾವಣೆ-2024 ರ ಸಂಬಂಧ ಭಾರತ ಚುನಾವಣಾ ಆಯೋಗವು ದಿನಾಂಕ: 16/03/2024 ರಂದು ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಿದ್ದು, ಸದರಿ ವೇಳಾಪಟ್ಟಿಯಂತೆ 27-ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಾಮಪತ್ರಗಳನ್ನು ದಿನಾಂಕ: 28/03/2024 ರಿಂದ ದಿನಾಂಕ 04/04/2024 ರವರೆಗೆ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ (ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ) ಜಿಲ್ಲಾಧಿಕಾರಿಗಳ ಕಚೇರಿಯ ಮೊದಲನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ ಎಫ್.ಎ-04 ರಲ್ಲಿ ಸ್ಥಾಪಿಸಲಾಗಿರುವ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಸ್ವೀಕರಿಸಲಾಗುತ್ತದೆ.




ನಾಮಪತ್ರಗಳನ್ನು ಸಲ್ಲಿಸುವ ಅಭ್ಯರ್ಥಿಗಳು/ ಸೂಚಕರು ಚುನಾವಣಾಧಿಕಾರಿಗಳ ಕರ್ಯಾಲಯಕ್ಕೆ ಅಭ್ಯರ್ಥಿಯು ಸೇರಿ ಐದು (1+4) ಜನರಿಗೆ ಮಾತ್ರ ಅಧೀಕೃತ ಪ್ರವೇಶ ನೀಡಲಾಗುವುದು. ನಾಮಪತ್ರಗಳನ್ನು ಸಲ್ಲಿಸುವ ಅಭ್ಯರ್ಥಿಗಳು/ಸೂಚಕರು ಚುನಾವಣಾಧಿಕಾರಿಗಳ ಕಚೇರಿಯಿಂದ 100 ಮೀಟರ್ ಒಳಭಾಗದಲ್ಲಿ ಒಟ್ಟು 3 ವಾಹನಗಳಿಗೆ ಪ್ರವೇಶವಿರುತ್ತದೆ.

ನಾಮಪತ್ರ, ನಮೂನೆ-2ಎ, ನಮೂನೆ-26 ರ ಅಫಿಡವಿಟ್ ಮತ್ತು ಇತರೆ ಅಗತ್ಯ ದಾಖಲೆಗಳು ಪ್ರತಿಗಳು ಜಿಲ್ಲಾಧಿಕಾರಿಗಳ ಕಚೇರಿಯ 1ನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ ಎಫ್‌ಎ-03 ರಲ್ಲಿ ಸ್ಥಾಪಿಸಲಾಗಿರುವ ನಾಮಪತ್ರ ಮಾಹಿತಿ/ಸಲ್ಲಿಕಾ ಕೇಂದ್ರದಲ್ಲಿ ದಿನಾಂಕ 25/03/2024 ರಿಂದ ಕಚೇರಿಯ ಅವಧಿಯಲ್ಲಿ ಲಭ್ಯವಿರುತ್ತದೆ ಹಾಗೂ ಈ ನಮೂನೆ/ದಾಖಲೆಗಳು ಭಾರತ ಚುನಾವಣಾ ಆಯೋಗದ ವೆಬ್ ಸೈಟ್ ನಲ್ಲಿಯೂ ಸಹಃ ಲಭ್ಯವಿದ್ದು, ಸಾರ್ವಜನಿಕರು ವೆಬ್ ಸೈಟ್ ಮೂಲಕ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ನಾಮಪತ್ರ ಸಲ್ಲಿಕೆ ಮತ್ತು ದಾಖಲೆಗಳ ಬಗ್ಗೆ ಹೆಚ್ಚಿನ ಮಾಹಿತಿ ಅವಶ್ಯಕವಿದ್ದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹರೀಶ್.ಹೆಚ್.ಎ, ಶಿರಸ್ತೇದಾರ್ ರವರನ್ನು (ದೂರವಾಣಿ ಸಂಖ್ಯೆ: 08156-277004) ಸಂಪರ್ಕಿಸಿ ಮಾಹಿತಿ ಪಡೆಯಬಹುದೆಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 25ಕ್ಕೆ ಅರಕೇಶ್ವರಸ್ವಾಮಿ ಬ್ರಹ್ಮರಥೋತ್ಸವ

**ಮಂಡ್ಯ:** ಶ್ರೀ ಕ್ಷೇತ್ರ ಮಾಂಡವ್ಯಾಧಿಪತಿ ಶ್ರೀ ಅರಕೇಶ್ವರಸ್ವಾಮಿಯವರ ಬ್ರಹ್ಮರಥೋತ್ಸವವು ಮಾರ್ಚ್ 25 ರಂದು ಬೆಳಿಗ್ಗೆ 9.42 ರಿಂದ 10.30 ರವರೆಗೆ ಶ್ರೀ ಅರಕೇಶ್ವರಸ್ವಾಮಿ ಪುಣ್ಯ ಕ್ಷೇತ್ರ ಗುತ್ತಲು ಗ್ರಾಮದಲ್ಲಿ ನಡೆಯಲಿದೆ.

ಶ್ರೀ ಶೈವಾಗಮೋಕ್ತ ವಿಶೇಷ ಪೂಜಾ ಉತ್ಸವಾದಿಗಳ ಕಾರ್ಯಕ್ರಮಗಳು ಮಾರ್ಚ್ 28 ರವರೆಗೆ ನದೆಯಲಿದ್ದು, ಮಾರ್ಚ್ 22 ರಂದು ತ್ರಯೋದಶಿ ತಿಥಿ ಮಖೆ ನಕ್ಷತ್ರ, ಪ್ರಾತಃ ಕಾಲ ಅಭಿಷೇಕ, ಪ್ರಕಾರದಲ್ಲಿ ಅಷ್ಟಮೂರ್ತಿ ಬಲಿ ಪ್ರಧಾನ ಪಂಚಬ್ರಹ್ಮಹವನ ಹೋಮ ರಾತ್ರಿ ಪುಷ್ಪಮಂಟಪೋತ್ಸವ ಪಂಚಬ್ರಹ್ಮ ಹವನ ಹೋಮ ಅಷ್ಟಮೂರ್ತಿ ಬಲಿ ಪ್ರಧಾನ, ಮಾರ್ಚ್ 23 ರಂದು ಚತುರ್ಥಿ ತಿಥಿ ಪೂರ್ವಾಪಾಲ್ಗುಣಿ ನಕ್ಷತ್ರ ಪ್ರಾತಃಕಾಲ ಅಭೀಷೇಕ, ಪ್ರಕಾರದಲ್ಲಿ ಅಷ್ಟಮೂರ್ತಿ ಬಲಿ ಪ್ರಧಾನ, ಪಂಚಬ್ರಹ್ಮಹವನ ಹೋಮ ರಾತ್ರಿ ವೃಷಭಾರೋಹಣ ಉತ್ಸವ ಪಂಚಬ್ರಹ್ಮ ಅಷ್ಟ ಮೂರ್ತಿ ಬಲಿಪ್ರಧಾನ, ಮಾರ್ಚ್ 24 ರಂದು ಪಂಚಮಿ ತಿಥಿ ಉತ್ತರೆ ನಕ್ಷತ್ರ ಪ್ರಾತಃಕಾಲ ಅಭಿಷೇಕ, ಪ್ರಕಾರದಲ್ಲಿ ಅಷ್ಟಮೂರ್ತಿ ಬಲಿ ಪ್ರಧಾನ, ಪಂಚಬ್ರಹ್ಮ ಹವನ ಹೋಮ ರಾತ್ರಿ ಬಲಿ ಪ್ರಧಾನಶ್ರೀ ರಥದ ಕಲಶ ಪೂಜೆ ಹಾಗೂ ಸ್ಥಾಪನೆ ಶ್ರೀ ಸ್ವಾಮಿಯವರ ಕಾಶಿಯಾತ್ರೆ ಉತ್ಸವ ಶ್ರೀ ಸ್ವಾಮಿಯವರ ಹಾಗೂ ಗಣಪತಿ ಪಂಚಬ್ರಹ್ಮ ನವಗ್ರಹ ಹವನ ಹೋಮ ಗಿರಿಜಾ ಕಲ್ಯಾಣೋತ್ಸವ, ಅನ್ನಸಂತರ್ಪಣೆ, ಗಜಾರೋಹಣ ಉತ್ಸವ, ಮಾರ್ಚ್ 25 ರಂದು ಪೂರ್ಣಿಮಾ ತಿಥಿ ಉತ್ತರೆ ನಕ್ಷತ್ರ ಪ್ರಾತಃಕಾಲ ರುದ್ರಾಭಿಷೇಕ ಪಂಚಮೂರ್ತಿ ಹವನ ಹೋಮ ನಂತರ ಮಹಾ ಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ, ಬೆಳಗಿನ ಜಾವ 5 ಗಂಟೆಗೆ ರಥಕ್ಕೆ ಬಲಿ ಪೂಜೆ ಬೆಳಿಗೆ ರಥದ ಪೂಜೆ, ರಥವು ಹಾದುಹೋಗುವ ಪ್ರಮುಖ ಬೀದಿಯಲ್ಲಿ ವಾಸ್ತು ಬಲಿಪ್ರಧಾನ, ದೇವರ ಮನೆಯಲ್ಲಿ ಮಂಟಪೋತ್ಸವ, ತೇರಡಿ ಉತ್ಸವ, ಮಂಟಪೋತ್ಸವ(ಯಾತ್ರಾದಾನೋತ್ಸವ), ತೇರಿಗೆ ಪೂಜೆ, ಗೋದಮನಿಗೆ ಪೂಜೆ, ರಥದ ಚಕ್ರಕ್ಕೆ ಗದಮ್ಮ ಕೊಡುವುದು, ಪ್ರಾರಂಭದಿಂದ ಸಂಪೂರ್ಣಗೊಳ್ಳುವ ತನಕ ಬೆಳಿಗ್ಗೆ 11-04 ರಿಂದ 11-30 ಗಂಟೆಯೊಳಗೆ ಶ್ರೀ ಮದ್ದವ್ಯ ರಥೋತ್ಸವ ಹೊರಟು ಪೂರ್ಣಗೊಳ್ಳುವುದು. ಶ್ರೀ ಸ್ವಾಮಿಯವರ ದೇವಸ್ಥಾನ ಸನ್ನಿಧಿಯಲ್ಲಿ ಅನ್ನಸಂತರ್ಪಣೆ, ಸಂಜೆ 7 ಗಂಟೆಗೆ ಮೆರವಣಿಗೆ ಉತ್ಸವ ರಾತ್ರಿ 9 ಕ್ಕೆ ಮೂಕಬಲಿ, ಮಾರ್ಚ್ 26 ರಂದು ಪ್ರತಿಪತ್ ತಿಥಿ ಹಸ್ತಾ ನಕ್ಷತ್ರ ಪ್ರಾತಕಾಲಃ ಅಭಿಷೇಕ ಮೂಕಬಲಿ ಪಂಚಬ್ರಹ್ಮ ಹವನ ಹೋಮ ರಾತ್ರಿ ಅಷ್ಟಾರೋಹಣ ಮೂಕಬಲಿ ಶಯನೋತ್ಸವ ಪಂಚಬ್ರಹ್ಮ ಹವನ ಹೋಮ, ಮಾರ್ಚ್ 27 ರಂದು ದ್ವಿತೀಯ ತಿಥಿ ಚಿತ್ತೆ ನಕ್ಷತ್ರ ವಸಂತೋತ್ಸವ ತೀರ್ಥಸ್ನಾನ ಹಾಗೂ ಪಂಚಾಮೃತ ಅಭಿಷೇಕ ಮೂಕಬಲಿ ಪಂಚಬ್ರಹ್ಮ ಹವನ ಹೋಮ ರಾತ್ರಿ ಅಭಿಷೇಕ ಮೂಕಬಲಿ ಹಾಗೂ ಪುಷ್ಪ ಪಲ್ಲಕ್ಕಿ ಮಂಟಪೋತ್ಸವ ನಂತರ ಧ್ವಜಾರೋಹಣ ಸಲ್ಲಿಸುವುದು. ಮಾರ್ಚ್ 28 ರಂದು ತೃತೀಯ ತಿಥಿ ಸ್ವಾತಿ ನಕ್ಷತ್ರ ಎಲ್ಲಾ ದೇವರಿಗೂ ಮಹಾಭಿಷೇಕ ದೇವಸ್ಥನದ ಪ್ರಕಾರದಲ್ಲಿ ಉತ್ಸವ ತೆಪ್ಪೋತ್ಸವ ರಾತ್ರಿ 9 ಗಂಟೆಗೆ ಪ್ರಸಾದ ವಿನಿಯೋಗ ನಡೆಯಲಿದೆ.

# ಆನೆ ದಾಳಿ ವ್ಯಕ್ತಿ ಸಾವು

**ಚಾಮರಾಜನಗರ:** ಆನೆ ದಾಳಿಗೆ ವ್ಯಕ್ತಿಯೋರ್ವ ಸಾವನ್ನಪ್ಪಿದ ಘಟನೆ ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಕತ್ತಕಾಲ್ ಪೋಡು ಗ್ರಾಮದಲ್ಲಿ ನಡೆದಿದೆ. ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಕತ್ತಕಾಲ್ ಪೋಡಿನ ಮಾದ (35) ಎಂಬಾತನೆ ಆನೆ ದಾಳಿಗೆ ಮೃತಪಟ್ಟಂತಹ ವ್ಯಕ್ತಿಯಾಗಿದ್ದಾನೆ. ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಪ್ರದೇಶದ ಬೈಲೂರು ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಅರಣ್ಯಾಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದಾರೆ.



# ಶಾಂತಿಯುತ ಚುನಾವಣೆಗೆ ಸಹಕರಿಸಿ: ಜಿಲ್ಲಾ ಚುನಾವಣಾಧಿಕಾರಿ ಮನವಿ

**ರಾಮನಗರ:** ಲೋಕಸಭಾ ಚುನಾವಣೆ-2024 ರ ಸಂಬಂಧ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ರಾಮನಗರ ಜಿಲ್ಲೆಯಲ್ಲಿ ಶಾಂತಿಯುತ ಚುನಾವಣೆಗೆ ಸಹಕರಿಸಿ ಯಾವುದೇ ಚುನಾವಣಾ ಅಕ್ರಮಗಳು ನಡೆಸಿದರೆ ಕಾನೂನು ರೀತ್ಯ ಕ್ರಮವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ಅವಿನಾಶ್ ಮೆನನ್ ರಾಜೇಂದ್ರ ಅವರು ತಿಳಿಸಿದರು.



ಅವರು ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಪತ್ರಿಕಾ ಸುದ್ದಿಗೊಷ್ಠಿ ಉದ್ದೇಶಿಸಿ ಮಾತನಾಡಿದರು. ಜಿಲ್ಲೆಯಲ್ಲಿ ಮೂರು ದಿನಗಳಿಂದ ಕುಕ್ಕರ್ ವಿತರಣೆ ಮಾಡಲಾಗಿತ್ತಿರುವ ಕುರಿತು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಸುಮಾರು 67 ಕಾರ್ಖಾನೆಗಳು ಮತ್ತು ಸಂಸ್ಥೆಗಳನ್ನು ಪರಿಶೀಲನೆ ಮಾಡಿಲಾಗಿದ್ದು ಚುನಾವಣೆಗೆ ಸಂಬಂಧಪಟ್ಟ ಯಾವುದೇ ವಸ್ತುಗಳ ತಯಾರಿಕೆ ಲಭ್ಯವಾಗಿರುವುದಿಲ್ಲವೆಂದು ವಾಣಿಜ್ಯ ತೆರಿಗೆ ಇಲಾಖೆ ಹಾಗೂ ಜಿಲ್ಲಾ ಚುನಾವಣಾ ವೀಕ್ಷಣಾ ತಂಡ ವರದಿ ನೀಡಿದೆ. ಅಲ್ಲದೆ ಹಾರೋಹಳ್ಳಿ ತಹಶೀಲ್ದಾರ್ ರವರಿಗೆ ಯಾವುದೇ ದೂರು ದಾಖಲಾಗಿಲ್ಲವೆಂದು ವರದಿ ನೀಡಿರುತ್ತಾರೆ ಎಂದರು. ನಿನ್ನೆ ರೂ.14.00 ಲಕ್ಷಗಳ ಮೊತ್ತದ ಸೀರೆ ವಶಪಡಿಸಿಕೊಳ್ಳಲಾಗಿದ್ದು ಸಂಬಂಧಪಟ್ಟವರ ವಿರುದ್ಧ ಎಫ್.ಐ.ಆರ್. ದಾಖಲಿಸಲು ಕ್ರಮವಹಿಸಲಾಗಿದೆ ಎಂದರು.ಹಾರೋಹಳ್ಳಿ ಬಳಿ 24★7 ಕಾರ್ಯ ನಿರ್ವಹಿಸಲು 2 ಹೊಸ ಚೆಕ್ ಪೋಸ್ಟ್ ತೆರೆಯಲಾಗಿದೆ. ಒಂದು ಮೊಬೈಲ್ ಚೆಕ್ ಪೋಸ್ಟ್ ಕಾರ್ಯ ನಿರ್ವಹಿಸುತ್ತಿದೆ, ಜಿಲ್ಲೆಯಲ್ಲಿರುವ ಗೋದಾಮು ಮತ್ತು ಕಲ್ಯಾಣ ಮಂಟಪಗಳನ್ನು ಸಹ ಪರಿಶೀಲನೆ ಮಾಡಲಾಗುತ್ತಿದೆ ಒಟ್ಟಾರೆ ಜಿಲ್ಲೆಯಲ್ಲಿ ಶಾಂತಿಯುತವಾಗಿ ಚುನಾವಣೆ ನಡೆಸಲು ಅಗತ್ಯ ಕ್ರಮವಹಿಸಲಾಗಿದೆ ಎಂದರು ಸುದ್ದಿಗೊಷ್ಠಿಯಲ್ಲಿ ಉಪವಿಭಾಗಾಧಿಕಾರಿ ಬಿನೋಯ್ , ರಾಮನಗರ ತಾಲ್ಲೂಕು ತಹಶೀಲ್ದಾರ್ ತೇಜಸ್ವಿನಿ ಉಪಸ್ಥಿತರಿದ್ದರು.

# 26ಕ್ಕೆ ಮೈಸೂರಿನ ಚೆಸ್ಕಾಂ ಎಂಡಿ ಕಚೇರಿಗೆ ಮುತ್ತಿಗೆ

**ಚಾಮರಾಜನಗರ:** ಸಮರ್ಪಕ ವಿದ್ಯುತ್ ಪೂರೈಕೆ ಹಾಗೂ ಅಕ್ರಮ ಸಕ್ರಮ ಯೋಜನೆ ಮರು ಜಾರಿಗೆ ಒತ್ತಾಯಿಸಿ ಲಮಾ. 26 ರಂದು ಮಂಗಳವಾರ ಬೆಳಿಗ್ಗೆ 11: 30 ಗಂಟೆಗೆ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಆಶ್ರಯದಲ್ಲಿ ರೈತರು ಮೈಸೂರಿನ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ವ್ಯವಸ್ಥಾಪಕ ನಿರ್ದೇಶಕರ ಕಚೇರಿಗೆ ಮುತ್ತಿಗೆ ಹಾಕಿ ಬೃಹತ್ ಪ್ರತಿಭಟನೆ ನಡೆಸಲಾಗುತ್ತದೆ. ಈ ಪ್ರತಿಭಟನೆಗೆ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿಕೊಡುವಂತೆ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮನವಿ ಮಾಡಿದರು.



ನಗರದ ಚಾಮರಾಜೇಶ್ವರ ಉದ್ಯಾನವನದಲ್ಲಿ ನಡೆದ ಜಿಲ್ಲೆಯ ರೈತರ ಪದಾಧಿಕಾರಿಗಳು ಮತ್ತು ಕೃಷ ಪಂಪ್ ಸೆಟ್ ಬಳಕೆದಾರ ಸಭೆಯಲ್ಲಿ ಅವರ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೃಷಿ ಪಂಪ್ ಸೆಟ್ ಗಳಿಗೆ 10 ಗಂಟೆಗಳ ವಿದ್ಯುತ್ ಪೂರೈಕೆ ಮಾಡಬೇಕು ಸೇರಿದಂತೆ ಹಗಲು ವೇಳೆ ಸರ್ಕಾರದ ಆದೇಶದಂತೆ ಸಮರ್ಪಕ ವಿದ್ಯುತ್ ನೀಡುವಲ್ಲಿ ವಿಳಂಬ ನೀತಿ ರೈತರಿಗೆ ಸೋಲಾರ್ ಪಂಪ್ಸೆಟ್ ಅನ್ನು ವೈಯಕ್ತಿಕವಾಗಿ ಅಳವಡಿಸಿಕೊಳ್ಳಲು ಇಲಾಖೆ ಪ್ರೇರೆಪಿಸುತ್ತಿರುವುದು ಕಳೆದ ಸಾಲಿನಲ್ಲಿ ಇದ್ದಂತೆ ಅಕ್ರಮ ಸಕ್ರಮವನ್ನು ಜಾರಿ ಮಾಡಬೇಕು ಎಂದು ಒತ್ತಾಯಿಸಿ ದರು. ಹೊಸ ವಿದ್ಯುತ್ ಸಂಪರ್ಕ ಪಡೆಯಲು ರೈತರಿಗೆ ಸಾಧ್ಯವಾಗುತ್ತಿಲ್ಲ ಸರ್ಕಾರದ ಆದೇಶವಿದೆ ಎಂದು ಯಾವುದೇ ನೋಂದಣಿಯನ್ನು ಮಾಡಿಕೊಳ್ಳದೆ ಸ್ವಂತಕ್ಕೆ ಎರಡು ಮೂರು ಲಕ್ಷವನ್ನು ಕಟ್ಟಿಸಿ ಮತ್ತು ಸಂಪರ್ಕ ಪಡೆಯಲು ಹೇಳುತ್ತಿರುವುದು ಇಲಾಖೆ ಕಾಡಂಚಿನ ಪ್ರದೇಶಗಳಿಗೆ ಸಮರ್ಪಕವಾಗಿ ಹಗಲು ವೇಳೆ ವಿದ್ಯುತ್ ಪೂರೈಕೆಗೆ ಒತ್ತಾಯ ಕಾಡು ಪ್ರಾಣಿಗಳಿಂದ ರೈತರಿಗೆ ತೊಂದರೆ ಆಗುತ್ತಿರುವುದು ಹಾಗೂ ಮಾನವ ಮತ್ತು ಪ್ರಾಣಿಗಳ ಸಂಘರ್ಷ ತಡೆಯಲು ಪೂರಕವಾಗುವಂತೆ ಇಲಾಖೆಯಲ್ಲಿ ಟಿಸಿಗಳು ಸುಟ್ಟು ಹೋದರೆ 72 ಗಂಟೆಯಲ್ಲಿ ಆಗಬೇಕೆಂಬ ನಿಯಮವಿದರು ಇಲಾಖೆ ಕೆಳ ಹಂತದ ಅಧಿಕಾರಿಗಳು ತೀವ್ರ ವಿಳಂಬ ಮಾಡುತ್ತಿರುವವರ ಬಗ್ಗೆ ರೈತರ ಜಮೀನುಗಳಲ್ಲಿ ಜೋತು ಬಿದ್ದಿರುವ ತಂತಿಗಳನ್ನು ಸರಿಪಡಿಸಿರುವ ಬಗೆ ಜಂಗಲ್ ಕಟಿಂಗ್ ಮಾಡದಿರುವುದು ಹೆಚ್ಚುವರಿ ಟಿಸಿಯನ್ನು ತಕ್ಷಣ ನೀಡುವ ಬಗೆ ಸೋಲಾರ್ ಪಂಪ್ ಸೆಟ್ ಅಳವಡಿಕೆಗೆ ಮೊದಲನೇಂತೆ ಇದ್ದಂತಹ 23,000 ರೂಪಾಯಿ ಗಳನ್ನು ಕಟ್ಟಿಸಿಕೊಂಡು ಸರ್ಕಾರವೇ ಉಳಿದ ಹಣವನ್ನು ತುಂಬಿ ರೈತರಿಗೆ ಸಂಪರ್ಕ ನೀಡಲಿ ಹೊಸ ಕೃಷಿ ಮಾಡುವ ಯುವಕರಿಗೆ ಹಾಗೂ ಗ್ರಾಮೀಣ ಭಾಗದಲ್ಲಿ ಹೊಸ ಕೃಷಿ ಮಾಡುವ ರೈತರಿಗೆ ಈ ನೀತಿ ನಿಯಮಗಳಿಂದ ಸಾಕಷ್ಟು ತೊಂದರೆಯಾಗುತ್ತಿದೆ ತಕ್ಷಣ ಈ ನಿಯಮವನ್ನು ಕೈ ಬಿಟ್ಟು ಯಥಾ ಸ್ಥಿತಿ ನಿಯಮವನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿದರು. ವಿದ್ಯುತ್ ಅವಘಡಗಳಿಂದ ಮರಣ ಹೊಂದಿದ ಕುಟುಂಬಕ್ಕೆ 25 ಲಕ್ಷ ಪರಿಹಾರ ನೀಡಬೇಕು. ರೈತರು ಬೆಳೆದಂತಹ ಕಬ್ಬಿಗೆ ಶಾರ್ಟ್ ಸರ್ಕ್ಯೂಟ್ ನಿಂದ ಉಂಟಾದ ನಷ್ಟಕ್ಕೆ 30 ದಿನದ ಒಳಗೆ ನಷ್ಟ ಪರಿಹಾರ ನೀಡಬೇಕು ರಾಜ್ಯ ಸರ್ಕಾರ ಚುನಾವಣೆಯ ಪ್ರಣಾಳಿಕೆಯ ಭರವಸೆಯಂತೆ ಪ್ರತಿ ಕುಟುಂಬಕ್ಕೆ 200 ಯೂನಿಟ್ ಉಚಿತವಿದ್ಯುತ್ ಅನ್ನು ನೀಡಬೇಕು ಅದನ್ನು ಬಿಟ್ಟು ಷರತ್ತುಗಳನ್ನು ಹಾಕಿ ಸರಾಸರಿಯಂತೆ ವಿದ್ಯುತ್ ನೀಡುತ್ತೇವೆ ಎಂಬ ನಿಯಮ ಬದಲಾಗಬೇಕು ದೇಶದಲ್ಲಿ ಆಹಾರವನ್ನು ಬೇರೆ ರಾಷ್ಟ್ರಗಳಿಗೆ ಮೋದಿಯವರು ಉಚಿತವಾಗಿ ಶ್ರೀಲಂಕಾ ಪಾಕಿಸ್ತಾನ ಮತ್ತು ಪ್ರವಾಹ ಪೀಡಿತ ರಾಷ್ಟ್ರಗಳಿಗೆ ಹಂಚುತ್ತಾರೆ ರಾಜ್ಯ ಸರ್ಕಾರ ಪಡಿತರ ವ್ಯವಸ್ಥೆಯಲ್ಲಿ 10 ಕೆಜಿ ಅಕ್ಕಿ ಆದರೆ ಕೃಷಿಗೆ ಮೂಲ ಸೌಕರ್ಯವಾದ ವಿದ್ಯುತ್ ನೀಡುವಲ್ಲಿ ಎರಡು ಸರ್ಕಾರಗಳು ನಾಟಕವಾಡುತ್ತಿವೆ ಎಂದು ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದರು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರ ಸಂಘದ ಪದಾಧಿಕಾರಿಗಳು ಮತ್ತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಪ್ರಮುಖ ಅಧಿಕಾರಿಗಳೊಂದಿಗೆ ತಕ್ಷಣ ಸಭೆ ನಡೆಸಬೇಕು ರೈತರ ಹಿತಾಸಕ್ತಿಗಾಗಿ ರೈತನ ಕೃಷಿ ಉಳಿವಿಗಾಗಿ ಕೃಷಿ ಪಂಪ್ ಸೆಟ್ ಬಳಕೆದಾರ ರಕ್ಷಣೆಗಾಗಿ ಜಿಲ್ಲೆಯ ಕೃಷಿ ಪಂಪ್ ಸೆಟ್ ಬಳಕೆದಾರರು ಹೊಸ ಕೊಳವೆಬಾವಿ ಕೊರೆದಿರುವ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಈ ಪ್ರತಿಭಟನೆಗೆ ಭಾಗವಹಿಸಿ ಯಶಸ್ವಿಗೊಳಿಸುವಂತೆ ಹಳ್ಳಿ ಕೆರೆಹುಂಡಿ ಭಾಗ್ಯರಾಜ್ ಮನವಿ ಮಾಡಿದರು.

## ಸಂಜೆ ಟಿಪ್ಸ್



# ವೀಸಾ ಅರ್ಜಿ ಪ್ರಮಾಣವು ಹೆಚ್ಚಳ

ಹೊರದೇಶದ ಪ್ರಯಾಣ ನಿರಂತರ ಏರಿಕೆಯನ್ನು ಕಂಡಿದ್ದರಿಂದ 2023ರಲ್ಲಿ ಬೆಂಗಳೂರಿನಿಂದ ವೀಸಾ ಅರ್ಜಿ ಪ್ರಮಾಣವು ಬಲಿಷ್ಠವಾಗಿ ಸಾಂಕ್ರಾಮಿಕ ಪೂರ್ವ ಮಟ್ಟವನ್ನು ಸಹ ಮೀರಿತು. ವಿಎಫ್‌ಎಸ್ ಗ್ಲೋಬಲ್ ಪ್ರಕಾರ, ಬೆಂಗಳೂರಿನಿಂದ ವೀಸಾ ಅರ್ಜಿ ಪ್ರಮಾಣವು 2023ರಲ್ಲಿ 18% ವಾರ್ಷಿಕ ಬೆಳವಣಿಗೆಯನ್ನು ದಾಖಲಿಸಿತು. ಸಾಂಕ್ರಾಮಿಕ ಪೂರಾ ಸಂಖ್ಯೆಗಳಿಗೆ ಹೋಲಿಸಿದರೆ, ಬೆಂಗಳೂರಿನಿಂದ ವೀಸಾ ಅರ್ಜಿಪ್ರಮಾಣವು 2019ರ ಮಟ್ಟವನ್ನು ಶೇಖಡಾ 9%ರಷ್ಟು ಹೆಚ್ಚಳ ಕಂಡಿತು.ಬೆಂಗಳೂರಿನ ಈ ಏರುತ್ತಿರುವ ಪ್ರವೃತ್ತಿಯು 2023ರಲ್ಲಿ ಭಾರತದಲ್ಲಿ ನೋಂದಣಿಯಾಗಿರುವ ಶೇಖಡಾ 16%ರಷ್ಟು ವೀಸಾ ಅರ್ಜಿಗಳ ಒಟ್ಟಾರೆ ಪ್ರಮಾಣದೊಂದಿಗೆ ಸಮನಾಗಿದೆ. ಸಾಂಕ್ರಾಮಿಕ ಪೂರ್ವ ಸಮಯಕ್ಕೆ ಹೋಲಿಸಿದರೆ, ಭಾರತದ ವೀಸಾ ಅರ್ಜಿ ಪ್ರಮಾಣಗಳು 2019ರ 93% ಮಟ್ಟವನ್ನು ತಲುಪಿದೆ.ವಿಎಫ್‌ಎಸ್ ಗ್ಲೋಬಲ್ ನ ದಕ್ಷಿಣ ಮುಖ್ಯಸ್ಥರಾಗಿರುವ ಜಯಾ ಅಮಿತ್ ಮಿತ್ರಾ ಅವರು ''ನಾವು 2022ರಲ್ಲಿ ಭಾರತ ಮತ್ತು ಇಡೀ ದಕ್ಷಿಣ ಏಷ್ಯಾದಿಂದ ಅತ್ಯುತ್ತಮ ಬೇಡಿಕೆಯನ್ನು ನಿರಂತರವಾಗಿ ಕಾಣುತ್ತಿದ್ದು, ಇದು ವರ್ಷವಿಡಿಯ ಸ್ಥಿರ ಏರಿಕೆಯೊಂದಿಗೆ ವಿಸ್ತೃತ ಹೊರದೇಶದ ಪ್ರಯಾಣಕ್ಕೆ ಕಾರಣವಾಗಿದೆ. ನಾವು ತಂತ್ರಜ್ಞಾನ-ಚಾಲಿತ, ಸಾಟಿಯಿಲ್ಲದ, ಅತ್ಯಧಿಕ ಸುರಕ್ಷತೆಯುಳ್ಳ ಮತ್ತು ವಿಶ್ವಾಸಾರ್ಹ ಪರಿಹಾರಗಳಮೂಲಕ ಅಸಾಧಾರಣ ಗ್ರಾಹಕ ಸೇವೆಯನ್ನು ಒದಗಿಸಲು ಬದ್ಧರಾಗಿದ್ದೇವೆ'' ಎಂದರು. ಮಿತ್ರಾ ಅವರು ಮುಂದುವರೆಯುತ್ತಾ ''ವಿಎಫ್‌ಎಸ್ ಗ್ಲೋಬಲ್ ಹೆಸರಿನಲ್ಲಿ ಮತ್ತು ಸಂದರ್ಶನದ ಹೆಸರಿನಲ್ಲಿ ಹಣ ಲೂಟಿ ಮಾಡುತ್ತಿರುವ ನಕಲಿ ಜಾಲತಾಣಗಳು/ಸಾಮಾಜಿಕ ಮಾಧ್ಯಮ ಪುಟಗಳ ಕುರಿತು ಅರ್ಜಿದಾರರು ಎಚ್ಚರಿಕೆಯಿಂದಿರಬೇಕು. ''ಸಂದರ್ಶನಗಳು ಉಚಿತವಾಗಿವೆ ಮತ್ತು ಕೇವಲ www.vfsglobal.comgರಲ್ಲಿ ಮಾತ್ರ ಲಭ್ಯವಿದ್ದು, ಮೊದಲು ಬಂದವರಿಗೆ ಮೊದಲು ಆದ್ಯತೆ ಆಧಾರದಲ್ಲಿ ನೀಡಲಾಗುತ್ತದೆ ಎಂದು ತಿಳಿಸಿದರು.

# ಕರ್ಬೂಜ ಜ್ಯೂಸ್

## ಪಾಕ ಶಾಲೆ



## ಮಾಡುವ ವಿಧಾನ

ಮೊದಲು ಕರ್ಬೂಜ ಹಣ್ಣನ್ನು ತೊಳೆದು ಕತ್ತರಿಸಿ ಮತ್ತು ಸಿಪ್ಪೆಯನ್ನು ಬೇರ್ಪಡಿಸಿದೆ. ಮಧ್ಯದಲ್ಲಿರುವ ಬೀಜದ ಭಾಗವನ್ನು ಸಹ ತೆಗೆದುಹಾಕಿ. ಇದನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ಕತ್ತರಿಸಿಕೊಂಡು ಮಿಕ್ಸಿ ಜಾರಿಗೆ ಹಾಕಿ. ಇದಕ್ಕೆ ಸಕ್ಕರೆ ಮತ್ತು ತೆಂಗಿನಕಾಯಿಯನ್ನು ಅಗತ್ಯವಿರುವ ನೀರನ್ನು ಬಳಸಿ ರುಬ್ಬಿಕೊಳ್ಳಿ. ಬಳಿಕ ಒಂದು ಪಾತ್ರೆಗೆ ಹಾಕಿಕೊಳ್ಳಿ. ಈ ಮಿಶ್ರಣಕ್ಕೆ ಹಾಲು ಮತ್ತು ಉಳಿದ ನೀರನ್ನು ಸೇರಿಸಿ. ಕೆಲವು ಐಸ್ ತುಂಡುಗಳ ಜೊತೆಗೆ ಇದನ್ನು ಸರ್ವ್ ಮಾಡಿ.

## ಬೇಕಾಗಿರುವ ಪದಾರ್ಥ

1 ಮಧ್ಯಮ ಗಾತ್ರದ ಕರಬೂಜ ಹಣ್ಣು, 1/4 ಕಪ್ ತಾಜಾ ತುರಿದ ತೆಂಗಿನಕಾಯಿ, ಒಂದು ಕಪ್, ನೀರುಒಂದು ಕಪ್ ಕುದಿಸಿದ ಹಾಲು, ರುಚಿಗೆ ತಕ್ಕಷ್ಟು ಸಕ್ಕರೆ ಅಥವಾ ಬೆಲ್ಲ

# ಒಟಿಟಿಯಲ್ಲೂ ಹನುಮಾನ್ ಸಿನಿಮಾ ವಿಶ್ವದಾಖಲೆ!



ಹನುಮಾನ್ ಸಿನಿಮಾ ಬಾಕ್ಸ್ ಆಫೀಸ್ ನಲ್ಲಿ ನಿರೀಕ್ಷೆಯಂತೆ ಬ್ಲಾಕ್ ಬಸ್ಟರ್ ಹಿಟ್ ಆಯಿತು. ಮೇಲಾಗಿ ಈ ಸಿನಿಮಾ ಬಿಡುಗಡೆಗೂ ಮುನ್ನವೇ ಹಲವು ದಾಖಲೆಗಳನ್ನು ತನ್ನ ಹೆಸರಿಗೆ ಬರೆದುಕೊಂಡಿತ್ತು. ಈ ಚಿತ್ರದ ಥಿಯೇಟ್ರಿಕಲ್ ರನ್ ಈಗ ಔಖಿಖಿ ನಲ್ಲಿ ಸ್ಟ್ರೀಮ್ ಆಗುತ್ತಿದೆ. ಈ ಚಲನಚಿತ್ರವು ಈ ತಿಂಗಳ 17 ರಿಂದ ಜನಪ್ರಿಯ ಒಟಿಟಿ ಪ್ಲಾಟ್ಫಾರ್ಮ್ ಚಿಇಇ5 ನಲ್ಲಿ ಸ್ಟ್ರೀಮ್ ಆಗುತ್ತಿದೆ. ಒಟಿಟಿ ಸ್ಟ್ರೀಮಿಂಗ್ ಆದ 11 ಗಂಟೆಗಳಲ್ಲಿ ವಿಶ್ವ ದಾಖಲೆಯನ್ನು ನಿರ್ಮಿಸಿದೆ. ಹನುಮಾನ್ ಚಿತ್ರವು 11 ಗಂಟೆಗಳಲ್ಲಿ 102 ಮಿಲಿಯನ್ ವೀಕ್ಷಣೆಯ ನಿಮಿಷಗಳೊಂದಿಗೆ ದಾಖಲೆ ಬರೆದಿದೆ. ಈ ಮೂಲಕ ವಿಶ್ವ ದಾಖಲೆಯನ್ನು ಮಾಡಿದೆ. ಹನುಮಾನ್ ಚಲನಚಿತ್ರವು 2024 ರಲ್ಲಿ ಚಿಇಇ5 ನಲ್ಲಿ ನೂತನ ದಾಖಲೆ ಬರೆಯುವ ನಿರೀಕ್ಷೆಯಿದೆ. ಚಿಇಇ5 ವಿಶ್ವಾದ್ಯಂತ ಟಾಪ್ ಟ್ರೆಂಡಿಂಗ್ನೊಂದಿಗೆ ಗಗನಕ್ಕೇರುತ್ತಿದೆ. ಅದಕ್ಕೆ ಕಾರಣ 'ಹನುಮಾನ್' ಎನ್ನಲಾಗಿದೆ. ಪ್ಯಾನ್ ಇಂಡಿಯಾ ರೇಂಜ್ನಲ್ಲಿ ಬ್ಲಾಕ್ಬಸ್ಟರ್ ಆಗಿರುವ ಈ ಚಿತ್ರ ಜಿ 5 ಜೊತೆಗೆ ಜಿಯೋ ಸಿನಿಮಾದಲ್ಲಿಯೂ ಸ್ಟ್ರೀಮ್ ಆಗುತ್ತಿದೆ. ಪ್ರಶಾಂತ್ ವರ್ಮಾ ಕಳೆದ ಎರಡು ವರ್ಷಗಳಿಂದ ಈ ಸಿನಿಮಾಗಾಗಿ ಶ್ರಮಿಸಿದ್ದಾರೆ. ಬಿಡುಗಡೆಯ ವೇಳೆಗೆ ಸರಿಯಾದ ಚಿತ್ರಮಂದಿರಗಳು ಸಿಗಲಿಲ್ಲ. ಆದರೆ.. ಹಲವು ಕಷ್ಟ-ನಷ್ಟಗಳನ್ನು ಸಹಿಸಿಕೊಂಡು ಈ ಸಿನಿಮಾ ಸಂಕ್ರಾಂತಿಯಂದು ಬಾಕ್ಸ್ ಆಫೀಸ್ ನಲ್ಲಿ ಗೆದ್ದಿದೆ. ದೊಡ್ಡ ಹೀರೋಗಳಂತೆ ಬಾಕ್ಸ್ ಆಫೀಸ್ ಕಲೆಕ್ಷನ್ ಮಾಡಿದೆ. ಈ ಚಲನಚಿತ್ರವು ಚಿಇಇ5 ನಲ್ಲಿ 8 ಕ್ಕೂ ಹೆಚ್ಚು ಭಾಷೆಗಳಲ್ಲಿ ಸ್ಟ್ರೀಮ್ ಆಗುತ್ತಿದೆ.



# ಬೆವರಿನ ವಾಸನೆಗೆ ಹೇಳಿ ಗುಡ್ ಬೈ



## ಹೆಲ್ತ್ ಟಿಪ್ಸ್

ಬೇಸಿಗೆಯಲ್ಲಿ ಬೆವರು ಸಾಮಾನ್ಯ. ಅತಿ ಬೆವರು ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಕಂಕಳಿನಿಂದ ಬರುವ ಕೆಟ್ಟ ವಾಸನೆ ಅಕ್ಕ-ಪಕ್ಕದವರು ದೂರ ಓಡುವಂತೆ ಮಾಡುತ್ತದೆ. ಬೆವರಿನ ಕೆಟ್ಟ ವಾಸನೆ ಸೆಂಟ್ ವಾಸನೆಯನ್ನೂ ನುಂಗಿ ಹಾಕುತ್ತದೆ. ಇಂಥ ಬೆವರಿನ ಸಮಸ್ಯೆ ನಿಮಗೂ ಕಾಡ್ತಿದ್ದರೆ ಈ ಸುಲಭ ಟಿಪ್ಸ್ ಅನುಸರಿಸಿ. ಬೇಕಿಂಗ್ ಸೋಡಾ ಕಂಕಳಿನ ವಾಸನೆಯನ್ನು ಸುಲಭವಾಗಿ ಕಡಿಮೆ ಮಾಡುತ್ತದೆ. ಒಂದು ಚಮಚ ನಿಂಬೆ ರಸಕ್ಕೆ ಒಂದು ಚಮಚ ಬೇಕಿಂಗ್ ಸೋಡಾ ಬೆರೆಸಿ ಚೆನ್ನಾಗಿ ಮಿಕ್ಸ್ ಮಾಡಿ. ಅದನ್ನು ಕಂಕಳಿಗೆ ಹಚ್ಚಿ 15 ನಿಮಿಷ ಹಾಗೆ ಬಿಡಿ. ನಂತ್ರ ಸ್ವಚ್ಛ ನೀರಿನಲ್ಲಿ ತೊಳೆಯಿರಿ.

ಗುಲಾಬಿ ರಸವನ್ನು ಕಂಕಳಿನ ವಾಸನೆ ಕಡಿಮೆ ಮಾಡಲು ಬಳಸಬಹುದು. ಸ್ನಾನದ ನೀರಿಗೆ ಗುಲಾಬಿ ರಸವನ್ನು ಬೆರೆಸಿ ಸ್ನಾನ ಮಾಡಬಹುದು. ಸೆಂಟ್ ರೂಪದಲ್ಲಿ ಕಂಕಳಿಗೆ ಗುಲಾಬಿ ರಸವನ್ನು ಹಾಕಿಕೊಳ್ಳಬಹುದು. ಇದು ಕಂಕಳಿನಲ್ಲಿ ಬರುವ ಬೆವರು ಹಾಗೂ ವಾಸನೆಯನ್ನು ಕಡಿಮೆ ಮಾಡುತ್ತದೆ.

ಆಪಲ್ ವಿನೆಗರ್ ಕಂಕಳಿನ ಬೆವರಿನಲ್ಲಿ ಉತ್ಪತ್ತಿಯಾಗುವ ಬ್ಯಾಕ್ಟೀರಿಯಾವನ್ನು ತಡೆಯುತ್ತದೆ. ಆಪಲ್ ವಿನೆಗರನ್ನು ಕಂಕಳಿಗೆ ಹಚ್ಚುವುದ್ರಿಂದ ಬೆವರಿನ ಪ್ರಮಾಣ ಕೂಡ ಕಡಿಮೆಯಾಗುತ್ತದೆ. ನಿಂಬೆ, ಆಮ್ಲದ ಗುಣವನ್ನು ಹೊಂದಿದೆ. ಇದು ಬೆವರಿನಿಂದ ಬರುವ ವಾಸನೆಯನ್ನು ತಡೆಯುತ್ತದೆ. ನಿಂಬೆ ಹಣ್ಣನ್ನು ಕತ್ತರಿಸಿ ಕಂಕಳಿಗೆ ಹಚ್ಚಿ ಮಸಾಜ್ ಮಾಡಬೇಕು. 10 ನಿಮಿಷ ಬಿಟ್ಟು ಕಂಕಳನ್ನು ಸ್ವಚ್ಛ ಮಾಡಿಕೊಳ್ಳಿ. ಟೊಮೊಟೊ ರಸವನ್ನು ಕಂಕಳಿಗೆ ಹಾಕಿ 15 ನಿಮಿಷ ಮಸಾಜ್ ಮಾಡಬೇಕು. ಎರಡು ಅಥವಾ ಮೂರು ದಿನ ಟೊಮೊಟೊ ಮಸಾಜ್ ಮಾಡುತ್ತ ಬಂದಲ್ಲಿ ಕಂಕಳಿನಿಂದ ಬರುವ ವಾಸನೆ ಕಡಿಮೆಯಾಗುತ್ತದೆ.

# ಏಕತ್ವಂ ಹೋಳಿ ಮ್ಯೂಸಿಕ್ ಫೆಸ್ಟಿವಲ್



ಏಕತ್ವಂ, ಎನ್ಟ್ರಸ್ಟ್ ಫೌಂಡೇಶನ್ನ ಉಪಕ್ರಮ, ವಾರ್ಷಿಕ ಏಕತ್ವಂ ಹೋಳಿ ಸಂಗೀತ ಉತ್ಸವವನ್ನು ಮಾರ್ಚ್ 2024ರ,22ರಿಂದ 25ರವರೆಗೆ ಬೆಂಗಳೂರು ಗಾಯನ ಸಮಾಜದಲ್ಲಿ ಪ್ರಸ್ತುತಪಡಿಸಲಿದೆ. ಉತ್ಸವವು ಸಂಗೀತದ ಹಬ್ಬವನ್ನು ಆಚರಿಸುತ್ತದೆ,ಜೊತೆಗೆ ಪ್ರದರ್ಶಕರು, ಅಭಿಜ್ಞರು, ವಿಮರ್ಶಕರು ಮತ್ತು ಮಾರ್ಗದರ್ಶಕರನ್ನು ಒಟ್ಟುಗೂಡಿಸುತ್ತದೆ. ಸಂಗೀತ ಪ್ರೇಮಿಗಳನ್ನುಆಕರ್ಷಿಸಲು ಕರ್ನಾಟಕ ವೋಕಲ್, ಕರ್ನಾಟಿಕ್ ಡ್ಯುಯೆಟ್, ಕರ್ನಾಟಿಕ್ ಫ್ಯೂಷನ್ ಬ್ಯಾಂಡ್ ಮತ್ತು ಹಿಂದೂಸ್ತಾನಿ ವೋಕಲ್ ಇವೆ.ಏಕತ್ವಂ ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ, ಪ್ರಚಾರ ಮತ್ತು ಆಚರಣೆಯಲ್ಲಿ

ದಾರಿದೀಪವಾಗಿದೆ. ಸಂಪ್ರದಾಯದಲ್ಲಿ ಬೇರೂರಿದ್ದರೂ ಹೊಸತನದಿಂದ ಉತ್ತೇಜಿಸಲ್ಪಟ್ಟಿದೆ, ಸಮಕಾಲೀನ ಮತ್ತು ಸಮ್ಮಿಳನಸಂಗೀತ ಸೇರಿದಂತೆ ವಿವಿಧ ಪ್ರಕಾರಗಳಲ್ಲಿ ಹಿರಿಯ ಕಲಾವಿದರ ನವೀನ ಕೃತಿಗಳನ್ನು ಬೆಂಬಲಿಸುವ ಮತ್ತು ಪ್ರದರ್ಶಿಸುವಸಂದರ್ಭದಲ್ಲಿ ನಾವು ಉದಯೋನ್ಮುಖ ಕಲಾವಿದರಿಗೆ ವೇದಿಕೆಯನ್ನು ಒದಗಿಸುತ್ತಿದ್ದೇವೆ.



2022 ರಲ್ಲಿ, ಏಕತ್ವಂ ಕರ್ನಾಟಕ ಪ್ರತಿಷ್ಠಿತ ಸಂಗೀತಗಾರರನ್ನು ಗೌರವಿಸುವ ಪ್ರಶಸ್ತಿಗಳನ್ನು ಸ್ಥಾಪಿಸಿತು. ಪಿಟೀಲು ವಿದ್ವಾಂಸಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಸಂಗೀತಾ ಕಲಾನಿಧಿ ಪ್ರೊ.ಟಿ.ಎನ್.ಕೃಷ್ಣನ್ ಅವರ ಕುಟುಂಬದ ಸಹಕಾರದೊಂದಿಗೆ ಸಂಗೀತ ಕಲಾನಿಧಿ ಟಿ.ಎನ್.ಕೃಷ್ಣನ್ ಸ್ಮಾರಕ ಪ್ರಶಸ್ತಿ ಮತ್ತು ಸಂಗೀತ ಕಲಾನಿಧಿ ಟಿ.ಎನ್.ಕೃಷ್ಣನ್ ಶ್ರೇಷ್ಠ ಪ್ರಶಸ್ತಿಯನ್ನು ಸ್ಥಾಪಿಸಿ ಪ್ರತಿ ವರ್ಷ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತದೆ. ಅವರು ಕರ್ನಾಟಕ ಸಂಗೀತಕ್ಕೆ ಮತ್ತು ಮುಂಬರುವ ಸಂಗೀತಗಾರರಿಗೆ ಉತ್ತಮ ಕೊಡುಗೆ ನೀಡಿದ್ದಾರೆ. ಈ ಕಾರ್ಯಕ್ರಮವನ್ನು ಚೆನ್ನೈನಲ್ಲಿ ಆಯೋಜಿಸಲಾಗಿದೆ.

ಈ ವರ್ಷ, ಕರ್ನಾಟಕದ ಕರ್ನಾಟಿಕ್ ಮತ್ತು ಹಿಂದೂಸ್ತಾನಿ ಸಂಗೀತದ ಪ್ರಮುಖರನ್ನು ಗೌರವಿಸಲು, ಮೈಸೂರು ಆರಂಭದ ಅಸ್ಥಾನ ವಿದ್ವಾಂಸರಾದ ಶ್ರೀ ಮೈಸೂರು ವಾಸುದೇವಾಚಾರ್ ಮತ್ತು ಹಿಂದೂಸ್ತಾನಿ ಸಂಗೀತದ (ಖಯಾಲ್ ಶೈಲಿಯ) ಪ್ರಖ್ಯಾತ ಸಂಗೀತಗಾರ್ತಿ, ಶ್ರೀಮತಿ ಗಂಗೂಬಾಯಿ ಹನಗಲ್ ಹೆಸರಿನ ಎರಡು ಪ್ರಶಸ್ತಿಗಳನ್ನು ಸ್ಥಾಪಿಸಿದ್ದೇವೆ. ಮೈಸೂರು ವಾಸುದೇವಾಚಾರ್ ಉತ್ಕೃಷ್ಟತಾ ಪ್ರಶಸ್ತಿ ಮತ್ತು ಶ್ರೀಮತಿ ಗಂಗೂಬಾಯಿ ಹನಗಲ್ ಪ್ರಶಸ್ತಿ ಕರ್ನಾಟಕದ ಸಂಗೀತಗಾರರಿಗೆ ಅವರ ಮೂಲಕ ಕರ್ನಾಟಿಕ್ ಮತ್ತು ಹಿಂದೂಸ್ತಾನಿ ಸಂಗೀತದಲ್ಲಿ ಮಾಡಿದ ಅಸಾಧಾರಣ ಕಾರ್ಯಗಳಿಗಾಗಿ ಪ್ರಶಸ್ತಿಗಳನ್ನು ನೀಡಲಾಗುವುದು. ರಾಜಮೋಹನ್ ಕೃಷ್ಣನ್ ಸ್ಥಾಪಿಸಿದ ಏಕತ್ವಂ ಹೋಳಿ ಸಂಗೀತೋತ್ಸವದ 4 ನೇ ಆವೃತ್ತಿಯನ್ನು ಅನಾವರಣಗೊಳಿಸುತ್ತದೆ. ಹಿಂದಿನ ಆವೃತ್ತಿಗಳಲ್ಲಿ, ಏಕತ್ವಂ ಉದಯೋನ್ಮುಖ ಕಲಾವಿದರಾದ ಸಿದ್ಧಾರ್ಥ್ ಬೆಳ್ಮಣ್ಣು, ಕಲ್ಯಾಣಪುರಂ ಎಸ್. ಅರವಿಂದ್, ಎಚ್. ಎಂ.ಸ್ಮಿತಾ, ಅಕ್ಷಯ್ ಆನಂದ್ ಮತ್ತು ಹೆಸರಾಂತ ಸೂಫಿ ಕಲಾವಿದ ಮುಕ್ತಿಯಾರ್ ಅಲಿಯನ್ನು ಪ್ರದರ್ಶಿಸಿತು. ಈ ವರ್ಷದ ಉತ್ಸವವು ಈ ಪರಂಪರೆಯನ್ನು ಮುಂದುವರಿಸುತ್ತಾ, ಹಿಂದೂಸ್ತಾನಿ ಸಂಗೀತಗಾರರಾದ ಪಂಡಿತ್ ವೆಂಕಟೇಶ್ ಕುಮಾರ್, ಪಿಟೀಲು ವಿದ್ವಾನ್ ಮೈಸೂರು ಮಂಜುನಾಥ್ ಮತ್ತು ವಿದ್ವಾನ್ ಮೈಸೂರು ನಾಗರಾಜ್, ವಿದ್ವಾನ್ ಸಂದೀಪ್ ನಾರಾಯಣ್ ಇವರ ಕಾರ್ನಾಟಿಕ್ ಗಾಯನವನ್ನು ಪ್ರಮುಖವಾಗಿ ಹೊಂದಿರುತ್ತದೆ. ಮೊದಲಬಾರಿಗೆ ಅತ್ಯಂತ ಪ್ರತಿಭಾವಂತ ಕಾರ್ನಾಟಿಕ್ ಫ್ಯುಶನ್ ಬ್ಯಾಂಡ್ ಶ್ಯಾಡ್ಜಾಮ್ ಇವರ ಸಮ್ಮಿಳನವನ್ನು ಪ್ರದರ್ಶಿಸುವುದು. ಸುಪರ್ಟ್ಯಾಲೆಂಟ್ ಸ್ವರ್ತ್ರಿಕಾ ಶ್ರೀಕಾಂತ್, 2022ರಲ್ಲಿ ಗೌರವಾರ್ಧಿಕ ಟೈಮ್ಸ್ ತ್ಯಾಗರಾಜ ಪುರಸ್ಕಾರ ಗೆದ್ದವರು, ಈ ವರ್ಷದ ಹೋಳಿ ಸಂಗೀತ ಉತ್ಸವದಲ್ಲಿ ಪ್ರದರ್ಶನ ನೀಡುವರು.

ಸಮುದಾಯದ ಕಲ್ಯಾಣಕ್ಕೆ ಅದರ ಬದ್ಧತೆಗೆ ನಿಜವಾಗಿ, ಏಕತ್ವಮ್ ವಯಸ್ಸಾದ ಜನಸಂಖ್ಯೆಯ ತ್ವರಿತ ಬೆಳವಣಿಗೆಗೆಪ್ರತಿಕ್ರಿಯೆಯಾಗಿ ಕೇರಳದಲ್ಲಿ ಹಿರಿಯ ಆರೈಕೆ ಸೌಲಭ್ಯವನ್ನು ಸ್ಥಾಪಿಸಲು ತನ್ನ ಆರಂಭಿಕ ಪ್ರಯತ್ನಗಳನ್ನು ಪ್ರಾರಂಭಿಸಿದೆ. ಸೌಲಭ್ಯವು ನಿವಾಸಿಗಳಿಗೆ ಒಡನಾಟ, ಗೌಪ್ಯತೆ ಮತ್ತು ಸೌಕರ್ಯವನ್ನು ನೀಡುತ್ತದೆ ಮತ್ತು ಅವರಿಗೆ ಅಗತ್ಯವಿರುವಮೇಲ್ವಿಚಾರಣೆಯನ್ನು ನೀಡುತ್ತದೆ.

# ಸನ್ ಟ್ಯಾನ್ ಸಮಸ್ಯೆಯೇ

## ಬ್ಯೂಟಿ ಟಿಪ್ಸ್



ಬೇಸಿಗೆಯಲ್ಲಿ ಸೂರ್ಯನ ಬಿಸಿಲಿಗೆ ಹೊರಹೋದಾಕ್ಷಣ ಸನ್ ಟ್ಯಾನ್ ಆಗುವುದುಂಟು. ಹಾಗೆಂದು ಹಗಲಿಡೀ ಮನೆಯೊಳಗೆ ಕುಳಿತುಕೊಳ್ಳಲು ಸಾಧ್ಯವೇ? ಟ್ಯಾನಿಂಗ್ ಸಮಸ್ಯೆಗೆ ಮನೆಯಲ್ಲೇ ಇರುವ ವಸ್ತುಗಳಿಂದ ಪರಿಹಾರ ಕಂಡುಕೊಳ್ಳಬಹುದು.

ಟೊಮೆಟೊ ಕತ್ತರಿಸಿ ಒಂದು ಚಮಚದಷ್ಟು ರಸ ತೆಗೆದು ಅದಕ್ಕೆ ನಾಲ್ಕು ಹನಿ ನಿಂಬೆರಸ ಸೇರಿಸಿ ಫೇಸ್ ಮಾಸ್ಕ್ ತಯಾರಿಸಿ.

ಮುಖವನ್ನು ಸ್ವಚ್ಛವಾಗಿ ತೊಳೆದು ಇದನ್ನು ಹಚ್ಚಿ ಅರ್ಧ ಗಂಟೆ ಬಳಿಕ ಮುಖ ತೊಳೆದರೆ ಮುಖ ಸ್ವಚ್ಛವಾಗುತ್ತದೆ.

ಸೂಕ್ಷ್ಮ ತ್ವಚೆ ನಿಮ್ಮದಾಗಿದ್ದರೆ ಇದರ ಬದಲು ಗೋಧಿ ಹಿಟ್ಟು ಹಾಗೂ ರೋಸ್ ವಾಟರ್ ಬೆರೆಸಿ ಪೇಸ್ಟ್ ತಯಾರಿಸಿ. ಇದಕ್ಕೆ ಅರಶಿನ ಪುಡಿ ಚಿಮುಕಿಸಿ. ಮುಖದ ಮೇಲೆ ಹಚ್ಚಿ ಒಣಗಲು ಬಿಡಿ. 20 ನಿಮಿಷದ ಬಳಿಕ ಮುಖ ತೊಳೆದರೆ ಕಲೆ ಮಾಯವಾಗುತ್ತದೆ.

ಇನ್ನು ಸನ್ ಟ್ಯಾನ್ ಸಮಸ್ಯೆಗೆ ಎಳನೀರಿನ ಒಳಭಾಗವನ್ನೂ ಬಳಸುತ್ತಾರೆ. ಎಳೆಯದಾಗಿರುವ ಒಳಭಾಗಕ್ಕೆ ಅರಿಶಿನ ಪುಡಿ ಹಾಗೂ ಲಿಂಬೆರಸ ಸೇರಿಸಿ ಪೇಸ್ಟ್ ಮಾಡಿ ಮುಖಕ್ಕೆ ಹಚ್ಚಿ. ಅರ್ಧ ಗಂಟೆ ಬಳಿಕ ಮುಖ ತೊಳೆದರೆ ಕಲೆ ದೂರವಾಗಿ ಮುಖ ಹೊಳಪು ಪಡೆದುಕೊಳ್ಳುತ್ತದೆ.



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ-9964739507
www.jyotishyavaastu.com

## ರಾಶಿ ಭವಿಷ್ಯ

**ಮೇಷ:** ಪ್ರಯಾಣ, ತಾಯಿಯಿಂದ ಧನಾಗಮನ, ದಾನ ಧರ್ಮದ ಫಲ ಪಡೆಯುವಿರಿ

**ವೃಷಭ:** ಆಧ್ಯಾತ್ಮಿಕ ಕ್ಷೇತ್ರದವರಿಗೆ ಅನುಕೂಲ, ಮನೆಯ ವಾತಾವರಣದಲ್ಲಿ ಕಿರಿಕಿರಿ, ಮಾನಸಿಕ ನೆಮ್ಮದಿ ಭಂಗ

**ಮಿಥುನ:** ಪಾಲುದಾರಿಕೆಯಲ್ಲಿ ಲಾಭ, ಉದ್ಯೋಗ ಸ್ಥಳದಲ್ಲಿ ಕಿರಿಕಿರಿ ಬಂಧುಮಿತ್ರರ ಆಗಮನ, ಕುಟುಂಬದಲ್ಲಿ ಆತಂಕ

**ಕಟಕ:** ಕೆಲಸ ಕಾರ್ಯಗಳಲ್ಲಿ ಜಯ, ಮಕ್ಕಳಿಂದ ಕುಟುಂಬದಲ್ಲಿ ಕಿರಿ ಕಿರಿ, ಆರ್ಥಿಕ ನೆರವು ಸಿಗುವುದು, ಪರಿಹಾರ ಅಕ್ಕಿಯನ್ನು ದಾನ ಮಾಡಿ

**ಸಿಂಹ:** ಒಳ್ಳೆತನದಿಂದ ಸಂಕಷ್ಟ, ಮಾನಸಿಕ ಚಿಂತೆ, ಉದ್ಯೋಗ ಕಳೆದುಕೊಳ್ಳುವ ಸಂದರ್ಭ, ಕುಟುಂಬದಲ್ಲಿ ಆತಂಕ

**ಕನ್ಯಾ:** ಮಿತ್ರರಿಂದ ನಷ್ಟ, ಪಾಲುದಾರಿಕೆ ವ್ಯವಹಾರದಲ್ಲಿ ಸಂಕಷ್ಟ, ದಾಂಪತ್ಯ ಕಿರಿಕಿರಿ ಮತ್ತು ನಿದ್ರಾಭಂಗ

**ತುಲಾ:** ಉದ್ಯೋಗ ಲಾಭ, ಆರ್ಥಿಕ ಸಮಸ್ಯೆಯಿಂದ ಮುಕ್ತಿ, ಆರೋಗ್ಯದಲ್ಲಿ ವ್ಯತ್ಯಾಸ

**ವೃಶ್ಚಿಕ:** ಉದ್ಯೋಗನಿಮಿತ್ತ ಪ್ರಯಾಣ, ಗುರು ನಿಂದನೆ ಮತ್ತು ದೈವನಿಂದನೆ, ಅನಾರೋಗ್ಯ ಸಮಸ್ಯೆಗಳಿಂದ ಚಿಂತೆ

**ಧನಸ್ಸು:** ಕುಲದೇವರ ದರ್ಶನ, ತಾಯಿ ಆರೋಗ್ಯದಲ್ಲಿ ವ್ಯತ್ಯಾಸ, ಅಧಿಕ ಖರ್ಚು

**ಮಕರ:** ಬಂಧು ಬಾಂಧವರ ನಡುವೆ ವಿರಸ, ಪಾಲುದಾರಿಕೆ ವ್ಯವಹಾರದಲ್ಲಿ ಅನಾನುಕೂಲ, ಪ್ರಯಾಣದಿಂದ ಸಂಕಷ್ಟ

**ಕುಂಭ:** ಉದ್ಯೋಗ ಸ್ಥಳದಲ್ಲಿ ಶತ್ರು ಕಾಟ, ಶುಭಕಾರ್ಯಗಳಿಗೆ ಕಾಲ ಕೂಡುವುದು, ಆರ್ಥಿಕ ಮತ್ತು ಕೌಟುಂಬಿಕ ದುಸ್ಥಿತಿಗಳು, ಗುರು ನಿಂದನೆ ಮತ್ತು ದೈವನಿಂದನೆ

**ಮೀನ:** ದೈಹಿಕ ಮತ್ತು ಮಾನಸಿಕ ತೊಂದರೆ, ಕೆಲಸ ಕಾರ್ಯಕ್ಕೆ ಅಡೆತಡೆಗಳಿಂದ ಚಿಂತೆ, ಅನಾರೋಗ್ಯ ಸಮಸ್ಯೆಗಳು

# ವಿಶ್ವ ಜಲ ದಿನ




ನೀರಿನ ಮಹತ್ವವನ್ನು ಜಗತ್ತಿಗೆ ತಿಳಿಸಲು ಮತ್ತು ಜಾಗತಿಕ ನೀರಿನ ಬಿಕ್ಕಟ್ಟಿನ ಬಗ್ಗೆ ಜಾಗೃತಿ ಮೂಡಿಸಲು, ಪ್ರತಿ ವರ್ಷ ಮಾರ್ಚ್ 22 ರಂದು ವಿಶ್ವ ಜಲ ದಿನವನ್ನು ಆಚರಿಸಲಾಗುತ್ತದೆ. ವಿಶ್ವಸಂಸ್ಥೆಯ ವೆಬ್ಸೈಟ್ನ ಪ್ರಕಾರ, ಈ ಆಚರಣೆಯ ಹಿಂದಿನ ಕಲ್ಪನೆಯು ಸುಸ್ಥಿರ ಅಭಿವೃದ್ಧಿ ಗುರಿ 2030 ರ ವೇಳೆಗೆ ಎಲ್ಲರಿಗೂ ನೀರು ಮತ್ತು ನೈರ್ಮಲ್ಯದ ಸಾಧನೆಯನ್ನು ಬೆಂಬಲ ನೀಡುವುದಾಗಿದೆ. ಸಿಹಿನೀರಿನ ಸಂಪನ್ಮೂಲಗಳನ್ನು ಸುಸ್ಥಿರವಾಗಿ ನಿರ್ವಹಿಸಲು ಮತ್ತು ನೀರಿನ ಮಾಲಿನ್ಯ, ನೀರಿನ ಕೊರತೆ, ಅಸಮರ್ಪಕ ನೀರು ಮತ್ತು ನೈರ್ಮಲ್ಯದ ಕೊರತೆಯಂತಹ ನೀರಿನ ಸಂಬಂಧಿತ ಸಮಸ್ಯೆಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಮತ್ತು ಬದಲಾವಣೆಯನ್ನು ಮಾಡಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಜನರನ್ನು ಜಾಗೃತಗೊಳಿಸುವುದು ಮತ್ತು ಪ್ರೇರೇಪಿಸುವುದು ಈ ಆಚರಣೆಯ ಮುಖ್ಯ ಉದ್ದೇಶ. ವಿಶ್ವ ಜಲ ದಿನವನ್ನು ಆಚರಿಸುವ ನಿರ್ಣಯವನ್ನು ಮೊದಲು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು 1992ರ ಡಿಸೆಂಬರ್ 22 ರಂದು ಅಂಗೀಕರಿಸಿತು. ನಂತರ ಮಾರ್ಚ್ 22 ಅನ್ನು ವಿಶ್ವ ಜಲ ದಿನವೆಂದು ಘೋಷಿಸಲಾಯಿತು. ಅಂದಿನಿಂದ ಪ್ರಪಂಚದಾದ್ಯಂತ ವಿಶ್ವ ಜಲ ದಿನ ಆಚರಿಸಲಾಗುತ್ತದೆ. ಮೊದಲ ವಿಶ್ವ ಜಲ ದಿನವನ್ನು 1993 ರಲ್ಲಿ ಆಚರಿಸಲಾಯಿತು. 'ನೀರು ಜೀವನದ ಅಮೃತ' ಎಂಬುದು ಎಲ್ಲರಿಗೂ ಗೊತ್ತು. ಕುಡಿಯುವುದರಿಂದ ಹಿಡಿದು ಶುಚಿಗೊಳಿಸುವಿಕೆ ಮತ್ತು ಇತರ ವಿಷಯಗಳವರೆಗೆ, ಅದು ಇಲ್ಲದೆ ಜೀವನವು ಉಳಿಯುವುದಿಲ್ಲ. ಅನೇಕರು 24ಥ7 ಹರಿಯುವ ನೀರನ್ನು ಹೊಂದುವ ಸವಲತ್ತು ಪಡೆದಿದ್ದರೂ, ಪ್ರಪಂಚದಾದ್ಯಂತ ಯಾವುದೇ ಪ್ರಮಾಣದ ನೀರು ಸಿಗದ ದೊಡ್ಡ ಜನಸಂಖ್ಯೆಯಿದೆ. ವಿಶ್ವಸಂಸ್ಥೆಯ ಪ್ರಕಾರ, ಪ್ರಸ್ತುತ, ನಾಲ್ಕು ಜನರಲ್ಲಿ ಒಬ್ಬರು ( ಅಂದರೆ ವಿಶ್ವದಾದ್ಯಂತ ಎರಡು ಶತಕೋಟಿ ಜನರು) - ಸುರಕ್ಷಿತ ಕುಡಿಯುವ ನೀರಿನ ಕೊರತೆ ಎದುರಿಸುತ್ತಿದ್ದಾರೆ. ಪರಿಶುದ್ಧ ಕುಡಿಯುವ ನೀರಿಲ್ಲದ ಕಾರಣ ವಾರ್ಷಿಕವಾಗಿ ಸುಮಾರು 1.4 ಮಿಲಿಯನ್ ಜನರು ಸಾಯುತ್ತಾರೆ. 74 ಮಿಲಿಯನ್ ಜನರು ಕಳಪೆ ನೀರು, ನೈರ್ಮಲ್ಯ ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ಕಾಯಿಲೆಗಳ ಕಾರಣ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಒಇಸಿಡಿಯ ಅಂದಾಜಿನ ಪ್ರಕಾರ, 2050 ರ ವೇಳೆಗೆ ಜಾಗತಿಕ ನೀರಿನ ಬೇಡಿಕೆ (ನೀರಿನ ಹಿಂತೆಗೆದುಕೊಳ್ಳುವಿಕೆಯಲ್ಲಿ) ಶೇಕಡ 55 ಹೆಚ್ಚಾಗುತ್ತದೆ.

# ಸುಪ್ರೀಂಕೋರ್ಟ್ ಮುಂದೆ ಕ್ಷಮೆಯಾಚಿಸಿದ ಪತಂಜಲಿ!




**ನವದೆಹಲಿ:** ದಾರಿ ತಪ್ಪಿಸುವ ಜಾಹೀರಾತುಗಳ ವಿರುದ್ಧ ಸುಪ್ರೀಂಕೋರ್ಟ್ ಛೀಮಾರಿ ಹಾಕಿದ ಬೆನ್ನಲ್ಲೇ ಪತಂಜಲಿ ಆಯುರ್ವೇದ ಕಂಪನಿ ಉನ್ನತ ನ್ಯಾಯಾಲಯದ ಬಳಿ ಕ್ಷಮೆ ಕೋರಿದೆ. ಪತಂಜಲಿ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಆಚಾರ್ಯ ಬಾಲಕೃಷ್ಣ ಅವರು ಇಂದು ಸುಪ್ರೀಂಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದ್ದು, ತಮ್ಮ ತಪ್ಪು ಜಾಹಿರಾತುಗಳ ಬಗ್ಗೆ ಪಶ್ಚಾತ್ತಾಪ ವ್ಯಕ್ತಪಡಿಸಿ, ಕ್ಷಮೆಯಾಚಿಸಿದ್ದಾರೆ. ಆಯುರ್ವೇದದ ಮೂಲಕ ಜೀವನಶೈಲಿಗೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಒದಗಿಸುವ ಮೂಲಕ ದೇಶದ ಆರೋಗ್ಯ ಮೂಲಸೌಕರ್ಯದ ಮೇಲಿನ ಹೊರೆಯನ್ನು ಕಡಿಮೆ ಮಾಡುವುದು ನಮ್ಮ ಪತಂಜಲಿ ಕಂಪನಿಯ ಅನ್ವೇಷಣೆಯಾಗಿದೆ ಎಂದು ಸ್ಪಷ್ಟಪಡಿಸಿರುವ ಬಾಲಕೃಷ್ಣ, ಭವಿಷ್ಯದಲ್ಲಿ ಇಂತಹ ತಪ್ಪು ಜಾಹೀರಾತುಗಳನ್ನು ಪ್ರಕಟಿಸುವುದಿಲ್ಲ ಎಂದು ನ್ಯಾಯಾಲಯಕ್ಕೆ ತಿಳಿಸಿದರು.

# ಅಯೋಧ್ಯೆ ಶ್ರೀರಾಮನ ದರ್ಶನ ಪಡೆದ ಸೌತ್ ಆಫ್ರಿಕಾ ಕ್ರಿಕೇಟಿಗ ಕೇಶವ್

ಸೌತ್ ಆಫ್ರಿಕಾ ಕ್ರಿಕೇಟಿಗ ಕೇಶವ್ ಮಹಾರಾಜ್ ಕೊನೆಗೂ ಭಾರತಕ್ಕೆ ಬಂದು, ಅಯೋಧ್ಯೆಗೆ ಭೇಟಿ ನೀಡಿ, ರಾಮಲಲ್ಲಾನ ದರ್ಶನ ಮಾಡಿದ್ದಾರೆ.

ಜನವರಿ 22ರಂದು ಭಾರತದ ಅಯೋಧ್ಯೆಯಲ್ಲಿ ರಾಮಲಲ್ಲಾನನ್ನು ಪ್ರಾಣ ಪ್ರತಿಷ್ಠೆ ಮಾಡುತ್ತಾರೆಂಬ ವಿಷಯ ಕೇಳಿ ಬರೀ ಭಾರತದಲ್ಲಿರುವ ಹಿಂದೂಗಳಷ್ಟೇ ಅಲ್ಲದೇ, ಬೇರೆ ಬೇರೆ ದೇಶದ ಪ್ರಜೆಗಳಲ್ಲಿ ಕೆಲವರು ಸಂತಸ ವ್ಯಕ್ತಪಡಿಸಿದ್ದರು.

ಅಂಥವರಲ್ಲಿ ಸೌತ್ ಆಫ್ರಿಕಾ ಕ್ರಿಕೇಟಿಗ ಕೇಶವ್ ಮಹಾರಾಜ್ ಕೂಡ ಒಬ್ಬರು. ಅಯೋಧ್ಯೆ ರಾಮಮಂದಿರ ಉದ್ಘಾಟನೆಯಾದಾಗ, ನನಗೂ ಕೂಡ ರಾಮಲಲ್ಲಾನನ್ನು ನೋಡುವ ಆಸೆಯಾಗಿದೆ. ಸದ್ಯದಲ್ಲೇ ಭಾರತಕ್ಕೆ ಬಂದು, ಅಯೋಧ್ಯೆ ರಾಮನ ದರ್ಶನ ಮಾಡುತ್ತೇನೆ. ಅಭಿನಂದನೆಗಳು ಎಂದು ಸೋಶಿಯಲ್ ಮೀಡಿಯಾ ಖಾತೆಯಲ್ಲಿ ವಿಶ್ ಮಾಡಿದ್ದರು.

ಇದೀ ಹೇಳಿದಂತೆ ಭಾರತಕ್ಕೆ ಬಂದಾಗ, ಕೇಶವ್ ಮಹಾರಾಜ್ ರಾಮನ ದರ್ಶನ ಮಾಡಿದ್ದಾರೆ. ಕೇಶವ್



ಭಾರತಕ್ಕೆ ಬಂದಾಗಲೆಲ್ಲ ಪ್ರಸಿದ್ಧ ದೇವಸ್ಥಾನಕ್ಕೆ ಭೇಟಿ ನೀಡಿ, ದೇವರ ದರ್ಶನ ಮಾಡಿಕೊಂಡು ಹೋಗುತ್ತಾರೆ. ಕೇಶವ್ ಐಪಿಎಲ್ ಪಂದ್ಯದಲ್ಲಿ ಭಾಗವಹಿಸುತ್ತಿದ್ದು, ಲಕ್ನೋ ಸೂಪರ್ ಜಾಯಿಂಟ್ಸ್ ತಂಡದಲ್ಲಿ ಆಡಲಿದ್ದಾರೆ.

# ಜಪಾನ್‌ನಲ್ಲಿ ಪ್ರಬಲ ಭೂಕಂಪ




**ಟೋಕಿಯೊ:** ಪೂರ್ವ ಜಪಾನ್ ನಲ್ಲಿ 5.3 ತೀವ್ರತೆಯ ಭೂಕಂಪನ ಸಂಭವಿಸಿದೆ ಎಂದು ವರದಿಗಳು ತಿಳಿಸಿದ್ದು, ಮತ್ತೆ ಸಂಭವಿಸಿದ ಭೂಕಂಪಕ್ಕೆ ಜನರು ಬೆಚ್ಚಿ ಬಿದ್ದಿದ್ದಾರೆ. ಬೆಳಿಗ್ಗೆ 9:08 ರ ಸುಮಾರಿಗೆ ಭೂಕಂಪ ಸಂಭವಿಸಿದ್ದು, ದಕ್ಷಿಣ ಇಬಾರಾಕಿ ಪ್ರಿಫೆಕ್ಚರ್ನಲ್ಲಿ ಸುಮಾರು 50 ಕಿಲೋಮೀಟರ್ ಆಳದಲ್ಲಿ ಕೇಂದ್ರೀಕೃತವಾಗಿದೆ ಎಂದು ಜಪಾನ್ ಹವಾಮಾನ ಸಂಸ್ಥೆ ತಿಳಿಸಿದೆ. ಟೋಕಿಯೊ ಮತ್ತು ನೆರೆಯ ಪ್ರದೇಶಗಳಲ್ಲಿ ಭೂಕಂಪದ ಎಚ್ಚರಿಕೆಯನ್ನು ಪ್ರಚೋದಿಸಿದ ಭೂಕಂಪವು ಜಪಾನಿನ ಶಿಂಡೋ ಮಾಪಕದಲ್ಲಿ 5 ರಷ್ಟು ತೀವ್ರತೆಯನ್ನು ಹೊಂದಿತ್ತು. ಕಾಂಟೋ ಪ್ರದೇಶದಾದ್ಯಂತ ಭೂಕಂಪನದ ಅನುಭವವಾಗಿದ್ದು, ಇಬಾರಾಕಿ ಪ್ರಿಫೆಕ್ಚರ್ ಶಿಂಡೋ 4, ಗುನ್ಮಾ ಪ್ರಿಫೆಕ್ಚರ್ ಕೆಲವು ಪ್ರದೇಶಗಳು ಮತ್ತು ಸೈತಾಮಾ ಪ್ರಿಫೆಕ್ಚರ್ ಹೆಚ್ಚಿನ ಪ್ರದೇಶಗಳು ಮತ್ತು ಟೋಕಿಯೊದಾದ್ಯಂತ ಶಿಂಡೋ 3 ಮತ್ತು ಚಿಬಾ ಮತ್ತು ಕನಗವಾ ಪ್ರಾಂತ್ಯಗಳ ಕೆಲವು ಭಾಗಗಳಲ್ಲಿ ಭೂಕಂಪನದ ಅನುಭವವಾಗಿದೆ.

# ಹೊಸ ದಾಖಲೆ ಬರೆದ ಜಿಯೋಸಿನಿಮಾ



**ಮುಂಬೈ:** ಈ ಬಾರಿಯ ಟಾಟಾ ಐಪಿಎಲ್ ಋತುವಿನ ಅಧಿಕೃತ ಡಿಜಿಟಲ್ ಪ್ರಸಾರ ಸಹಭಾಗಿತ್ವವನ್ನು ವಹಿಸಿರುವುದು ಜಿಯೋಸಿನಿಮಾ. ಅಂದ ಹಾಗೆ ಈ ಸಲ 18 ಪ್ರಾಯೋಜಕರು ಮತ್ತು 250 ಜಾಹೀರಾತುದಾರರು ದೊರೆತಿದ್ದಾರೆ. ಈ ಬಾರಿಯ ಐಪಿಎಲ್ ಗೆ ಸಾಂಪ್ರದಾಯಿಕ ಜಾಹೀರಾತುದಾರರು ಮಾತ್ರವಲ್ಲ, ಈ ಹಿಂದೆ ಸಾಂಪ್ರದಾಯಿಕ ಮಾಧ್ಯಮಗಳಿಗೆ ಮಾತ್ರ ಜಾಹೀರಾತು ನೀಡುತ್ತಿದ್ದ ಆಟೋಮೊಬೈಲ್, ಬ್ಯಾಂಕಿಂಗ್, ಮೊಬೈಲ್ ಹ್ಯಾಂಡ್ ಸೆಟ್ ಗಳು ಮೊದಲಾದ ಕ್ಷೇತ್ರಗಳಿಂದ ಡಿಜಿಟಲ್ ಮಾಧ್ಯಮಕ್ಕೆ ಜಾಹೀರಾತುಗಳು ಬಂದಿವೆ. 2024ರ ಟಾಟಾ ಐಪಿಎಲ್ ಗೆ ಜಿಯೋಸಿನಿಮಾ ಡಿಜಿಟಲ್ ಪ್ರಸಾರ ಪ್ರಾಯೋಜಕರು. ಡ್ರೀಮ್11 ಸಹ ಪ್ರಸ್ತುತಿ ಪ್ರಾಯೋಜಕರಾಗಿದ್ದು, ಎಚ್ ಡಿಎಫ್ ಸಿಯ ಪೇಝ್ಯಾಪ್, ಟಾಟಾ ಮೋಟಾರ್ಸ್, ಎಸ್ ಬಿಐ, ಕ್ರೆಡ್, ಬ್ರಿಟಾನಿಯಾ, ಪೆಪ್ಸಿ ಸೇರಿದಂತೆ ಹಲವು ಬ್ರ್ಯಾಂಡ್ ಗಳು ಸಹ ಪ್ರಾಯೋಜಕ ಆಗಿವೆ. ಇದೇ ಮಾರ್ಚ್ 22ನೇ ತಾರೀಕಿನಿಂದ ಐಪಿಎಲ್ ಪಂದ್ಯಾವಳಿಗಳು ಆರಂಭವಾಗಲಿದ್ದು, ಅದಕ್ಕೂ ಮುಂಚೆ ಇನ್ನಷ್ಟು ಬ್ರ್ಯಾಂಡ್ ಗಳು ಜಿಯೋಸಿನಿಮಾದ ಜತೆಗೆ ಕೈ ಜೋಡಿಸಲಿವೆ. ಈಗಾಗಲೇ ಈ ಬಗ್ಗೆ ಮಾತುಕತೆ ಸಹ ಪ್ರಗತಿಯಲ್ಲಿದೆ. ಗೂಗಲ್ ಪಿಕ್ಸೆಲ್, ಆಪಲ್, ಮೊಟೊರೊಲಾ ಹಾಗೂ ವಿವೋದಂಥ ಮೊಬೈಲ್ ಹ್ಯಾಂಡ್ ಸೆಟ್ ಗಳು ಪ್ರೀಮಿಯಂ ಬ್ರ್ಯಾಂಡ್ ಗಳು ಮತ್ತೊಂದು ಎತ್ತರಕ್ಕೆ ತಮ್ಮ ಉತ್ಪನ್ನಗಳನ್ನು ಒಯ್ಯುವುದಕ್ಕಾಗಿ ಜಾಹೀರಾತುಗಳನ್ನು ನೀಡುತ್ತಿವೆ. ಜಿಯೋಸಿನಿಮಾದಲ್ಲಿ ಹನ್ನೆರಡು ಭಾಷೆಗಳಲ್ಲಿ ಪಂದ್ಯಾವಳಿಗಳು ಪ್ರಸಾರ ಆಗುತ್ತಿವೆ. ಅಷ್ಟೂ ಭಾಷೆಯ ಜಾಹೀರಾತು ಕಾಣಿಸಿಕೊಳ್ಳುವ ಜತೆಗೆ ಈ ಬಾರಿ ಹರಿಯಾಣ್ವಿ ಸಹ ಸೇರ್ಪಡೆ ಆಗಿದೆ. ''ಎಲ್ಲ ಬ್ರ್ಯಾಂಡ್ ಗಳ ಪ್ರಾಥಮಿಕ ಆಯ್ಕೆ ಡಿಜಿಟಲ್ ಮಾಧ್ಯಮವೇ ಆಗಿದೆ ಎಂಬುದು ಈ ಋತುವಿನಿಂದ ಗೊತ್ತಾಗುತ್ತಿದೆ,'' ಎಂದು ವಯಾಕಾಮ್18 ವಕ್ತಾರರು ಹೇಳಿದ್ದಾರೆ. ಪಾರ್ಲೆ ಪ್ರಾಡಕ್ಟ್ಸ್ ಉಪಾಧ್ಯಕ್ಷರಾದ ಮಯಾಂಕ್ ಶಾ ಮಾತನಾಡಿ, ಭಾರತದಲ್ಲಿ ನಮ್ಮಂಥ ಉತ್ಪನ್ನಗಳ ಬಗ್ಗೆ ಜಾಗೃತಿ ಮೂಡಿಸಲು ಜಿಯೋಸಿನಿಮಾಗಿಂತ ಅತ್ಯುತ್ತಮ ಅವಕಾಶ ಇನ್ನೊಂದಿಲ್ಲ ಎಂದು ಹೇಳಿದ್ದಾರೆ.

# ವಿಕಸಿತ್ ಭಾರತ್ ಪ್ರಚಾರಕ್ಕೆ ಬ್ರೇಕ್ ಹಾಕಿದ ಚುನಾವಣಾ ಆಯೋಗ



**ನವದೆಹಲಿ:** ಕೇಂದ್ರ ಸರ್ಕಾರದ 'ವಿಕಸಿತ್ ಭಾರತ್' ಪ್ರಚಾರಕ್ಕೆ ಜನರ ಮೊಬೈಲ್ಗೆ ಬರುತ್ತಿರುವ ವಾಟ್ಸ್ಆಯಪ್ ಸಂದೇಶವನ್ನು ತಕ್ಷಣ ನಿಲ್ಲುವಂತೆ ಕೇಂದ್ರ ಚುನಾವಣಾ ಆಯೋಗ ಸೂಚನೆ ನೀಡಿದೆ.

'ವಿಕಸಿತ್ ಭಾರತ್ ಸಂಪರ್ಕ್' ಅಭಿಯಾನದ ಅಡಿಯಲ್ಲಿ ಕೇಂದ್ರ ಸರ್ಕಾರದ ಸಾಧನೆಗಳ ಬಗ್ಗೆ ಜನರಿಗೆ ತಿಳಿಸುವ ಪ್ರಯತ್ನ ನಡೆದಿದೆ. ಅಧಿಕೃತ ವಾಟ್ಸ್ಆಯಪ್ ಖಾತೆ ಮೂಲಕ ಕಳೆದ 10 ವರ್ಷಗಳಲ್ಲಿ ದೇಶದ 80 ಕೋಟಿಗೂ ಅಧಿಕ ನಾಗರಿಕರು ವಿವಿಧ ಯೋಜನೆಗಳ ನೇರ ಲಾಭ ಪಡೆದಿದ್ದಾರೆ. ಭಾರತ ಸರ್ಕಾರ ಭವಿಷ್ಯದಲ್ಲಿ ದೇಶದ ನಾಗರಿಕರನ್ನು ಭೇಟಿಯಾಗೋದನ್ನು ಮುಂದುವರಿಸುತ್ತದೆ. ಅಭಿವೃದ್ಧಿ ಹೊಂದಿದ ಭಾರತ ಆಗಲು, ನಿಮ್ಮ ಸಲಹೆ ಸೂಚನೆಗಳು ನಮಗೆ ಮುಖ್ಯ. ಹೀಗಾಗಿ ನಿಮ್ಮ ಅಭಿಪ್ರಾಯವನ್ನು ಪಡೆಯುತ್ತಿದ್ದೇವೆ ಎಂದು ಅಭಿಪ್ರಾಯವನ್ನು ಕೇಳಲಾಗುತ್ತಿತ್ತು. ಕೇಂದ್ರ ಚುನಾವಣಾ ಆಯೋಗವು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ ನಿರ್ದೇಶನ ನೀಡಿದೆ. ನೀತಿ ಸಂಹಿತೆ ಜಾರಿಯಾದ ನಂತರವೂ ವಿಕಸಿತ ಭಾರತಕ್ಕೆ ಸಂಬಂಧಿಸಿದ ಸಂದೇಶಗಳನ್ನು ಜನರು ಸ್ವೀಕರಿಸುತ್ತಿದ್ದರೆ, ಅವುಗಳನ್ನು ತಕ್ಷಣವೇ ನಿಲ್ಲಿಸಬೇಕು. ಈ ಬಗ್ಗೆ ಕೈಗೊಂಡ ಕ್ರಮಗಳ ಬಗ್ಗೆ ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಿ ಎಂದು ತಿಳಿಸಿದೆ.

# ನ್ಯೂಜಿಲೆಂಡ್‌ನಲ್ಲಿ ಮತ್ತೆ ಆರ್ಥಿಕ ಹಿಂಜರಿತೆ



**ವೆಲ್ಲಿಂಗ್ಟನ್:** ನ್ಯೂಜಿಲೆಂಡ್ ಕಳೆದ 18 ತಿಂಗಳಲ್ಲಿ ಎರಡನೇ ಬಾರಿ ಆರ್ಥಿಕ ಹಿಂಜರಿತ ಅನುಭವಿಸುತ್ತಿದೆ. ಪ್ರಸಕ್ತ ವಿತ್ತೀಯ ವರ್ಷದ 3ನೇ ತ್ರೈಮಾಸಿಕ ವರದಿ ಪ್ರಕಾರ ಆ ದೇಶದ ಅರ್ಥ ವ್ಯವಸ್ಥೆ ಶೇ.0.1 ಕುಸಿದಿದೆ. ತಲಾವಾರು ಲೆಕ್ಕದಲ್ಲಿ ಅರ್ಥ ವ್ಯವಸ್ಥೆ ಶೇ.0.7ರಷ್ಟು ತಗ್ಗಿದೆ. ಸೆಪ್ಟೆಂಬರ್ನಲ್ಲಿ ಆರ್ಥಿಕತೆಯು ಶೇ.0.3ರಷ್ಟು ಕುಸಿದಿತ್ತು. ಸತತ 4 ತ್ರೈಮಾಸಿಕಗಳಲ್ಲಿ ದೇಶದ ಜಿಡಿಪಿಯು ಶೇ.0.6ರಷ್ಟು ಮಾತ್ರ ಬೆಳವಣಿಗೆ ಕಂಡಿದೆ. ಈ ಮೂಲಕ ಕಳೆದ 18 ತಿಂಗಳಲ್ಲಿ ನ್ಯೂಜಿಲೆಂಡ್ ಎರಡನೇ ಬಾರಿ ಆರ್ಥಿಕ ಹಿಂಜರಿತ ಎದುರಿಸುತ್ತಿದೆ.

# 87 ದೇಶಗಳಿಗೆ ಯುಎಇ ವೀಸಾ ವಿನಾಯತಿ : ಭಾರತಕ್ಕಿಲ್ಲ ಸ್ಥಾನ

**ಯುಎಇ:** ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ತನ್ನ ವೀಸಾ ವಿನಾಯಿತಿ ನೀತಿಯನ್ನು ನವೀಕರಿಸಿದೆ. ಹೊಸದಾಗಿ 87 ದೇಶಗಳ ಪ್ರಜೆಗಳಿಗೆ ಪೂರ್ವ ಪ್ರವೇಶ ವೀಸಾ ಅಗತ್ಯವಿಲ್ಲದೇ ದೇಶಕ್ಕೆ ಪ್ರವೇಶ ಪಡೆಯಲು ಅವಕಾಶ ನೀಡುತ್ತಿದೆ.

2022 ರಲ್ಲಿ, ಯುಎಇ ಸುಮಾರು 73 ದೇಶಗಳಿಗೆ ವೀಸಾ-ಆನ್-ಆಗಮನವನ್ನು ಅನುಮತಿಸಿತು.

ಈಗ 87 ದೇಶಗಳಿಗೆ ಈ ಸೇವೆಯನ್ನು ವಿಸ್ತರಿಸಿದೆ. ಇದರ ಉದ್ದೇಶ ಪ್ರವಾಸಿಗರ ಸಂಖ್ಯೆ ಹೆಚ್ಚಿಸುವುದಾಗಿದೆ. ಆದರೆ, ಈ ದೇಶಗಳ ಪಟ್ಟಿಯಲ್ಲಿ ಭಾರತ ಇಲ್ಲ ಎಂದು ಗಲ್ಫ್ ನ್ಯೂಸ್ ವರದಿ ಮಾಡಿದೆ.

ವೀಸಾ-ಆನ್-ಆಗಮನ ಸೌಲಭ್ಯ ಪಡೆದ ದೇಶಗಳ ಪಟ್ಟಿ ಇಲ್ಲಿವೆ : ಅಲ್ಬೇನಿಯಾ, ಅಂಡೋರಾ, ಅರ್ಜೆಂಟೀನಾ, ಆಸ್ಟ್ರಿಯಾ, ಆಸ್ಟ್ರೇಲಿಯಾ, ಅಜೆರ್ಬೈಜಾನ್, ಬಹ್ರೇನ್, ಬಾರ್ಬಡೋಸ್, ಬ್ರೆಜಿಲ್, ಬೆಲಾರಸ್, ಬೆಲ್ಜಿಯಂ,



ಬ್ರೂನಿ, ಬಲ್ಗೇರಿಯಾ, ಕೆನಡಾ, ಚಿಲಿ, ಚೀನಾ, ಕೊಲಂಬಿಯಾ, ಕೋಸ್ಟಾ ರಿಕಾ , ಕ್ರೊಯೇಷಿಯಾ, ಸೈಪ್ರಸ್, ಜೆಕ್ ರಿಪಬ್ಲಿಕ್, ಡೆನ್ಮಾರ್ಕ್, ಎಲ್ ಸಾಲ್ವಡಾರ್, ಎಸ್ಟೋನಿಯಾ, ಫಿನ್ಲ್ಯಾಂಡ್, ಫ್ರಾನ್ಸ್, ಜಾರ್ಜಿಯಾ, ಜರ್ಮನಿ, ಹೊಂಡುರಾಸ್, ಹಂಗೇರಿ, ಹಾಂಗ್ ಕಾಂಗ್ (ಚೀನಾದ ವಿಶೇಷ ಆಡಳಿತ ಪ್ರದೇಶ), ಐಸ್ಲ್ಯಾಂಡ್, ಇಸ್ರೇಲ್, ಇಟಲಿ, ಜಪಾನ್, ಕಝಾಕಿಸ್ತಾನ್, ಕುವೈತ್ , ಲಾಟ್ವಿಯಾ, ಲಿಚ್ಟೆನ್ಸ್ಟೈನ್, ಲಿಥುವೇನಿಯಾ, ಲಕ್ಸೆಂಬರ್ಗ್, ಮಲೇಷ್ಯಾ, ಮಾಲ್ಡೀವ್ಸ್, ಮಾಲ್ಟಾ, ಮಾರಿಷಸ್, ಮೆಕ್ಸಿಕೋ, ಮೊನಾಕೊ, ಮಾಂಟೆನೆಗ್ರೊ, ನೌರು, ನ್ಯೂಜಿಲ್ಯಾಂಡ್, ನಾರ್ವೆ, ಓಮನ್, ಪರಾಗ್ವೆ, ಪೆರು, ಪೋಲೆಂಡ್, ಪೋರ್ಚುಗಲ್, ಕತಾರ್, ರಿಪಬ್ಲಿಕ್ ಆಫ್ ಐರ್ಲೆಂಡ್, ರೊಮೇನಿಯಾ, ರಷ್ಯಾ ಸೇಂಟ್ ವಿನ್ಸೆಂಟ್ ಮತ್ತು ಗ್ರೆನಡೈನ್ಸ್, ಸ್ಯಾನ್ ಮರಿನೋ, ಸೌದಿ ಅರೇಬಿಯಾ, ಸೀಶೆಲ್ಸ್, ಸೆರ್ಬಿಯಾ, ಸಿಂಗಾಪುರ್, ಸ್ಲೋವಾಕಿಯಾ, ಸ್ಲೋವೇನಿಯಾ, ಸೊಲೊಮನ್ ದ್ವೀಪಗಳು, ದಕ್ಷಿಣ ಕೊರಿಯಾ, ಸ್ಪೇನ್, ಸ್ವೀಡನ್, ಸ್ವಿಟ್ಜರ್ಲೆಂಡ್, ಬಹಾಮಾಸ್, ನೆದರ್ಲ್ಯಾಂಡ್ಸ್, ಯುಕೆ, ಯುಎಸ್, ಉಕ್ರೇನ್, ಉರುಗ್ವೆ, ವ್ಯಾಟಿಕನ್ ಹೆಲೆನಿಕ್, ಬೋಸ್ನಿಯಾ ಮತ್ತು ಹರ್ಜೆಗೋವಿನಾ, ಅರ್ಮೇನಿಯಾ, ಫಿಜಿ, ಕೊಸೊವೊ.

# ರೋಹಿಂಗ್ಯಾ ನಿರಾಶ್ರಿತರಿದ ದೋಣಿ ಮುಳುಗಡೆ: 12 ಸಾವು

**ಜಕಾರ್ತಾ:** ಮ್ಯಾನ್ಮಾರ್‌ನಿಂದ ಇಂಡೋ ನೇಷ್ಯಾಕ್ಕೆ ತೆರಳುತ್ತಿದ್ದ 12 ಮಂದಿ ರೋಹಿಂಗ್ಯಾ ಮುಸಲ್ಮಾನ ನಿರಾಶ್ರಿತರು ದಡ ಸೇರುವ ಮುನ್ನವೇ ವಿಪತ್ತಿಗೆ ಸಿಲುಕಿದ್ದು, ಅವರಿದ್ದ ದೋಣಿ ಇಂಡೋನೇಷ್ಯಾದ ಉತ್ತರ ಕರಾವಳಿಯಲ್ಲಿ ಮುಳು ಗಡೆಯಾಗಿದೆ. ಆಚೆಬರತ್ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ದೋಣಿ ಮುಳುಗಡೆಯಾಗಿದ್ದು, ತತ್ಕ್ಷಣವೇ ಸ್ಥಳೀಯ ಮೀನುಗಾರರು ದೋಣಿಯಲ್ಲಿದ್ದವರ ರಕ್ಷಣೆಗೆ ಮುಂದಾಗಿದ್ದಾರೆ. ಬಿದ್ದಿದ್ದಾರೆಂದು ಸ್ಥಳೀಯ ಮೀನುಗಾರರು ಹೇಳಿದ್ದಾರೆ. ಆದಾಗ್ಯೂ ಕೇವಲ ನಾಲ್ವರು ಮಹಿಳೆಯರು ಹಾಗೂ ಇಬ್ಬರು ಪುರುಷರನ್ನು ಮಾತ್ರ ರಕ್ಷಿಸಲಾಗಿದೆ. ಉಳಿದವರು ನೀರಿನ ಸೆಳೆತಕ್ಕೆ ಸಿಕ್ಕಿ ಸುತ್ತಲೇ ಇರುತ್ತವೆ.ಯಲ್ಲಿ ರೋಹಿಂಗ್ಯಾ ನಿರಾಶ್ರಿತರು ನೆರೆ ರಾಷ್ಟ್ರಗಳಿಗೆ ವಲಸೆ ಹೋಗುತ್ತಾರೆ. ಇಂಡೋ ನೇಷ್ಯಾಗೆ ಜಲಮಾರ್ಗದಿಂದಲೇ ಸಾಗು ವುದರಿಂದ ಇಂಥ ಅವಘಡಗಳು ಆಗಾಗ ಸಂಭವಿಸಿ ಜನಾಂಗೀಯ ಘರ್ಷಣೆ, ಹಿಂಸಾಚಾರದಿಂದಾಗಿ ಸಂಖ್ಯೆಯಲ್ಲಿ ರೋಹಿಂಗ್ಯಾ ನಿರಾಶ್ರಿತರು ನೆರೆ ರಾಷ್ಟ್ರಗಳಿಗೆ ವಲಸೆ ಹೋಗುತ್ತಾರೆ. ಇಂಡೋ ನೇಷ್ಯಾಗೆ ಜಲಮಾರ್ಗದಿಂದಲೇ ಸಾಗುವುದರಿಂದ ಇಂಥ ಅವಘಡಗಳು ಆಗಾಗ ಸಂಭವಿಸುತ್ತಲ್ಲೇ ಇರುತ್ತವೆ.



# ಪಾಕಿಸ್ತಾನದ ಗ್ವಾದರ್ ಬಂದರಿನ ಮೇಲೆ ದಾಳಿ

ಬಲೂಚಿಸ್ತಾನ ಪ್ರಾಂತ್ಯದ ಗ್ವಾದರ್ ಬಂದರು ಪ್ರಾಧಿಕಾರ ಸಂಕೀರ್ಣದಲ್ಲಿ ಬುಧವಾರ ಅಪರಿಚಿತ ಬಂದೂಕುಧಾರಿಗಳು ನಡೆಸಿದ ಗುಂಡಿನ ದಾಳಿಯಲ್ಲಿ ಕನಿಷ್ಠ ಇಬ್ಬರು ಪಾಕಿಸ್ತಾನಿ ಸೈನಿಕರು ಮತ್ತು ಎಂಟು ದಾಳಿಕೋರರು ಸಾವನ್ನಪ್ಪಿದ್ದಾರೆ ಎಂದು ಸ್ಥಳೀಯ ಮಾಧ್ಯಮ ವರದಿಗಳು ತಿಳಿಸಿವೆ.ಈ ದಾಳಿಯ ಹೊಣೆಯನ್ನು ಬಲೂಚಿಸ್ತಾನ್ ಲಿಬರೇಶನ್ ಆರ್ಮಿ ಹೊತ್ತುಕೊಂಡಿದೆ.ವರದಿಗಳ ಪ್ರಕಾರ, ದಾಳಿಕೋರರು ತಮ್ಮ ಮತ್ತು ಭದ್ರತಾ ಅಧಿಕಾರಿಗಳ ನಡುವೆ ಗುಂಡಿನ ದಾಳಿ ನಡೆಯುವ ಮೊದಲು ಸ್ಫೋಟಗಳನ್ನು ನಡೆಸಿದ್ದಾರೆ. ಭಯೋತ್ಪಾದಕರ ಗುಂಪು ಪೋರ್ಟ್ ಅಥಾರಿಟಿ ಕಾಲೋನಿಯನ್ನು ಪ್ರವೇಶಿಸಲು ಪ್ರಯತ್ನಿಸಿತು ಆದರೆ ಭದ್ರತಾ ಪಡೆ ಸಿಬ್ಬಂದಿ ಬುಧವಾರ ಅದನ್ನು ಯಶಸ್ವಿಯಾಗಿ ವಿಫಲಗೊಳಿಸಿದ್ದಾರೆ ಎಂದು ಮಿಲಿಟರಿಯ ಮಾಧ್ಯಮ ವಿಭಾಗವಾದ ಇಂಟರ್-ಸರ್ವೀಸಸ್ ಪಬ್ಲಿಕ್ ರಿಲೇಶನ್ಸ್ (ಐಎಸ್ಪಿಆರ್) ಹೇಳಿಕೆಯಲ್ಲಿ ತಿಳಿಸಿದೆ.



# ಗಾಝಾದ ಶಿಫಾ ಆಸ್ಪತ್ರೆಯಲ್ಲಿ ಘರ್ಷಣೆ 50ಕ್ಕೂ ಹೆಚ್ಚು ಫೆಲೆಸ್ತೀನೀಯರ ಸಾವು

**ಗಾಝಾ:** ಗಾಝಾ ಪಟ್ಟಿಯ ಶಿಫಾ ಆಸ್ಪತ್ರೆಯ ಸುತ್ತ ಕಳೆದ ಒಂದು ದಿನದಲ್ಲಿ ನಡೆದ ಹೋರಾಟದಲ್ಲಿ 50 ಕ್ಕೂ ಹೆಚ್ಚು ಫೆಲೆಸ್ತೀನೀಯರನ್ನು ಕೊಂದಿರುವುದಾಗಿ ಇಸ್ರೇಲ್ ಮಿಲಿಟರಿ ಗುರುವಾರ ತಿಳಿಸಿದೆ. ಶಿಫಾ ಆಸ್ಪತ್ರೆಯಲ್ಲಿ ತನ್ನ ನಿಖರವಾದ ಕಾರ್ಯಾಚರಣೆಯ ಚಟುವಟಿಕೆಯನ್ನು ಮುಂದುವರಿಸುವುದಾಗಿ ಮಿಲಿಟರಿ ಹೇಳಿದೆ.



ಇದರ ನಡುವೆ ಇಸ್ರೇಲ್ ವೈಮಾನಿಕ ದಾಳಿಯಲ್ಲಿ ಜೆನಿನ್ ಪಟ್ಟಣದ ಬಳಿಯ ಉತ್ತರ ಪಶ್ಚಿಮ ದಂಡೆಯಲ್ಲಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಕನಿಷ್ಠ ಮೂವರು ಫೆಲೆಸ್ತೀನೀಯರು ಸಾವನ್ನಪ್ಪಿದ್ದಾರೆ ಎಂದು ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ಅಧಿಕಾರಿಗಳು ತಿಳಿಸಿದ್ದಾರೆ.

ಇಸ್ಲಾಮಿಕ್ ಜಿಹಾದ್ ಗುಂಪು ಮೃತ ಮೂವರನ್ನು ಸದಸ್ಯರೆಂದು ಹೇಳಿಕೊಂಡಿದೆ. ಗಾಝಾ ಪಟ್ಟಿಯ ಅತಿದೊಡ್ಡ ಆಸ್ಪತ್ರೆಯ ಮೇಲೆ ಮೂರನೇ ದಿನವೂ ದಾಳಿ ನಡೆಯುತ್ತಿರುವಾಗ ವೈಮಾನಿಕ ದಾಳಿ ನಡೆದಿದೆ. ನೂರ್ ಶಾಮ್ಸ್ ನಿರಾಶ್ರಿತರ ಶಿಬಿರದಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ಮೃತಪಟ್ಟ ವ್ಯಕ್ತಿಯ ಶವವನ್ನು ಫೆಲೆಸ್ತೀನಿಯರು ಗುರುವಾರ ಸ್ಥಳಾಂತರಿಸಿದ್ದಾರೆ.

# ಉಕ್ರೇನ್ ರಾಜಧಾನಿ ಮೇಲೆ ಕ್ಷಿಪಣಿ ದಾಳಿ

**ಉಕ್ರೇನ್:** ಗುರುವಾರ ಮುಂಜಾನೆ ಉಕ್ರೇನ್ನ ರಾಜಧಾನಿ ಕೈವ್ ಮೇಲೆ ರಷ್ಯಾ ಕ್ಷಿಪಣಿ ದಾಳಿ ನಡೆಸಿದೆ. ದಾಳಿಯಲ್ಲಿ ಕನಿಷ್ಠ ಎಂಟು ಜನರು ಗಾಯಗೊಂಡಿದ್ದಾರೆ ಮತ್ತು ಹಲವಾರು ವಸತಿ ಕಟ್ಟಡಗಳು ಮತ್ತು ಕೈ ಗಾರಿಕಾ ಸೌಲಭ್ಯಗಳಿಗೆ ಹಾನಿಯಾಗಿದೆ. ಗುರುವಾರ ಬೆಳಿಗ್ಗೆ 5 ಗಂಟೆ ಸುಮಾರಿಗೆ ದೊಡ್ಡ ಸದ್ದಿನೊಂದಿಗೆ ಕ್ಷಿಪಣಿ ದಾಳಿ ನಡೆದಿದೆ. ಕ್ಷಿಪಣಿ ದಾಳಿ ಬೆಳಿಗ್ಗೆ 6.10 ಕ್ಕೆ ಕೊನೆಗೊಂಡಿದೆ. ರಷ್ಯಾದ ದಾಳಿಯನ್ನು ಹಿಮ್ಮೆಟ್ಟಿಸಲು ಉಕ್ರೇನ್ ವಾಯು ಪಡೆಯಲು ಯತ್ನಿಸಿದರೂ ಪ್ರಯೋಜನವಾಗಿಲ್ಲ. ದಿ ನ್ಯೂಯಾರ್ಕ್ ಪೋಸ್ಟ್ ಪ್ರಕಾರ, ಈ ವಾರದಲ್ಲಿ ಉಕ್ರೇನ್ ರಾಜಧಾನಿಯ ಮೇಲೆ ಇದು ಅತಿದೊಡ್ಡ ದಾಳಿಯಾಗಿದೆ. ಆದರೆ, ಹಾನಿಯ ಪ್ರಮಾಣ ಇನ್ನೂ ಸ್ಪಷ್ಟವಾಗಿಲ್ಲ. ರಷ್ಯಾದ ಕ್ಷಿಪಣಿ ದಾಳಿಯಿಂದ ತನ್ನನ್ನು ರಕ್ಷಿಸಿಕೊಳ್ಳಲು ತನ್ನ ದೇಶಕ್ಕೆ ಮಿಲಿಟರಿ ನೆರವು ಬೇಕು ಎಂದು ಉಕ್ರೇನಿನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಬುಧವಾರ ತಮ್ಮ ಭಾಷಣದಲ್ಲಿ ಹೇಳಿದ್ದರು. ಆದರೆ, ಅವರು ಹೇಳಿಕೆ ನೀಡಿದ ಮರು ದಿನವೇ ರಷ್ಯಾ ದಾಳಿ ನಡೆಸಿದೆ.



# ಡೀಪ್ ಫೇಕ್ ವೀಡಿಯೊ ಪ್ರಕರಣ: ದುಬಾರಿ ಪರಿಹಾರ ಕೋರಿದ ಇಟಲಿ ಪ್ರಧಾನಿ

ಡೀಪ್ ಫೇಕ್ ಅಶ್ಲೀಲ ವೀಡಿಯೊಗಳನ್ನು ಮಾಡಿ ಆನ್ ಲೈನ್ ನಲ್ಲಿ ವೈರಲ್ ಮಾಡಿದ್ದ ಬಳಿಕ ದುಬಾರಿ ಪರಿಹಾರವನ್ನು ಇಟಲಿ ಪ್ರಧಾನಿ ಜಿಯೋರ್ಜಿಯಾ ಮೆಲೋನಿ ಕೋರಿದ್ದಾರೆ. ಪ್ರಧಾನಿ ಜಿಯೋರ್ಜಿಯಾ ಮೆಲೋನಿ ಪರಿಹಾರವನ್ನು 100,000 ಯುರೋ (109,345 ಡಾಲರ್) ಪರಿಹಾರವನ್ನು ಕೋರಿದ್ದಾರೆ. ಇಬ್ಬರು ಪುರುಷರು ಮೆಲೋನಿ ಅವರ ಮುಖವನ್ನು ಇನ್ನೊಬ್ಬ ವ್ಯಕ್ತಿಯ ದೇಹದ ಮೇಲೆ ರಚಿಸುವ ಮೂಲಕ ಅಶ್ಲೀಲ ವೀಡಿಯೊಗಳನ್ನು ಮಾಡಿ ನಂತರ ಅವುಗಳನ್ನು ಅಂತರ್ಜಾಲದಲ್ಲಿ ಅಪ್ಲೋಡ್ ಮಾಡಿದ್ದಾರೆ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ. 40 ವರ್ಷದ ವ್ಯಕ್ತಿ ಮತ್ತು ಅವರ 73 ವರ್ಷದ ತಂದೆಯ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಲಾಗಿದೆ ಎಂದು ಬಿಬಿಸಿ ವರದಿ ಮಾಡಿದೆ.ಪೊಲೀಸರ ಪ್ರಕಾರ, ವೀಡಿಯೊಗಳನ್ನು ಅಪ್ಲೋಡ್ ಮಾಡಲು ಬಳಸಿದ ಸ್ಮಾರ್ಟ್ಫೋನ್ ಅನ್ನು ಟ್ರ್ಯಾಕ್ ಮಾಡುವ ಮೂಲಕ ಅವರನ್ನು ಪತ್ತೆಹಚ್ಚಲು ಸಾಧ್ಯವಾಯಿತು. 2022ರಲ್ಲಿ ಅವರು ದೇಶದ ಪ್ರಧಾನಿಯಾಗಿ ನೇಮಕಗೊಳ್ಳುವ ಮುನ್ನ ಈ ವಿಡಿಯೋ ವೈರಲ್ ಆಗಿತ್ತು.



Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

ಸಿನಿ ಕಾರ್ನರ್



## ಉಜ್ಜಯಿನಿಯಲ್ಲಿ ಸ್ಟಾರ್ ಸಿಸ್ಟರ್ಸ್

ಸ್ಟಾರ್ ಸಹೋದರಿಯರು ಎಂದೇ ಹೆಸರುವಾಸಿಯಾಗಿರುವ ಸೋನು ಗೌಡ ಮತ್ತು ಅವರ ಸಹೋದರಿ ನೇಹಾ ಗೌಡ ಶೂಟಿಂಗ್ ನಿಂದ ಕೊಂಚ ಬ್ರೇಕ್ ತೆಗೆದುಕೊಂಡು ಟೆಂಪ್ ರನ್ ಮಾಡುತ್ತಿದ್ದಾರೆ. ಸದ್ಯ ಅವರು ಉಜ್ಜಯಿನಿ ಮತ್ತು ಓಂಕಾರೇಶ್ವರ ಯಾತ್ರೆಯಲ್ಲಿದ್ದು, ದೇವರ ದರ್ಶನ ಪಡೆದಿದ್ದಾರೆ. ಕುಟುಂಬ ಸಮೇತ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುತ್ತಿರುವ ಸಹೋದರಿಯರು, ಆ ಧಾರ್ಮಿಕ ಕ್ಷೇತ್ರಗಳ ಮಹಿಮೆಯನ್ನು ಅಭಿಮಾನಿಗಳ ಜೊತೆ ಹಂಚಿಕೊಂಡಿದ್ದಾರೆ. ಜೊತೆಗೆ ಅಲ್ಲಿನ ಫೋಟೋಗಳನ್ನೂ ಅವರು ಶೇರ್ ಮಾಡಿದ್ದಾರೆ. ಓಂಕಾರೇಶ್ವರ ಮತ್ತು ಮಹಾಕಾಳನ ಮಹಿಮೆಯನ್ನು ಕೊಂಡಾಡಿದ್ದಾರೆ. ದೇವರ ಸನ್ನಿಧಾನದಲ್ಲಿ ವಿಶ್ವಾಸ, ಶಾಂತಿ, ನಂಬಿಕೆಗಳು ಇಮ್ಮಡಿಯಾಗುತ್ತವೆ ಎಂದು ಸೋನು ಗೌಡ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಹಾಕುವ ಮೂಲಕ ನಂಬಿಕೆಗಳ ಬಗ್ಗೆ ಮಾತನಾಡಿದ್ದಾರೆ. ಭಕ್ತಿ, ಪರ್ವತ, ನದಿಗಳ ಬಗ್ಗೆಯೂ ಅವರು ಹೇಳಿಕೊಂಡಿದ್ದು, ಅದೊಂದು ಪುಣ್ಯ ಸ್ಥಳ ಎಂದಿದ್ದಾರೆ.



## ಸಾಯಿ ಪಲ್ಲವಿ ಬದಲು ಮೃಣಾಲ್‌ಗೆ ವಿಜಯ್ ಚಾನ್ಸ್ ಕೊಟ್ಟಿದ್ದೇಕೆ?

ತೆಲುಗಿನ ಸ್ಟಾರ್ ನಟ ವಿಜಯ್ ದೇವರಕೊಂಡ ನಟನೆಯ 'ಫ್ಯಾಮಿಲಿ ಸ್ಟಾರ್' ಸಿನಿಮಾ ರಿಲೀಸ್‌ಗೆ ರೆಡಿಯಾಗಿದೆ. ಇದರ ನಡುವೆ ಹೊಸ ವಿಚಾರವೊಂದು ಗಾಸಿಪ್ ಪ್ರಿಯರ ಚರ್ಚೆಗೆ ಗ್ರಾಸವಾಗಿದೆ. ವಿಜಯ್ ಜೊತೆ ನಟಿಸಲು ಸಾಯಿ ಪಲ್ಲವಿ ಫೈನಲ್ ಆಗಿದ್ದರು. ಆದರೆ ಲೈಗರ್ ಹೀರೋ ಮೃಣಾಲ್ ಠಾಕೂರ್ ಮಣೆ ಹಾಕಿದ್ದೇಕೆ ಎಂದು ಚರ್ಚೆಯಾಗುತ್ತಿದೆ.

ವಿಜಯ್ ದೇವರಕೊಂಡ, ಮೃಣಾಲ್ ನಟನೆಯ 'ಫ್ಯಾಮಿಲಿ ಸ್ಟಾರ್' ಸಿನಿಮಾ ಇದೇ ಏಪ್ರಿಲ್ 5ಕ್ಕೆ ರಿಲೀಸ್‌ಗೆ ಸಿದ್ಧವಾಗಿದೆ. ವಿಜಯ್- ಮೃಣಾಲ್ ನಟಿಸಿರುವ ಚಿತ್ರದ ಹಾಡು, ಟ್ರೈಲರ್ ಮೂಲಕ ಪ್ರೇಕ್ಷಕರಿಗೆ ಮೋಡಿ ಮಾಡುತ್ತಿದೆ. ಈ ಚಿತ್ರದಲ್ಲಿ ಮೊದಲು ಹೀರೋ ಜೊತೆ ನಟಿಸಲು ಸೆಲೆಕ್ಟ್ ಆಗಿದ್ದು ಸಾಯಿ ಪಲ್ಲವಿ ಆದರೆ ಅವರ ಬದಲು ಮೃಣಾಲ್ ಯಾಕೆ ಅವಕಾಶ ಕೊಟ್ಟರು. ಏಕಾಏಕಿ ನಾಯಕಿ ಬದಲಾವಣೆ ಆಗಿದ್ದೇಕೆ? ಸಾಯಿ ಪಲ್ಲವಿಯಂತಹ ಪ್ರತಿಭಾನ್ವಿತ ನಟಿಯನ್ನು ಕೈಬಿಟ್ಟಿದ್ದೇಕೆ? ಎಂದು ಫ್ಯಾನ್ಸ್ ಪ್ರಶ್ನಿಸುತ್ತಿದ್ದಾರೆ.

ಕೋಟಿ ಕೋಟಿ ದುಡ್ಡು ಕೊಡುತ್ತೀವಿ ಅಂದ್ರು, ಲಿಪ್ ಲಾಕ್, ಹಸಿ ಬಿಸಿ ದೃಶ್ಯಗಳಲ್ಲಿ ಸಾಯಿ ಪಲ್ಲವಿ ನಟಿಸಲ್ಲ. ಸಿನಿಮಾಗಳಲ್ಲಿ ನಟಿಸಲು ತಮ್ಮದೇ ಕೆಲವು ರೂಲ್ಸ್‌ಗಳನ್ನು ಇಂದಿಗೂ ಸಾಯಿ ಪಲ್ಲವಿ ಫಾಲೋ ಮಾಡ್ತಾರೆ. ವಿಜಯ್ ದೇವರಕೊಂಡ ಚಿತ್ರ ಅಂದ್ಮೇಲೆ ಅಲ್ಲಿ ಲಿಪ್ ಲಾಕ್ ಸೀನ್, ಕೆಲವು ಹಸಿ ಬಿಸಿ ದೃಶ್ಯಗಳು ಇದ್ದೇ ಇರುತ್ತದೆ. ಸಾಯಿ ಪಲ್ಲವಿ ಒಪ್ಪಲ್ಲ ಎಂದೇ ವಿಜಯ್, ಮೃಣಾಲ್‌ಗೆ ಚಾನ್ಸ್ ಕೊಟ್ಟಿದ್ದಾರೆ ಎಂದೇ ಟಾಕ್ ಆಗುತ್ತಿದೆ.

ಸಿನಿಮಾ ಕಥೆಗೆ ಹಸಿ ಬಿಸಿ ದೃಶ್ಯಗಳು ಅವಶ್ಯಕತೆ ಇದ್ರೆ ಮೃಣಾಲ್ ನಟಿಸುತ್ತಾರೆ. ಹಾಗಾಗಿ ವಿಜಯ್ ದೇವರಕೊಂಡ ಅವರು ಮೃಣಾಲ್‌ಗೆ ಜೈ ಎಂದಿದ್ದಾರೆ ಎನ್ನಲಾಗುತ್ತಿದೆ. ಈ ಹಿಂದೆ ಕೂಡ ಡಿಯರ್ ಕಾಮ್ರೆಡ್ ಚಿತ್ರಕ್ಕೆ ಸಾಯಿ ಪಲ್ಲವಿ ಸೆಲೆಕ್ಟ್ ಆಗಿದ್ದರು. ಬೋಲ್ಡ್ ಆಗಿ ಸಾಯಿ ಪಲ್ಲವಿ ನಟಿಸಲ್ಲ ಎಂಬ ಕಾರಣಕ್ಕೆ ರಶ್ಮಿಕಾ ಮಂದಣ್ಣಗೆ ವಿಜಯ್ ಮಣೆ ಹಾಕಿದ್ದರು. ಈಗ ಮತ್ತೆ ಹಿಸ್ಟರಿ ರಿಪೀಟ್ ಆಗಿದೆ ಎಂಬ ಸುದ್ದಿ ಆಂಧ್ರದಲ್ಲಿ ಹರಿದಾಡುತ್ತಿದೆ. 'ಲೈಗರ್' ಸಿನಿಮಾ ಮಕಾಡೆ ಮಲಗಿದ ಮೇಲೆ ಸಮಂತಾ ಜೊತೆ 'ಖುಷಿ' ಸಿನಿಮಾ ಮಾಡಿ ವಿಜಯ್ ದೇವರಕೊಂಡ ಗೆದ್ದರು. ಈಗ ಮತ್ತೆ ಫ್ಯಾಮಿಲಿ ಸ್ಟಾರ್ ಮೂಲಕ ನಟ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

## ಒಟಿಟಿಗೆ ಬಂದ ಫೈಟರ್ ಹೃತಿಕ್-ದೀಪಿಕಾ ಕಾಂಬಿನೇಷನ್



ಬಾಲಿವುಡ್ ನ ಮತ್ತೊಂದು ಸೂಪರ್ ಹಿಟ್ ಸಿನಿಮಾ ಒಟಿಟಿಗೆ ಬಂದಿದೆ. ಹೃತಿಕ್ ರೋಷನ್ ಮತ್ತು ದೀಪಿಕಾ ಪಡುಕೋಣೆ ಕಾಂಬಿನೇಷನ್ ನ ಫೈಟರ್ ಸಿನಿಮಾ ಇಂದಿನಿಂದ ನೀವು ಒಟಿಟಿಯಲ್ಲಿ ನೋಡಬಹುದು. ಬಾಕ್ಸ್ ಆಫೀಸಿನಲ್ಲಿ ದಾಖಲೆ ಬರೆದಿದ್ದ ಈ ಚಿತ್ರವು ಹಲವು ವಿವಾದಕ್ಕೂ ಕಾರಣವಾಗಿತ್ತು.

ಫೈಟರ್ ಸಿನಿಮಾದ ಚುಂಬನ ದೃಶ್ಯ ಕುರಿತಂತೆ ವಾಯುಸೇನಾ ಅಧಿಕಾರಿಯೊಬ್ಬರು ಗರಂ ಆಗಿದ್ದಾರೆ. ವಾಯುಸೇನೆ ಸಮವಸ್ತ್ರ ಧರಿಸಿಕೊಂಡು ಹೃತಿಕ್ ಮತ್ತು ದೀಪಿಕಾ ಚುಂಬಿಸುವ ದೃಶ್ಯವು ವಸ್ತ್ರ ಸಂಹಿತೆ ನೀತಿಯನ್ನು ಉಲ್ಲಂಘಿಸಿದೆ. ಇದರಿಂದಾಗಿ ವಾಯುಸೇನೆಗೆ ಮುಜುಗರ ತರಿಸಿದೆ ಎಂದು ಅಧಿಕಾರಿ ಅಸ್ಸಾಮಿನ ಸೌಮ್ಯ ದೀಪ್ ದಾಸ್ ಎನ್ನುವವರು ದೂರು ದಾಖಲಿಸಿದ್ದಾರೆ.

ಫೈಟರ್ ಸಿನಿಮಾ ಕುರಿತಂತೆ ಬಿಡುಗಡೆ ದಿನದಿಂದ ಈವರೆಗೂ ಒಂದಿಲ್ಲೊಂದು ಸಂಕ?ವನ್ನು ಎದುರಿಸುತ್ತಲೇ ಬಂದಿದೆ. ಈ ಹಿಂದೆ ಸೆನ್ಸಾರ್ ಮಂಡಳಿಯು ಚಿತ್ರದ ಎರಡು ದೃಶ್ಯಗಳನ್ನು ಕತ್ತರಿಸುವಂತೆ ಸೂಚಿಸಲಾಗಿತ್ತು. ಅದರಲ್ಲೂ ದೀಪಿಕಾ ಪಡುಕೋಣೆ ಬಿಕಿನಿ ಹಾಕಿದ ದೃಶ್ಯಕ್ಕೆ ಕತ್ತರಿ ಹಾಕಲಾಗಿತ್ತು. ಈ ಹಿಂದೆ ಪಠಾಣ್ ಸಿನಿಮಾದಲ್ಲಿ ದೀಪಿಕಾ ಪಡುಕೋಣೆ ಕೇಸರಿ ಬಿಕಿನಿ ಧರಿಸಿದ್ದರು. ಅದು ವಿವಾದಕ್ಕೆ ಕಾರಣವಾಗಿತ್ತು. ನಂತರ ಸಿನಿಮಾದಿಂದಲೇ ಆ ದೃಶ್ಯವನ್ನು ಕೈ ಬಿಡಲಾಗಿತ್ತು. ಫೈಟರ್ ಸಿನಿಮಾದಲ್ಲೂ ಬಿಕಿನಿಯಲ್ಲಿ ದೀಪಿಕಾ ಕಾಣಿಸಿಕೊಳ್ಳಲಿಲ್ಲ. ಇದು ಅಭಿಮಾನಿಗಳ ನಿರಾಸೆ ಕಾರಣವಾಗಿತ್ತು.



# ಜೊತೆಯಾಟದಲ್ಲೂ ಆರ್‌ಸಿಬಿ ಟಾಪ್!

ಯಾವುದೇ ಟಿ20 ಪಂದ್ಯಗಳಲ್ಲಿ ಮೊದಲು ಬ್ಯಾಟಿಂಗ್ ಮಾಡುವ ತಂಡವು ಬೃಹತ್ ಮೊತ್ತ ಬಾರಿಸಬೇಕಾದ್ರೆ, ಸ್ಫೋಟಕ ಬ್ಯಾಟಿಂಗ್ ಮಾಡುವ ಹೊರತಾಗಿ ಉತ್ತಮ ಪಾಲುದಾರಿಕೆಯೂ ಮುಖ್ಯವಾಗುತ್ತದೆ. ಐಪಿಎಲ್ ಟೂರ್ನಿಗೂ ಇದು ಅನ್ವಯಿಸುತ್ತದೆ.

ಮೊದಲು ಬ್ಯಾಟಿಂಗ್ ಮಾಡುವ ತಂಡದ ಪರ ಬ್ಯಾಟಿಂಗ್ ಜೋಡಿಯು ಕ್ರೀಸ್ ಮೇಲೆ ಭದ್ರವಾಗಿ ನೆಲೆಯೂರಿದರೆ, ದೊಡ್ಡ ಹೊಡೆತ ನೀಡಲು ಮುಂದಾದ್ರೆ, ಕನಿಷ್ಠ 200 ರನ್ ಗಳನ್ನು ಕಲೆಹಾಕುವುದು ಖಚಿತ. ಕೆಲವೊಮ್ಮೆ ಅಧಿಕ ರನ್ ಗಳಿಸಿದ ತಂಡವು ಬೌಲಿಂಗ್‌ನಲ್ಲಿ ಕೊಂಚ ಎಡವಿದರೂ ರನ್ ತಂಡಕ್ಕೆ ಗೆಲುವು ತಂದುಕೊಡಬಹುದು. ಉದಾಹರಣೆಗೆ ಕಳೆದ ಆವೃತ್ತಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಆರ್ ಸಿಬಿ ನಡುವಿನ ಪಂದ್ಯ ಸಾಕ್ಷಿಯಾಗಿದೆ. ಅಂದು ಚೆನ್ನೈ 226 ರನ್ ಪೇರಿಸಿದ್ದರು, ಕೇವಲ 9 ರನ್‌ಗಳಿಂದ ಗೆಲುವು ಸಾಧಿಸಿತ್ತು. 17ನೇ ಆವೃತ್ತಿಯ ಐಪಿಎಲ್ ಆರಂಭಕ್ಕೆ ದಿನಗಳು ಸಮೀಪಿಸುತ್ತಿರುವ ಕಾರಣ ಈ ಹಿಂದಿನ ಅತ್ಯುತ್ತಮ ಜತೆಯಾಟವನ್ನು ಮೆಲುಕು ಹಾಕುಬೇಕಾಗಿದ್ದು, ಐಪಿಎಲ್ ಇತಿಹಾಸದಲ್ಲೇ ದಾಖಲೆಯ ಜೊತೆಯಾಟ ನೀಡಿದ ಟಾಪ್ ಜೋಡಿಗಳನ್ನು ಇಲ್ಲಿ ಕಾಣಬಹುದು.

ಐಪಿಎಲ್ ಇತಿಹಾಸದಲ್ಲಿ ಅತ್ಯುತ್ತಮ ಜೊತೆಯಾಟ ನೀಡಿದ ಟಾಪ್-5 ಪಟ್ಟಿಯಲ್ಲಿ ಕೊಹ್ಲಿ ಮೂರರಲ್ಲಿ ಕಾಣಿಸಿಕೊಂಡಿದ್ದಾರೆ, ಅಲ್ಲದೇ ಆರ್‌ಸಿಬಿ ತಂಡ ಮೂವರು ಆಟಗಾರರು ಈ ಪಟ್ಟಿಲ್ಲಿರುವುದು ವಿಶೇ?. 2016ರ ಆವೃತ್ತಿಯಲ್ಲಿ ಗುಜರಾತ್ ಲಯನ್ಸ್ ವಿರುದ್ಧ ಎಬಿ ಡಿವಿಲಿಯರ್ಸ್ ಅವರೊಂದಿಗೆ 2ನೇ ವಿಕೆಟ್‌ಗೆ ವಿರಾಟ್ ಕೊಹ್ಲಿ 229 ರನ್‌ಗಳನ್ನು ಸೇರಿಸಿದ್ದರು. ಈ ಪಂದ್ಯದಲ್ಲಿ ಇಬ್ಬರೂ ಶತಕಗಳನ್ನು ಸಿಡಿಸಿದ್ದರು. ದಕ್ಷಿಣ ಆಫ್ರಿಕಾದ ಬ್ಯಾಟರ್ ಮಿಸ್ಟರ್-360, ಕೇವಲ 52 ಎಸೆತಗಳಲ್ಲಿ 12 ಸಿಕ್ಸರ್ ಗಳು ಮತ್ತು 10 ಬೌಂಡರಿಗಳ ಸಹಾಯದಿಂದ 129 ರನ್ ಗಳಿಸಿದ್ದರು. ವಿರಾಟ್ ಕೊಹ್ಲಿ 55 ಎಸೆತಗಳಲ್ಲಿ 109 ರನ್ ಗಳಿಸುವುದರೊಂದಿಗೆ ಆರ್‌ಸಿಬಿ 3 ವಿಕೆಟ್ ನಷ್ಟಕ್ಕೆ 248 ರನ್ ಪೇರಿಸಿತ್ತು. ಪಂದ್ಯದಲ್ಲಿ ಆರ್ ಸಿಬಿ ಗೆದ್ದಿತ್ತು. 2015ರ ಐಪಿಎಲ್ ಟೂರ್ನಿಯಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ 2ನೇ ವಿಕೆಟ್ ಗೆ ಕೊಹ್ಲಿ ಮತ್ತು ವಿಲಿಯರ್ಸ್ 215 ರನ್‌ಗಳ ಜೊತೆಯಾಟವಾಡಿದ್ದರು. ಆ ಪಂದ್ಯದಲ್ಲಿ ಎಬಿಡಿ ಕೇವಲ 59 ಎಸೆತಗಳಲ್ಲಿ 19 ಬೌಂಡರಿ ಮತ್ತು 4 ಸಿಕ್ಸರ್ ಸೇರಿದಂತೆ 133 ರನ್ ಚಚ್ಚಿದ್ದರು. ವಿರಾಟ್ 50 ಎಸೆತಗಳಲ್ಲಿ 82 ರನ್ ಸಿಡಿಸಿ ಔಟಾದರು.



### ಗಿಲ್‌ಕ್ರಿಸ್ಟ್ ಶಾನ್ ಮಾರ್ಷ

**2011ರ ಆವೃತ್ತಿಯಲ್ಲಿ ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ, ಪಂಜಾಬ್ ನಾಯಕ ಆಡಮ್ ಗಿಲ್‌ಕ್ರಿಸ್ಟ್ 55 ಎಸೆತಗಳಲ್ಲಿ 106 ರನ್ ಗಳಿಸುವ ಮೂಲಕ ಅದ್ಭುತ ಶತಕ ಗಳಿಸಿದ್ದರು. ಶಾನ್ ಮಾರ್ಷ ಜೊತೆಗೂಡಿ 2ನೇ ವಿಕೆಟ್ ಗೆ 206 ರನ್ ಪೇರಿಸಿದ್ದರು. ಇದು ಐಪಿಎಲ್ ಇತಿಹಾಸದಲ್ಲಿನ 4ನೇ ಅತಿ ದೊಡ್ಡ ಜೊತೆಯಾಟವಾಗಿದೆ. ಮೊದಲ ಇನ್ನಿಂಗ್ಸ್ ನಲ್ಲಿ ಪಂಜಾಬ್ 2 ವಿಕೆಟ್ ನಷ್ಟಕ್ಕೆ 232 ರನ್ ಗಳಿಸಿತ್ತು. ಅಂತಿಮವಾಗಿ ಆರ್‌ಸಿಬಿ 111 ರನ್ ಗಳ ಸೋಲು ಅನುಭವಿಸಿತ್ತು.**

### ಗೇಲ್ ವಿರಾಟ್

**ಐಪಿಎಲ್ 2012ರ ಪಂದ್ಯದಲ್ಲಿ ಡೆಲ್ಲಿ ತಂಡದ ವಿರುದ್ಧ ವಿರಾಟ್ ಮತ್ತು ಕ್ರಿಸ್ ಗೇಲ್ 2ನೇ ವಿಕೆಟ್‌ಗೆ 204 ರನ್‌ಗಳ ಜೊತೆಯಾಟ ಪೇರಿಸಿದ್ದರು. ಗೇಲ್ 62 ಎಸೆತಗಳಲ್ಲಿ 128 ರನ್ ಗಳಿಸಿದ್ದರೆ ವಿರಾಟ್ 53 ಎಸೆತಗಳಲ್ಲಿ 73 ರನ್ ಗಳಿಸಿದ್ದರು. ಈ ಪಂದ್ಯದಲ್ಲಿ ಆರ್‌ಸಿಬಿ 21 ರನ್‌ಗಳ ಭರ್ಜರಿ ಜಯ ಸಾಧಿಸಿತ್ತು.**

ಮೊದಲ ಇನ್ನಿಂಗ್ಸ್‌ನಲ್ಲಿ 235/1 ಸ್ಕೋರ್ ಮಾಡಿದ್ದ ಆರ್‌ಸಿಬಿ ಈ ಪಂದ್ಯವನ್ನು 39 ರನ್‌ಗಳಿಂದ ಗೆದ್ದುಕೊಂಡಿತ್ತು.

ಕ್ವಿಂಟನ್ ಡಿ ಕಾಕ್ ಕೆ.ಎಲ್ ರಾಹುಲ್: 2022ರ ಐಪಿಎಲ್ ಟೂರ್ನಿಯಲ್ಲಿ ಪದಾರ್ಪಣೆ ಮಾಡಿದ ಲಕ್ನೋ ಸೂಪರ್ ಜೈಂಟ್ಸ್ ತಂಡದ ಪರ ಆರಂಭಿಕರಾದ ಕ್ವಿಂಟನ್ ಡಿ ಕಾಕ್ ಮತ್ತು ಕೆ.ಎಲ್ ರಾಹುಲ್ ಅಬ್ಬರದ ಪ್ರದರ್ಶನ ನೀಡಿದ್ದರು. ಕೆಕೆಆರ್ ವಿರುದ್ಧ ರಾಹುಲ್ ಹಾಗೂ ಡಿ ಕಾಕ್ ಜೋಡಿ 210 ರನ್‌ಗಳ ಜೊತೆಯಾಟ ದಾಖಲಿಸಿದ್ದರು. ಇದು ಟಿ20 ಲೀಗ್‌ನಲ್ಲಿ 3ನೇ ಅತ್ಯುತ್ತಮ ಜೊತೆಯಾಟವಾಗಿ ದಾಖಲಾಯಿತು.

# ನಾಯಕ ಸ್ಥಾನದಿಂದ ಕೆಳಗಿಳಿದ ಧೋನಿ



**ಹಾಲಿ ಚಾಂಪಿಯನ್ಸ್ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕತ್ವದಿಂದ ಲೆಜೆಂಡ್ ಎಂ.ಎಸ್ ಧೋನಿ ಕೆಳಗಿಳಿದಿದ್ದಾರೆ. ಅವರ ಬದಲಿಗೆ ನೂತನ ನಾಯಕನಾಗಿ ಬಲಗೈ ಬ್ಯಾಟರ್ ಋತುರಾಜ್ ಗಾಯಕ್ವಾಡ್ ನೇಮಕಗೊಂಡಿದ್ದಾರೆ. 2024ರ ಐಪಿಎಲ್ ಟೂರ್ನಿ ಆರಂಭಕ್ಕೆ ಒಂದು ದಿನ ಮುಂಚಿತವಾಗಿಯೇ ಧೋನಿ ನಾಯಕ ಸ್ಥಾನದಿಂದ ಕೆಳಗಿಳಿದಿದ್ದು, 2024ರ ಟೂರ್ನಿಯಲ್ಲಿ ಋತುರಾಜ್ ಹಾಲಿ ಚಾಂಪಿಯನ್ಸ್ ಸಿಎಸ್‌ಕೆ ತಂಡವನ್ನು ಮುನ್ನಡೆಸಲಿದ್ದಾರೆ. 2019ರಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿರುವ ಋತುರಾಜ್ ಗಾಯಕ್ವಾಡ್ 52 ಪಂದ್ಯಗಳು 51 ಇನ್ನಿಂಗ್ ಗಳಲ್ಲಿ 1,797 ರನ್ ಗಳಿಸಿದ್ದಾರೆ. ಇದರಲ್ಲಿ ಒಂದು ಶತಕ, 14 ಅರ್ಧಶತಕ, 159 ಬೌಂಡರಿ, 73 ಸಿಕ್ಸರ್‌ಗಳನ್ನ ಒಳಗೊಂಡಿದೆ. ಚೆನ್ನೈ ಸೂಪರ್ ಕಿಂಗ್ಸ್ ತಂಡದ ಉಸಿರು ಯಾರು ಎಂದು ಕೇಳಿದರೆ ಪ್ರತಿಯೊಬ್ಬ ಕ್ರಿಕೆಟ್ ಅಭಿಮಾನಿಯೂ ನಿಸ್ಸಂಶಯವಾಗಿ ಧೋನಿ ಹೆಸರನ್ನೇ ಹೇಳುತ್ತಾರೆ. 42 ವರ್ಷದ ಮಹಿ, 2008ರಲ್ಲಿ ಐಪಿಎಲ್ ಆರಂಭವಾದಾಗಿನಿಂದ ಚೆನ್ನೈ ತಂಡದ ನಾಯಕನಾಗಿದ್ದಾರೆ. 2013ರಿಂದ 2 ವರ್ಷಗಳ ತಂಡವನ್ನು ಅಮಾನತುಗೊಳಿಸಿದ್ದು, ಹೊರತುಪಡಿಸಿ ಉಳಿದ ಎಲ್ಲ ಆವೃತ್ತಿಗಳಲ್ಲೂ ಚೆನ್ನೈ ತಂಡದ ಪರವಾಗಿಯೇ ಆಡಿದ್ದಾರೆ. 2022ರ ಆವೃತ್ತಿಯಲ್ಲಿ ಧೋನಿ ತಮ್ಮ ನಾಯತ್ವ ತೊರೆದಿದ್ದರು. ಈ ವೇಳೆ ರವೀಂದ್ರ ಜಡೇಜಾ ತಂಡದ ನಾಯಕತ್ವ ವಹಿಸಿಕೊಂಡಿದ್ದರು. ಆದ್ರೆ ಸತತ ಸೋಲಿನಿಂದ ಬೇಸರಗೊಂಡ ರವೀಂದ್ರ ಜಡೇಜಾ, ಧೋನಿ ಅವರಿಗೆ ನಾಯಕ ಸ್ಥಾನವನ್ನು ಮರಳಿಸಿದ್ದರು. 2023ರ ಆವೃತ್ತಿಯಲ್ಲಿ ಮಹಿ ನಾಯಕತ್ವದಲ್ಲಿಯೇ ಚೆನ್ನೈ ತಂಡ 5ನೇ ಬಾರಿಗೆ ಚಾಂಪಿಯನ್ ಆಗಿ ಹೊರಹೊಮ್ಮಿತ್ತು.**

# ಬಿಜೆಪಿಯಲ್ಲೇ ಇದ್ದು ಶುದ್ಧೀಕರಣದ ಕಡೆ ನನ್ನ ನಡೆ

**ಬೆಂಗಳೂರು:** ನಾನು ಪಕ್ಷ ಬಿಡುವುದಿಲ್ಲ. ಬಿಜೆಪಿಯಲ್ಲೇ ಇದ್ದು ಶುದ್ಧೀಕರಣದ ಕಡೆಗೆ ನಾನು ಗಮನ ನೀಡುತ್ತೇನೆ ಎಂದು ಬೆಂಗಳೂರು ಉತ್ತರ ಕ್ಷೇತ್ರದ ಸಂಸದ ಡಿವಿ ಸದಾನಂದ ಗೌಡ ಹೇಳಿದ್ದಾರೆ.

ಬೆಂಗಳೂರು ಉತ್ತರ ಕ್ಷೇತ್ರದ ಟಿಕೆಟ್ ಕೈತಪ್ಪಿದ ಹಿನ್ನೆಲೆಯಲ್ಲಿ ಡಿವಿಎಸ್ ಬಿಜೆಪಿಗೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರ್ಪಡೆಯಾಗುತ್ತಾರೆ ಎಂಬ ಒಂದು ಸುದ್ದಿ ಹರಡಿತ್ತು. ಈ ಸುದ್ದಿಯ ಬೆನ್ನಲ್ಲೇ ಇಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ನಾನು ಬಿಜೆಪಿಯನ್ನು ಬಿಡುವುದಿಲ್ಲ. ಕಾಂಗ್ರೆಸ್‌ನಿಂದ ಆಹ್ವಾನ ಬಂದಿದ್ದು ನಿಜ. ಆದರೆ ನಾನು ಕಾಂಗ್ರೆಸ್ ಸೇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ನಾನು ಚುನಾವಣಾ ಕಣದಿಂದ ಹಿಂದೆ ಸರಿಯುತ್ತೇನೆ ಎಂದು ಹೇಳಿದ್ದೆ. ಆಗ ಮಾಜಿ ಸಿಎಂ, ಮಾಜಿ ಡಿಸಿಎಂ ಬಂದು ಮನವೊಲಿಸಿದರು. ಬೆಂಗಳೂರು ಉತ್ತರ ಕ್ಷೇತ್ರಕ್ಕೆ ಬದಲಿ ಅಭ್ಯರ್ಥಿ ಬಂದ ಬಳಿಕ ಕುತೂಹಲ ಹೆಚ್ಚಾಯಿತು ಎಂದು ಹೇಳಿದರು.



ಟಿಕೆಟ್ ಕೈತಪ್ಪಿದ್ದರಿಂದ ಬೇಸರವಾಗಿದ್ಯಾ ಎಂಬ ಪ್ರಶ್ನೆಗೆ, ಬೇಸರವಾಗಿದೆ ಎಂದು ಹೇಳಿದ ಡಿವಿಎಸ್ ನನ್ನನ್ನು ಅವಮಾನಿಸಿದವರು ಮುಂದೆ ಪಶ್ಚಾತ್ತಾಪ ಅನುಭವಿಸುತ್ತಾರೆ. ಸಹಿಸಿಕೊಳ್ಳುವವರಿಗೆ ತಾಳ್ಮೆ ಇದ್ದರೆ, ದುಃಖ ಕೊಟ್ಟವರು ಇದ್ದೂ ಸತ್ತಂತೆ ಎಂದು ತನ್ನನ್ನು ಅವಮಾನಿಸಿದವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕದಲ್ಲಿ ಮೋದಿ ಪರ ವಾತಾವರಣ ಸೃಷ್ಟಿಯಾಗಬೇಕು. ಮೋದಿ ಮತ್ತೊಮ್ಮೆ ಪ್ರಧಾನಿ ಆಗಬೇಕು. ಇದಕ್ಕಾಗಿ ಬಿಜೆಪಿ ಜನಪರವಾದ ಪಕ್ಷ ಆಗಬೇಕು, ಜನ ಒಪ್ಪಿಕೊಳ್ಳಬಲ್ಲ ಪಕ್ಷ ಆಗಬೇಕು ಎಂದರು. ಮೋದಿ ಅವರು ಹೇಳಿದಂತಹ ಪರಿವಾರವಾದ, ಮೋದಿ ಅವರು ಹೇಳಿದಂತಹ ಭ್ರಷ್ಟಾಚಾರವಾದ, ಮೋದಿ ಅವರು ಹೇಳಿದಂತಹ ಜಾತಿವಾದ ಕರ್ನಾಟಕದಲ್ಲಿ ಇರಬಾರದು. ಈ ಶುದ್ಧೀಕರಣಕ್ಕೆ ವೇಗ ಕೊಡುವಂತದ್ದು ನನ್ನಿಂದ ಮಾತ್ರ ಸಾಧ್ಯ. ಜವಾಬ್ದಾರಿ ವಹಿಸಿಕೊಂಡವರು ಸ್ವಾರ್ಥಿಗಳಾಗಿದ್ದಾರೆ. ನನ್ನ ಮಕ್ಕಳಿಗೆ, ನನ್ನ ಕುಟುಂಬದವರಿಗೆ, ನನ್ನ ಸಂಬಂಧಿಕರಿಗೆ, ನನ್ನ ಚೇಲಾಗಳಿಗೆ ಇರುವಂತಹ ಪಕ್ಷ ಬಿಜೆಪಿಯಾಗಬಾರದು ಎಂದು ಹೇಳಿದರು. ಬಿಜೆಪಿಯೊಳಗೆ ಶುದ್ಧೀಕರಣ ಆಗುವ ತನಕ ವಿರಮಿಸುವುದಿಲ್ಲ. ಮೋದಿ ಚುನಾವಣೆ ಬಳಿಕ ಜನರ ಮನಸ್ಸಿನಲ್ಲಿ ಏನಿದೆ ಅದು ಆಗುತ್ತೆ. ರಾಜ್ಯಾಧ್ಯಕ್ಷ, ವಿರೋಧ ಪಕ್ಷದ ನಾಯಕರು ಬದಲಾಗ್ತಾರೆ ಅಂತಾ ಈಶ್ವರಪ್ಪ ಹೇಳಿದ್ದಾರೆ. ನೀವು ಅರ್ಥ ಮಾಡಿಕೊಳ್ಳಿ ಎಂದು ತಿಳಿಸಿದರು.

## ವಿದ್ಯಾರ್ಥಿನಿಯರನ್ನು ಮಂಚಕ್ಕೆ ಕರೆಯುತ್ತಿದ್ದ ಪ್ರೊಬೇಷನರಿ ಪಿಎಸ್‌ಐ

**ಚಾಮರಾಜನಗರ:** ಲಾ ಎಂಡ್ ಆರ್ಡರ್ ಕಾಪಾಡೋ ಪ್ರೊಬೇಷನರಿ ಪಿಎಸ್‌ಐನಿಂದಲೇ ವಿದ್ಯಾರ್ಥಿನಿಯರಿಗೆ ಕಿರುಕುಳ ಆರೋಪ ಕೇಳಿ ಬಂದಿದೆ. ಪಿಎಸ್‌ಐ ಜಗದೀಶ್ ಎಂಬ ಕಾಮುಕ ಮರ್ಮಾಂಗದ ಫೋಟೋ ಕಳಿಸಿ ವಿದ್ಯಾರ್ಥಿನಿಯರನ್ನು ಮಂಚಕ್ಕೆ ಕರೆಯುತ್ತಾನೆ ಎಂಬ ಬಗ್ಗೆ ದೂರು ದಾಖಲಾಗಿದ್ದು ಚಾಮರಾಜನಗರ ಎಸ್‌ಪಿ ಕಚೇರಿಗೆ ತನಿಖೆ ನಡೆಸುವಂತೆ ಐಜಿ ಕಚೇರಿಯಿಂದ ತಾಕೀತು ಬಂದಿದೆ. ಸದ್ಯ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಅವರು ಚಾಮರಾಜನಗರ ಡಿವೈಎಸ್ಪಿಗೆ ತನಿಖೆ ಹೊಣೆ ನೀಡಿದ್ದಾರೆ.



ಪಿಎಸ್‌ಐ ಜಗದೀಶ್ ಫೇಸ್ ಬುಕ್ ಮೂಲಕ ಮೈಸೂರು ಮೂಲದ ಕಾಲೇಜು ವಿದ್ಯಾರ್ಥಿನಿಯರಿಗೆ ಗಾಳ ಹಾಕುತ್ತಿದ್ದ. ಮೊದಲಿಗೆ ಫೇಸ್ ಬುಕ್‌ನಲ್ಲಿ ಫ್ರೆಂಡ್ ರಿಕ್ವೆಸ್ಟ್ ಕಳಿಸುತ್ತಿದ್ದ. ವಿದ್ಯಾರ್ಥಿನಿಯರು ರಿಕ್ವೆಸ್ಟ್ ಎಕ್ಸೆಪ್ಟ್ ಮಾಡಿದ ತಕ್ಷಣ ವಿದ್ಯಾರ್ಥಿನಿಯರಿಗೆ ಮೊಬೈಲ್ ನಂಬರ್ ಕೇಳಿ ಪಡೆಯುತ್ತಿದ್ದ. ಬಳಿಕ ವಾಟ್ಸಪ್ ಮೂಲಕ ದಿನ ನಿತ್ಯ ವಿದ್ಯಾರ್ಥಿನಿಯರಿಗೆ ಟಾರ್ಚರ್ ಮಾಡುತ್ತಿದ್ದ. ಲವ್ ಮಾಡು ಔಟಿಂಗ್‌ಗೆ ಹೋಗೋಣ ಮಜಾ ಮಾಡೋಣ ಅಂತ ಸಂದೇಶ ಕಳಿಸುತ್ತಿದ್ದ. ಆಚೆ ಬರದೆ ಹೋದ್ರೆ ಸರಿ ಇರುವುದಿಲ್ಲವೆಂದು ಬ್ಲಾಕ್ ಮೇಲ್ ಮಾಡುತ್ತಿದ್ದ.

ಬ್ಲಾಕ್ ಮೇಲ್ ಮಾಡಿ ಹಣವನ್ನ ಸಹ ಪೀಕಿದ್ದಾನೆ ಎಂಬ ಮಾಹಿತಿ ಸಿಕ್ಕಿದೆ. ಇನ್ನು ಚಾಮರಾಜನಗರದ ಎಸ್ಪಿ ಕಚೇರಿಯಲ್ಲಿ ಪ್ರೊಬೇಷನರಿ ಪಿಎಸ್‌ಐ ಆಗಿ ಜಗದೀಶ್ ಕಾರ್ಯನಿರ್ವಹಿಸುತ್ತಿದ್ದಾನೆ. ಮೈಸೂರಿನ ಖಾಸಗಿ ಕಾಲೇಜ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಮೂವರು ಗಿರಿಜನ ವಿದ್ಯಾರ್ಥಿನಿಯರಿಗೆ ಮೆಸೇಜ್ ಮಾಡಿ ಟಾರ್ಚರ್ ಮಾಡಿದ್ದಾನೆ. ಮೈಸೂರು ಜಿಲ್ಲಾ ಬುಡಕಟ್ಟು ಸೋಲಿಗ ಅಭಿವೃದ್ಧಿ ಸಂಘದವರು ಮೈಸೂರಿನ ಐಜಿ ಕಚೇರಿಗೆ ವಿದ್ಯಾರ್ಥಿನಿಯರ ಪರ ದೂರು ನೀಡಿದ್ದಾರೆ. ಚಾಮರಾಜನಗರ ಎಸ್‌ಪಿ ಕಚೇರಿಗೆ ತನಿಖೆ ನಡೆಸುವಂತೆ ಐಜಿ ಕಚೇರಿಯಿಂದ ತಾಕೀತು ಬಂದಿದೆ. ಸದ್ಯ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಅವರು ಚಾಮರಾಜನಗರ ಡಿವೈಎಸ್ಪಿಗೆ ತನಿಖೆ ಹೊಣೆ ನೀಡಿದ್ದಾರೆ.

## ಬಿಜೆಪಿಯ 1 ಪುಟದ ನೋಟಿಸ್‌ಗೆ 170 ಪುಟಗಳ ಉತ್ತರ ನೀಡಿದ್ದೇವೆ

**ಬೆಂಗಳೂರು:** ಬಿಜೆಪಿ ನೀಡಿದ 1 ಪುಟದ ನೋಟಿಸ್‌ಗೆ ನಾವು 170 ಪುಟಗಳ ಉತ್ತರ ನೀಡಿದ್ದೇವೆ ಎಂದು ರೆಬೆಲ್ ಬಿಜೆಪಿ ಶಾಸಕ ಎಸ್‌ಟಿ ಸೋಮಶೇಖರ್ ಹೇಳಿದ್ದಾರೆ.

ಸದಾಶಿವನಗರದಲ್ಲಿರುವ ಡಿಸಿಎಂ ಡಿಕೆ ಶಿವಕುಮಾರ್ ನಿವಾಸದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ನಮಗೆ ಬಿಜೆಪಿಯವರು ನೀಡಿದ್ದ ನೋಟಿಸ್‌ಗೆ ದೀರ್ಘ ಉತ್ತರ ನೀಡಿದ್ದೇವೆ. ಯಾವ್ಯಾವ ರಾಜ್ಯದಲ್ಲಿ ಕೋರ್ಟ್ ತೀರ್ಪು ಏನು ಬಂದಿದೆ? ಯಾವ್ಯಾವ ರಾಜ್ಯದಲ್ಲಿ ಬಿಜೆಪಿ ಇಂತಹ ವಿಚಾರದಲ್ಲಿ ಯಾವ ನಿರ್ಧಾರ ಕೈಗೊಂಡಿದೆ? ಎಲ್ಲಾ ದಾಖಲೆ ಸೇರಿಸಿ 170 ಪುಟಗಳ ಉತ್ತರ ಕೊಟ್ಟಿದ್ದೇವೆ ಎಂದು ತಿಳಿಸಿದರು.

ಶಿವರಾಂ ಹೆಬ್ಬಾರ್ ಪ್ರತಿಕ್ರಿಯಿಸಿ, ಸೋಮಶೇಖರ್ ಅವರದ್ದು ಅಡ್ಡ ಮತದಾನ. ನನ್ನದು ಮತದಾನಕ್ಕೆ ಗೈರು ನೋಟಿಸ್‌ಗೆ ಬೇರೆ ರೀತಿಯ ಉತ್ತರ ಕೊಟ್ಟಿದ್ದೇನೆ. ನನ್ನದು ಸೋಮಶೇಖರ್ ಉತ್ತರಕ್ಕಿಂತ 2 ಪುಟ ಕಡಿಮೆ ಇರಬಹುದು. ಆದರೆ ಎಲ್ಲಾ ದಾಖಲೆ ಸಹಿತ ಉತ್ತರ ಕೊಟ್ಟಿದ್ದೇನೆ ಎಂದು ಹೇಳಿದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಭೇಟಿಗೆ ಸದಾಶಿವನಗರ ನಿವಾಸಕ್ಕೆ ಬಿಜೆಪಿ ರೆಬೆಲ್ ಶಾಸಕರಾದ ಎಸ್.ಟಿ.ಸೋಮಶೇಖರ್ ಹಾಗೂ ಶಿವರಾಂ ಹೆಬ್ಬಾರ್ ಒಂದೇ ಕಾರಿನಲ್ಲಿ ಆಗಮಿಸಿದ್ದರು. ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ಸಂಬಂಧ ಡಿಸಿಎಂ ಭೇಟಿ ಮಾಡಿದ್ದೇವೆ ಎಂದು ಎಸ್‌ಟಿ ಸೋಮಶೇಖರ್ ಭೇಟಿ ಬಳಿಕ ಮಾಧ್ಯಮಗಳಿಗೆ ತಿಳಿಸಿದರು. ರಾಜ್ಯಸಭಾ ಚುನಾವಣೆಯಲ್ಲಿ ಸೋಮಶೇಖರ್ ಅಡ್ಡ ಮತದಾನ ಮಾಡಿದ್ದರೆ ಶಿವರಾಂ ಹೆಬ್ಬಾರ್ ಮತದಾನಕ್ಕೆ ಗೈರು ಹಾಜರಿ ಹಾಕಿದ್ದರು. ವಿಪ್ ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಕಾರಣ ಕೇಳಿ ನೋಟಿಸ್ ಜಾರಿ ಮಾಡಿತ್ತು.



Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com